# ಮದಗದ ಕೆಂಚಮ್ಮ

ಬಳ್ಳಕೆರೆ ಹನುಮಂತಪ್ಪ



ಕರ್ನಾಟಕ ಜಾನಪದ ಮತ್ತು
ಯಕ್ಷಗಾನ ಅಕಾಡಮಿ, ಬೆಂಗಳೂರು

*MADAGADA KENCHAMMA* (A Folk Narrative Verse)— Collected and Edited by Sri Ballekere Hanumanthappa, Published by Karnataka Janapada and Yakshagana Academy, Nrupathunga Road, Bangalore-2, pp.100. Price. Rs.25-00.

First Edition : 1994

ಹಕ್ಕುಗಳು : ಸಂಪಾದಕರವು

ಬೆಲೆ : ರೂ.೨೫-೦೦

ರಕ್ಷಾಪುಟದ ಕಲೆ : ಶ್ರೀಮತಿ ಲಲಿತ ಹೊಯ್ಸಳ

ಮುದ್ರಕರು : ಎ. ಜಿ. ಸುಬ್ರಹ್ಮಣ್ಯ
ವಾಣೀ ಪ್ರೆಸ್ :: ಚಾಮರಾಜಪುರಂ :: ಮೈಸೂರು 570 004

## ಪ್ರಧಾನ ಸಂಪಾದಕರ ಮಾತು

ಕನ್ನಡ ಜನಪದ ಕಾವ್ಯರಾಶಿಯಲ್ಲಿ ತ್ಯಾಗ-ಬಲಿದಾನದ ಕಥೆಗಳೇ ಹೆಚ್ಚು. ಸಮಾಜದ ಒಳಿತಿಗಾಗಿ, ಲೋಕಕಲ್ಯಾಣಾರ್ಥವಾಗಿ ತಮ್ಮ ಅಮೂಲ್ಯ ಜೀವವನ್ನೇ ಸಮರ್ಪಿಸಿದವರ ಬಗೆಬಗೆಯ ಕಥೆಗಳು ನಮ್ಮಲ್ಲಿ ಲಭ್ಯವಾಗುತ್ತವೆ. ಕೆಲವು ಐತಿಹ್ಯಗಳ ರೂಪದಲ್ಲಿ ಮತ್ತೆ ಕೆಲವು ಕಥನಕಾವ್ಯಗಳ ರೂಪದಲ್ಲಿ ಅಲ್ಲಲ್ಲಿ ಕಂಡುಬಂದಿವೆ. ಕೆರೆಗೆ ಆತ್ಮಾರ್ಪಣೆ ಮಾಡಿಕೊಂಡ ಮುಗ್ಧಬಾಲೆಯರ ಕಥೆಗಳು ಸಾಮಾನ್ಯವಾಗಿ ಎಲ್ಲ ದೊಡ್ಡ ಕೆರೆಗಳಿಗೂ ಸಂಬಂಧಪಟ್ಟಂತೆ ತೋರಿಬರುತ್ತವೆ. 'ಹೊನ್ನಮ್ಮ' ಅಥವಾ 'ಕೆಂಚಮ್ಮ' ಎಂಬ ಹೆಸರಿನ ಕಥಾನಾಯಕಿಯರು ವಿವಿಧ ಸನ್ನಿವೇಶಗಳ ಒತ್ತಡದಿಂದ ತನ್ನ ಪ್ರೀತಿಯ ವ್ಯಕ್ತಿಗಳನ್ನೆಲ್ಲ ತೊರೆದು ಗಂಗೆಯ ಪಾಲಾಗಿ ಒಡೆದುಹೋಗುವ ಕೆರೆಯನ್ನು ಉಳಿಸಿದ ವಿಶಿಷ್ಟ ಆಶಯದ ಹಿನ್ನೆಲೆಯಲ್ಲಿ ಈ ಕಥನ ಕಾವ್ಯಗಳು ರಚನೆಯಾಗಿವೆ. ಇವು ಬಹುಮಟ್ಟಿಗೆ ಕಾಲ್ಪನಿಕ ಕಥೆಗಳಾಗಿರದೆ, ನಿಜವಾಗಿ ನಡೆದ ಘಟನೆಗಳೇ ಆಗಿದ್ದವು ಎಂಬುದಕ್ಕೆ ಸಾಕಷ್ಟು ಆಧಾರಗಳೂ ಲಭ್ಯವಾಗುತ್ತವೆ. ಈ ಘಟನೆಗೆ ಜೀವಂತ ಸಾಕ್ಷಿಯಾಗಿ ಬಲಿದಾನಗೊಂಡ ಹೆಣ್ಣಿನ ಕೊಟ್ಟ ಮನೆಯವರು, ಹುಟ್ಟಿದ ಮನೆಯವರು ತಮ್ಮ ವಂಶದ ಹೆಣ್ಣುಮಗಳ ತ್ಯಾಗದ ಬಗ್ಗೆ ಹೆಮ್ಮೆಯಿಂದ ಹೇಳಿಕೊಳ್ಳುತ್ತ ಅವಳನ್ನು ದೇವತೆಯೆಂದು ಭಾವಿಸಿ ಪೂಜಿಸಿಕೊಂಡು ಬರುವ ನಿದರ್ಶನಗಳು ಹೆಚ್ಚಾಗಿ ಲಭ್ಯವಾಗುತ್ತವೆ. ಬಲಿದಾನಗೈದ ಹೆಣ್ಣಿನ ಹೆಸರಿನಲ್ಲಿ ಕೆರೆಯ ಏರಿಯ ಮೇಲೆ ಒಂದು ಸಾಧಾರಣ ದೇವಾಲಯ ನಿರ್ಮಾಣವಾಗಿ ಆಕೆಯ ಮೂರ್ತಿಯನ್ನು ಸ್ಥಾಪಿಸಲಾಗುತ್ತದೆ. ನಿರ್ದಿಷ್ಟ ದಿನಾಂಕ ಒಂದರಲ್ಲಿ ಆಕೆಯ ಪೂಜೆ ನಡೆಯುತ್ತದೆ. ಆಕೆಯ ಕಥೆಯನ್ನು ಹಾಡಬಲ್ಲ ಗಾಯಕರನ್ನೂ ಆಹ್ವಾನಿಸಲಾಗುತ್ತದೆ. ಆಹ್ವಾನಿತ ಶ್ರೋತೃಗಳ ಪುಟ್ಟ ಸಭೆಯಲ್ಲಿ ರಾತ್ರಿಯೆಲ್ಲಾ ಆ ಕಥೆಯ ಪಾರಾಯಣ ನಡೆಯುತ್ತದೆ. ಈ ಸಂಪ್ರದಾಯ ಎಲ್ಲ ಕಡೆಯಲ್ಲೂ ನಡೆದುಬಂದಿಲ್ಲವಾದರೂ ಕೆಲವು ಕಡೆ ಇದಕ್ಕೆ ವಿಶೇಷ ಸ್ಥಾನವಿರುವುದು ಕಂಡುಬಂದಿದೆ.

'ಕೆರೆಗೆ ಹಾರ' ಕಥನ ಕಾವ್ಯವನ್ನು ಶ್ರೀ ಬೆಟಗೇರಿ ಕೃಷ್ಣಶರ್ಮ ಅವರು ಪ್ರಕಟಿಸಿದ ಎಷ್ಟೋ ವರ್ಷಗಳ ಮೇಲೆ ಆ ಮಾದರಿಯ ಸುದೀರ್ಘ ರಚನೆಗಳು ಮುಂದಿನ ಪೀಳಿಗೆಯ ಸಂಗ್ರಹಕರಿಗೆ ಲಭ್ಯವಾದುವು. ಕರಾಕೃ (ವಡ್ಡರ ಬೋಯಿ, ಅಣಜಿ ಹೊನ್ನಮ್ಮ), ಜೀಶಂಪ (ಹುಳಿಯಾರು ಕೆಂಚಮ್ಮ), ಟಿ. ಎಸ್. ರಾಜಪ್ಪ (ಕೆರೆ ಹೊನ್ನಮ್ಮ) ಮುಂತಾದವರು ಸಂಗ್ರಹಿಸಿರುವ ಕಾವ್ಯಗಳು ಗಮನಾರ್ಹವಾಗಿವೆ. 'ಮದಗದ ಕೆಂಚಮ್ಮ' ಈ ಸಾಲಿಗೆ ಸೇರುವ ಒಂದು ಉತ್ತಮ ಕಥನ ಕಾವ್ಯವಾಗಿದೆ. ಇದೇ ಮಾದರಿಯ ಇನ್ನೂ ವಿಶಿಷ್ಟ ರೂಪಗಳು ಕನ್ನಡ ನಾಡಿನ ಬೇರೆಬೇರೆ ಕಡೆಗಳಲ್ಲಿ ಲಭ್ಯವಾಗಬಹುದು. ಈ ಬಗ್ಗೆ ಸೂಕ್ತವಾದ ಪರಿವೀಕ್ಷಣೆ ನಡೆಯುವುದು ಅಗತ್ಯವಾಗಿದೆ.

'ಮದಗದ ಕೆಂಚಮ್ಮ' ಕಾವ್ಯವನ್ನು ಸಂಗ್ರಹಿಸಿ, ಸಂಪಾದಿಸಿ ಕೊಟ್ಟಿರುವ ಶ್ರೀ ಬಳ್ಳಿಕೆರೆ ಹನುಮಂತಪ್ಪ ಅವರು ಈಗಾಗಲೇ ಜಾನಪದ ಕ್ಷೇತ್ರದಲ್ಲಿ ಸಾಕಷ್ಟು ಕೆಲಸ ಮಾಡಿದ್ದಾರೆ. ಪ್ರಕೃತ ಕಾವ್ಯದ ಸಂಗ್ರಹಕ್ಕಾಗಿ ಅವರು ಅಪಾರ ಶ್ರಮಪಟ್ಟಿದ್ದಾರೆ. ಈ ಕಾವ್ಯದ ಅಭ್ಯಾಸಕ್ಕೆ ಬೇಕಾಗುವ ಎಲ್ಲ ಪೂರಕ ಸಾಮಗ್ರಿಗಳನ್ನೂ ಅವರು ಟಿಪ್ಪಣಿಗಳ ರೂಪದಲ್ಲಿ ಒದಗಿಸಿದ್ದಾರೆ. ಇಂಥ ಅಚ್ಚುಕಟ್ಟಾದ ಸಂಪಾದನ ಕಾರ್ಯಕ್ಕಾಗಿ ಅವರು ಅಭಿನಂದನೆಗೆ ಪಾತ್ರರಾಗಿದ್ದಾರೆ. ಈ ಕೃತಿಯನ್ನು ಅಕಾಡಮಿಯಿಂದ ಪ್ರಕಟಿಸಲು ಒಪ್ಪಿ ಪಠ್ಯವನ್ನು ಸಿದ್ಧಗೊಳಿಸಿ, ವಿಸ್ತಾರವಾದ ಪ್ರಸ್ತಾವನೆಯನ್ನು ಒದಗಿಸಿ, ಛಾಯಾಚಿತ್ರಗಳನ್ನು ದೊರಕಿಸಿ ಅವರು ಉಪಕಾರ ಮಾಡಿದ್ದಾರೆ. ಶ್ರೀಯುತರಿಗೆ ಅಕಾಡಮಿಯ ಪರವಾಗಿ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ. ಈ ಕೃತಿಯನ್ನು ಅಂದವಾಗಿ ಅಚ್ಚುಮಾಡಿಕೊಟ್ಟ ವಾಣೀ ಪ್ರೆಸ್‌ನ ಶ್ರೀ ಎ. ಜಿ. ಸುವ್ರತೀಂದ್ರ ಅವರಿಗೂ ಮುಖಪುಟದ ಚಿತ್ರವನ್ನು ಅಂದವಾಗಿ ಬಿಡಿಸಿಕೊಟ್ಟ ಶ್ರೀಮತಿ ಲಲಿತ ಹೊಯ್ಸಳ ಅವರಿಗೂ ನಮ್ಮ ವಂದನೆಗಳು ಸಲ್ಲುತ್ತವೆ.

ಜೀ. ಶಂ. ಪರಮಶಿವಯ್ಯ

## ಅರಿಕೆ

ಹತ್ತು ವರ್ಷಗಳ ಹಿಂದೆಯೇ ಪ್ರಕಟಣೆಗೆ ಸಿದ್ಧವಾಗಿದ್ದ 'ಮದಗದ ಕೆಂಚಮ್ಮ' ಹತ್ತು ಹಲವಾರು ಕಾರಣಗಳಿಂದ ಬೆಳಕಿಗೆ ಬರಲಾಗಲಿಲ್ಲವಲ್ಲವೆಂಬ ವಿಷಾದವಿದ್ದರೂ, ಈಗ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡಮಿಯ ಕೃಪೆಯಿಂದ ಬೆಳಕಿಗೆ ಬರುತ್ತಿರುವ ಬಗ್ಗೆ ಸಮಾಧಾನವಾಗಿದೆ.

ಈ ಸಂಗ್ರಹವನ್ನು ಆಮೂಲಾಗ್ರವಾಗಿ ಓದಿ, ಇದೊಂದು ಉತ್ತಮ ಜನಪದ ಕಾವ್ಯವೆಂದೂ, ಸಂಗ್ರಹಯೋಗ್ಯಕಾರ್ಯವೆಂದೂ, ನನಗೆ ಸ್ಫೂರ್ತಿ ನೀಡಿ, ಪ್ರಕಟಿಸುವ ಸ್ತುತ್ಯಕಾರ್ಯವನ್ನು ಕೈಗೊಂಡು, ತಾವೇ ಖುದ್ದಾಗಿ ಕರಡನ್ನು ತಿದ್ದಿ, ರಕ್ಷಾಪುಟದ ಚಿತ್ರವನ್ನು ಕಾಳಜಿಯಿಂದ ಬರೆಯಿಸಿ, ಪುಸ್ತಕ ಅಂದವಾಗಿ ಮೈದಾಳಲು ಕಾರಣಕರ್ತರೂ, ಫಿನ್‌ಲ್ಯಾಂಡ್‌ನ ಅಂತರ್‍ರಾಷ್ಟ್ರೀಯ ಜಾನಪದ ಗೌರವ ಸದಸ್ಯತ್ವವನ್ನು ಪಡೆದ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಅಧ್ಯಕ್ಷರಾದ ಡಾ. ಜೀ. ಶಂ. ಪರಮಶಿವಯ್ಯನವರಿಗೆ ನಾನು ಅತೀವ ಕೃತಜ್ಞನಾಗಿರುತ್ತೇನೆ.

ನಾನು ಒಮ್ಮೆ ಚಿತ್ರದುರ್ಗ ಜಿಲ್ಲೆಯ (ಧಾರವಾಡ ಜಿಲ್ಲೆಯ ಅಂಚಿನಲ್ಲಿರುವ) ನನ್ನ ಮಾವನ ಊರಾದ ಅಣಬೇರಿಗೆ ಹಬ್ಬಕ್ಕೆಂದು ಹೋದಾಗ ಮೂರು ಜನ ಹೆಂಗಸರು 'ಮದಗದ ಕೆಂಚಮ್ಮ'ನನ್ನು ಕಳಶದಲ್ಲಿ ಇಟ್ಟುಕೊಂಡು ಮನೆಮನೆಗೂ ಹೋಗಿ 'ಕೆಂಚಮ್ಮನ ಹಾಡ್ಗತೆ'ಯನ್ನು ಹಾಡುವುದನ್ನು ನೋಡಿ ಮತ್ತು ಕೇಳಿ, ಈ ಮಹತ್ವದ ಕಥೆಯನ್ನು ಸಂಗ್ರಹಿಸಬೇಕೆಂಬ ಹಂಬಲದಿಂದ ಶಿವಮೊಗ್ಗೆಗೆ ಹಿಂದಿರುಗಿ—ಕ್ಷೇತ್ರ ಕಾರ್ಯವನ್ನು ನಿಯೋಜಿಸಿಕೊಂಡು ಸಜ್ಜಾದೆನು. ಹಾಡ್ಗತೆಗೆ ಪೂರಕವಾದ ಮದಗದ ಕೆರೆ ಶಿವಮೊಗ್ಗ ಜಿಲ್ಲೆಯ ಅಂಚಿನಲ್ಲಿದ್ದು ಧಾರವಾಡ ಜಿಲ್ಲೆಗೆ ನೀರು ಒದಗಿಸುವುದರಿಂದ ಹಾಗೂ ಚಿತ್ರದುರ್ಗ ಜಿಲ್ಲೆಯ ಅಂಚಿನಲ್ಲಿದ್ದುದರಿಂದ ಈ ಮೂರು ಜಿಲ್ಲೆಗಳಲ್ಲಿಯೂ ಈ ಕಥೆ ಹೇಳುತ್ತಾರೆಂದು ತಿಳಿದು, ಚಿತ್ರದುರ್ಗ ಜಿಲ್ಲೆಯ ಅಣಬೇರು ಗ್ರಾಮ, ಶಿವಮೊಗ್ಗ ಜಿಲ್ಲೆಯ ಚಿನ್ನಾಪುರ ಗ್ರಾಮ, ಧಾರವಾಡ ಜಿಲ್ಲೆಯ ಮಾಸೂರು ಗ್ರಾಮವನ್ನು ಆಯ್ದುಕೊಂಡು ಸತತ ಒಂದು ವರ್ಷದ ಶ್ರಮದಿಂದ ಈ ಹಾಡ್ಗತೆಯನ್ನು ಸಂಗ್ರಹಿಸಿರುತ್ತೇನೆ. ಈ ಮೂರು ಜಿಲ್ಲೆಗಳಲ್ಲಿ ಕೆಂಚವ್ವನ ಹಾಡ್ಗತೆಯನ್ನು ಮತ್ತು ಕೆಂಚವ್ವನ ನಾಟಕವನ್ನು ಆಡುತ್ತಾರೆ. ಹಾಡಾಗಲಿ, ನಾಟಕವಾಗಲಿ ತುಂಬಾ ವಿಧಿವತ್ತಾಗಿ ನಡೆಯುತ್ತದೆ. ಈ ಮೂರು ಜಿಲ್ಲೆಗಳಲ್ಲಿ ಹರಡಿರುವ ಕಥೆ ಅಲ್ಪಸ್ವಲ್ಪ ಬದಲಾವಣೆಯೊಂದಿಗೆ ಒಂದೇ ಆಗಿದೆ.

ಈ ಹಿಂದೆ ಶ್ರೀ ಎಂ. ಬಿ. ನಟರಾಜ್, ಶ್ರೀ ಎಸ್. ರಾಮಸ್ವಾಮಿಯವರು ಸಂಪಾದಿಸಿ, ಮೈಸೂರು ವಿಶ್ವವಿದ್ಯಾನಿಲಯದವರು ಪ್ರಕಟಿಸಿರುವ 'ಹಾಡಾಕೆ ಬೈಗುಂಟೆ

ಬೆಳಗುಂಟಿ' ಎಂಬ ಪುಸ್ತಕದಲ್ಲಿ ಮದಗದ ಕೆಂಚಮ್ಮನ ಹಾಡ್ಗತೆಯು ಒಂದು ಘಟನೆ ಮತ್ತು ಹೊಳಲಪ್ಪ (ಮಲಕಪ್ಪ) ಒಡ್ಡರನ್ನು ಕೆರೆ ಕಡಿಯಲು ವೀಳ್ಯ ಕೊಟ್ಟ ಘಟನೆ ಮಾತ್ರ ಪ್ರಕಟವಾಗಿದೆ.

ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸಿರುವ ಶ್ರೀಮತಿ ಸುಶೀಲಾ ಸೊಂಡೂರ್ ಅವರ 'ಸುವ್ವಿ ಸುವ್ವಮ್ಮ ಲಾಲಿ-ಸುವ್ವಲಾಲಿ' (೧೯೮೧) ಎಂಬ ಪುಸ್ತಿಕೆಯಲ್ಲಿ, ಅಲ್ಪ ಸ್ವಲ್ಪ ಬದಲಾವಣೆಯೊಂದಿಗೆ (ಹೆಸರುಗಳು) ಹಾಡ್ಗತೆಯೂ ಸಹ ವಿಭಿನ್ನವಾದ ರೀತಿಯಲ್ಲಿ ಮೈದಾಳಿದೆ.

ಬಾಸಂದೂರು ಕೆಂಪಯ್ಯ ಅವರು ಸಂಗ್ರಹಿಸಿ ಪ್ರಕಟಿಸಿರುವ 'ಚಂದುಳ್ಳಿ ಪದವ ಕಲಿಸವ್ವ (೧೯೭೭) ಎಂಬ ಪುಸ್ತಿಕೆಯಲ್ಲಿ 'ಮಾಯದಂತ ಮಳೆ ಬಂತಣ್ಣ ಮದಗಾದ ಕೆರೆಗೆ' ಎಂಬ ಹೆಚ್ಚು ಜನಪ್ರಿಯವಾಗಿರುವ ಹಾಡು ಪ್ರಕಟಗೊಂಡಿದೆ.

ಶ್ರೀ ಹಳ್ಳಪ್ಪ ಮು. ತಳವಾರ (ತಿಪ್ಪಾಯಿಕೊಪ್ಪ) ಇವರು 'ಮದಗದ ಕೆಂಚಮ್ಮ' ಎಂಬ ಗದ್ಯರೂಪದ ಕಿರುಹೊತ್ತಿಗೆಯನ್ನು ಪ್ರಕಟಿಸಿರುವರು. ಈ ಹೊತ್ತಿಗೆ ನನ್ನ ಸಂಗ್ರಹಕಾರ್ಯಕ್ಕೆ ಪೂರಕವಾಯಿತು. ಹಾಗಾಗಿ ಶ್ರೀ ಹಳ್ಳಪ್ಪ ಮಾಸ್ತರರ ಉಪಕಾರವನ್ನು ಮರೆಯಲಾರೆ.

ಅಂದಿನ ಜಾನಪದ ಅಕಾಡೆಮಿಯ ಅಧ್ಯಕ್ಷರಾಗಿದ್ದ ಜಾನಪದ ವಿದ್ವಾಂಸರಾದ ಶ್ರೀ ಹೆಚ್. ಎಲ್. ನಾಗೇಗೌಡರಿಗೆ ಈ ಕೆರೆಯನ್ನು ಮತ್ತು ಸುತ್ತಮುತ್ತಲಿನ ಐತಿಹಾಸಿಕ ಸ್ಥಳವನ್ನು ತೋರಿಸಲಾಯಿತು. ತುಂಬಿ ಸೂಸುವ ಕೆರೆಯನ್ನು ನೋಡಿದ ಶ್ರೀಯುತರು 'ಗಬ್ಬದ ಎಮ್ಮೆ ಮೈ ತುಂಬಿಕೊಂಡು ಮದಗುಡುತ್ತೈತೆ' ಎನ್ನುವ ಜಾನಪದದ ಮಾತಿನಂತೆ ತುಂಬಿ ತುಳುಕುವ ಈ ಕೆರೆಗೆ 'ಮದಗದ ಕೆರೆ' ಎಂದು ಹೆಸರು ಬಂದಿರಬಹುದೆಂದೂ ತಿಳಿಸಿದರಲ್ಲದೆ, ಈ ಸಂಗ್ರಹದಲ್ಲಿ ಬರುವ—'ಲಾವಂಗದಗುಳಿ ತಗಿ ಬಾರೆ', 'ತಿರುಪತಿ ಗುಡಿಯೊಳ ತೀರ್ಥಸೀ ಮಲಗೋ', 'ಗಂಡ ಗೂಳೀಶನ ಚೆಂಡೂವೇ ಮಲಗೋ' ಮುಂತಾದ ರೂಪಕಾಲಂಕಾರಗಳು ಬಂದಿರುವ ಬಗೆಯನ್ನು ಮೆಚ್ಚಿಕೊಂಡು, 'ಇದೊಂದು ಉತ್ತಮ ಜಾನಪದ ಸಂಗ್ರಹ' ಎಂದು ಒಳ್ಳೆಯ ಮಾತಿನ ಪ್ರೋತ್ಸಾಹ ನೀಡಿ ನನ್ನ ಬೆನ್ನು ತಟ್ಟಿರುತ್ತಾರೆ. ಹಾಗಾಗಿ ಶ್ರೀಯುತರಿಗೆ ನಾನು ಆಭಾರಿಯಾಗಿರುತ್ತೇನೆ.

ಕೆರೆಯನ್ನು ನೋಡಿ ತಣಿದ ನಂತರ ಮದಗ ಮಾಸೂರಿನ ಆತಿಥ್ಯ ಸ್ವೀಕರಿಸಲಾಯಿತು. ರಾತ್ರಿ ಮಾಸೂರಿನಲ್ಲಿ ಶ್ರೀ ನಾಗೇಗೌಡರ ಅಧ್ಯಕ್ಷತೆಯಲ್ಲಿ, ಕತ್ತಿಗಿ ಯುವರಾಜ್ ಅವರು ಕೆಂಚಮ್ಮನ ಹಾಡ್ಗತೆಯನ್ನು ಸುಶ್ರಾವ್ಯವಾಗಿ ಹಾಡಿ ಅಲ್ಲಿಯ ಜನಸಂದಣಿಯನ್ನು ತಣಿಸಿದ್ದನ್ನು ಕೃತಜ್ಞತೆಯಿಂದ ಸ್ಮರಿಸಿಕೊಳ್ಳುತ್ತೇನೆ.

ಸಂಶೋಧಕರಾದ ಡಾ. ಎಂ. ಚಿದಾನಂದಮೂರ್ತಿ ಅವರು ಈ ಹಾಡ್ಗತೆಯನ್ನು ಓದಿ ಮೆಚ್ಚಿದವರಲ್ಲದೆ, 'ಮದಗ' ಎಂಬ ಹೆಸರು ಈ ಕೆರೆಗೆ ಬರಲು ಕಾರಣವಾದ ಒಂದು ವಿಚಾರವನ್ನು ನನಗೆ ತಿಳಿಸಿದರು. 'ಚಿಕ್ಕಮಗಳೂರು ಜಿಲ್ಲೆಯಲ್ಲಿ ಸಹ



'ಮದಗದ' ಕೆರೆ ಇದೆ. ಮತ್ತು ಚಿಕ್ಕಮಗಳೂರು ಜಿಲ್ಲೆಯ 'ಹುಣಸಿಗಟ್ಟೆ' ಗ್ರಾಮದಲ್ಲಿ ಒಂದು ಕೆರೆಯ ತೂಬಿಗೆ 'ಮದಗ' ಎಂದು ಹೆಸರು ಇರುವುದಾಗಿಯೂ ಈ ಬಗ್ಗೆ ಸಂಶೋಧನೆ ನಡೆಯಬೇಕಾಗಿದೆ ಎಂದು ತಿಳಿಸಿರುತ್ತಾರೆ. ಹಾಗಾಗಿ ಈ ವಿದ್ವಾಂಸರಿಗೆ ನಾನು ಆಭಾರಿಯಾಗಿರುತ್ತೇನೆ.

ಒಂದೇ ಹೆಸರಿನ ಹಲವಾರು ಊರುಗಳಿರುವಂತೆ, ಒಂದೇ ಹೆಸರಿನ ಕೆರೆಗಳಿರುವುದು ನಿಜ. ಹಾಗೆಯೇ ರಾಜ್ಯದಲ್ಲಿರುವ ಅನೇಕ ಮದಗದ ಕೆರೆಗಳಲ್ಲಿ ಸಖರಾಯಪಟ್ಟಣದ (ಚಿಕ್ಕಮಗಳೂರು ಜಿಲ್ಲೆ) ಕೆರೆಯೂ ಒಂದು ನಿಜ. ಆದರೆ ಸಾಹಿತ್ಯಭರಿತವಾಗಿ ಪ್ರಸ್ತುತ ಹಾಡ್ಗತೆಯಲ್ಲಿ ಬರುವ ಮದಗದ ಕೆರೆಯು ಶಿವಮೊಗ್ಗ ಜಿಲ್ಲೆಯ ಅಂಚಿನಲ್ಲಿರುವ, ಮದಗ–ಮಾಸೂರಿನ ಬಳಿಯ ಮದಗದ ಕೆರೆ ಎಂಬುದು ನನ್ನ ಸ್ಪಷ್ಟ ಅಭಿಮತ.

ಒಟ್ಟಾರೆ ಮದಗದ ಕೆರೆಯು ತುಂಬಿತುಂಬಿ ತುಳುಕುವ ಹರವಿನಂತೆಯೇ ಈ ಕೆರೆ ಮತ್ತು ಕೆರೆಗೆ ಬಲಿದಾನವಾದ ಕೆಂಚಮ್ಮನ ಬಗ್ಗೆಯೂ ಬೃಹತ್ ಸಂಶೋಧನೆ ನಡೆಯಬೇಕಾಗಿದೆ—ಎಂಬುದು ನನ್ನ ಕಳಕಳಿಯ ವಿನಂತಿಯಾಗಿದೆ.

ಈ ಕೆರೆಯ ಸಂಕ್ಷಿಪ್ತ ಲೇಖನ 'ಮಾಯದಂಥ ಮಳೆ ಬಂದ ಮದಗದ ಕೆರೆ ಯಾವುದು ?' ಎಂಬುದನ್ನು ಪ್ರಜಾವಾಣಿ, ೧೩–೨–೧೯೮೩ರ ಸಾಪ್ತಾಹಿಕ ಪುರವಣಿಯಲ್ಲಿ ಪ್ರಕಟಿಸಿ ಉಪಕಾರ ಮಾಡಿದೆ. ಮತ್ತು 'ಹೆಣ್ಣಿನ ಬಲಿದಾನ ಮದಗದ ಕೆರೆಯ ಗಾನ' ಎಂಬ ತಲೆಬರಹದ ಲೇಖನವನ್ನು ಕನ್ನಡಪ್ರಭ ಮೇ ೨೯, ೧೯೮೩ ವಾಣ್ಮಯ ವಿಹಾರದಲ್ಲಿ ವಿಶೇಷ ಲೇಖನವನ್ನಾಗಿ ಪ್ರಕಟಿಸಿ ಪ್ರೋತ್ಸಾಹ ನೀಡಿದೆ. ಮುಖ್ಯವಾಗಿ ಈ ಹಾಡ್ಗತೆಯ ಕಿರುಪರಿಚಯವನ್ನೊಳಗೊಂಡ 'ಮದಗದ ಕೆರೆ' ಎಂಬ ಕಿರುಹೊತ್ತಿಗೆಯನ್ನು ಬೆಂಗಳೂರಿನ ಐ. ಬಿ. ಎಚ್. ಪ್ರಕಾಶನದ ಪರವಾಗಿ ಶ್ರೀ ಜಿ. ಕೆ. ಅನಂತರಾಮ್ ಅವರು ಪ್ರಕಟಿಸಿ ಮಹದುಪಕಾರ ಮಾಡಿರುವರು. ಹಾಗಾಗಿ ಇವರೆಲ್ಲರಿಗೂ ನಾನು ಋಣಿಯಾಗಿರುವೆನು.

ಶ್ರೀ ಕತ್ತಿಗಿ ಯುವರಾಜ್ (ಜಾನಪದ ಕೋಗಿಲೆ ಬಿರುದಾಂಕಿತ) ಇವರು ಶ್ರೀ ಅಬ್ಬಲಗೆರೆ ಅಬ್ಬಾಸ್ ಅವರೊಂದಿಗೆ ಈ ಹಾಡ್ಗತೆಯನ್ನು ಬಳಸಿಕೊಂಡು ಸುಂದರವಾದ ಜಾನಪದ ರೂಪಕವನ್ನು ರಚಿಸಿರುತ್ತಾರೆ.

'ಸೃಷ್ಟಿ ಕಲಾವಿದರು–ಶಿರಾಳಕೊಪ್ಪ'—ಇವರು ನಾಡಿನ ಪ್ರಮುಖ ನಗರಗಳಲ್ಲಿ, ರಾಜಧಾನಿ ಬೆಂಗಳೂರಿನಲ್ಲಿ ಮತ್ತು ಮುಖ್ಯವಾಗಿ ೧೯೯೧ರಲ್ಲಿ ದಾವಣಗೆರೆಯಲ್ಲಿ ನಡೆದ ಅಖಿಲ ಭಾರತ ೬೧ನೇ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ, ಈ ರೂಪಕವನ್ನು ಪ್ರದರ್ಶಿಸಿರುತ್ತಾರೆ.

ರೂಪಕದ ನಿರ್ದೇಶನ : ಶ್ರೀಮತಿ ಶೋಭಾ ರಾಮಕೃಷ್ಣ. ಹಾಡಿದವರು : ಡಾ॥ ಕಾವ್ಯಶ್ರೀ, ಬಿ. ಶ್ರೀವರ್ಷ, ಶ್ರೀ ಕತ್ತಿಗಿ ಯುವರಾಜ್, ಶ್ರೀ ಬಾಲಚಂದ್ರ ಉಡುಪ, ಶ್ರೀಮತಿ ಎಸ್. ಬಿ. ಶೋಭಾ—ಇವರಿಗೂ, ತಂಡದ ಮೇಲ್ವಿಚಾರಕರಾಗಿ ಸದಾ ಶ್ರಮಿಸುತ್ತಿರುವ ಶ್ರೀಮತಿ ಅಂಜನಾ ಗೋವಿಂದರಾಜು, ಶ್ರೀ ಎಸ್. ಬಿ. ಸುರೇಶ್,

ಶ್ರೀ ಎಸ್. ಬಿ. ರಮೇಶ್, ಹೊಸನಗರದ ತಹಶೀಲದಾರರಾಗಿರುವ ಶ್ರೀ ರಾಮಕೃಷ್ಣ, ಶಿವಮೊಗ್ಗೆಯ ಶ್ರೀ ರಾಜಶೇಖರ್, ಬೆಂಗಳೂರಿನ ಶ್ರೀ ಕಾಳಪ್ಪ, ಶ್ರೀಮತಿ ರವಿಕಲಾ ಕಾಳಪ್ಪ ಅವರಿಗೂ, ಶಿವಮೊಗ್ಗೆಯ ಮಿತ್ರ ಶ್ರೀ ಹಾ. ಮ. ಪ್ರಭಾಕರ ಅವರಿಗೂ ರೂಪಕದಲ್ಲಿ ಅಭಿನಯಿಸಿದ ಎಲ್ಲಾ ಕಲಾವಿದರುಗಳಿಗೂ, ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ನನಗೆ ನೆರವು ನೀಡಿದ ಎಲ್ಲರಿಗೂ ಕೃತಜ್ಞನಾಗಿರುತ್ತೇನೆ.

ಈ ಕೃತಿ ಅಂದವಾಗಿ ಬೆಳಕು ಕಾಣದ ಕಾರಣಕರ್ತರಾದ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಅಧ್ಯಕ್ಷರಾದ ಡಾ. ಜೀ. ಶಂ. ಪರಮಶಿವಯ್ಯನವರಿಗೂ, ರಿಜಿಸ್ಟ್ರಾರ್ ಶ್ರೀ ಎಂ. ಎಸ್. ಸಿದ್ಧೇಗೌಡರಿಗೂ, ಅಕಾಡೆಮಿಯ ಎಲ್ಲಾ ಸದಸ್ಯರಿಗೂ ನೌಕರ ವೃಂದದವರಿಗೂ, ನಾನು ಆಭಾರಿಯಾಗಿರುತ್ತೇನೆ.

**ಬಳ್ಳೇಕೆರೆ ಹನುಮಂತಪ್ಪ**
ಅಧ್ಯಕ್ಷ
ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು

ಕನ್ನಡಶ್ರೀ, ಸರ್ವಜ್ಞ ವೃತ್ತದ ಬಳಿ
ಶಿವಮೊಗ್ಗ



ಮದಗದ ಕೆಂಚಮ್ಮನ ಶಿಲಾ ಮೂರ್ತಿ




ಮದಗದ ಕೆರೆ ತುರುಬಿಗುಡ್ಡ ಮತ್ತು ಗೋಬ್ರಗುಡ್ಡಗಳು ಕೆರೆಗೆ ಸ್ವಾಭಾವಿಕ ಒಡ್ಡಾಗಿರುವ ನೋಟ
ತುರುಬಿಗುಡ್ಡದ ತುದಿಯಲ್ಲಿ ಬ್ರಹ್ಮದ ಕಲ್ಲಿನ ಕೋಟೆಯನ್ನು ಕಾಣಬಹುದಾಗಿದೆ.



ಮದಗದ ಕೆರೆಯ ಸುಂದರ ದೃಶ್ಯ



ಮದಗದ ಕೆರೆಯ ಎಡ-ಬಲ ನಾಲೆಗಳು ಆರಂಭವಾಗುವ ಸ್ಥಳ



ಅದ್ಭುತವಾಗಿರುವ ಕತ್ತರಿ ತೂಬು



ಮದಗದ ಕೆರೆಯ ಮೇಲಿರುವ ಕೆಂಚಮ್ಮನ ಇಂದಿನ ದೇವಾಲಯ




ಐಭೋಗದ ಮದಗದ ಕೆರೆಯಲ್ಲಿ ಶ್ರಾವಣ ಮಾಸದಲ್ಲಿ ಕೆರೆಯ ಗಂಗಮ್ಮನಿಗೆ ಭಕ್ತರಿಂದ ಪೂಜೆ



ಕೆಂಚಮ್ಮನ ವಂಶದ ಬಗ್ಗೆ ಹೆಚ್ಚಿನ ಮಾಹಿತಿ ಪಡೆದ ಕೆಂಚಮ್ಮನ ಕುಟುಂಬದವರು



ಕೆಂಚವ್ವನ ಮಾವನ ಮನೆಯಲ್ಲಿ ಮಳೆಗಾಗಿ ಪೂಜಿಸಲ್ಪಡುತ್ತಿರುವ 'ಶಂಖಲಿಂಗ'



ಕ್ರಾಂತಿವೀರ ಕನ್ನಡ ಕವಿ ಸರ್ವಜ್ಞ ಓಡಾಡಿದ ಮಾಸೂರ ಬೀದಿಯಲ್ಲಿ ಸಂಪಾದಕರು

# ಪ್ರಸ್ತಾವನೆ

## ೧. ಐತಿಹ್ಯ ಮತ್ತು ಇತಿಹಾಸದ ಒಂದು ನೋಟ

"ಮಾಯದಂಥ ಮಳೆ ಬಂತಣ್ಣ ಮದಗಾದ ಕೆರೀಗೆ" ಎಂಬ ಜಾನಪದ ಹಾಡು ಇದೀಗ ಕರ್ನಾಟಕ ನಾಡಿನ ಉದ್ದಗಲಕ್ಕೂ ಮರುಧ್ವನಿಸುತ್ತಿದೆ. ಆದರೆ 'ಮದಗದ ಕೆರೆ' ಯಾವ ಜಿಲ್ಲೆಯಲ್ಲಿದೆ? ಇದು ಬರೀ ಐತಿಹ್ಯವೆ? ಐತಿಹಾಸಿಕವೆ? ಎಂಬುದರ ಬಗ್ಗೆ ಸಂಶೋಧನೆ ಸಾಗಬೇಕಾಗಿದೆ.

ಶಿವಮೊಗ್ಗ, ಚಿತ್ರದುರ್ಗ ಮತ್ತು ಧಾರವಾಡ ಜಿಲ್ಲೆಗಳಲ್ಲಿ ಸಂಚರಿಸಿ ಸುಮಾರು ಒಂದು ವರ್ಷದ ಶ್ರಮದಿಂದ 'ಮದಗದ ಕೆರೆ'ಗೆ ಸಂಬಂಧಿಸಿದಂತೆ 'ಮದಗದ ಕೆಂಚಮ್ಮ' ಎಂಬ ಸುದೀರ್ಘ ಹಾಡ್ಗತೆಯನ್ನು ಸಂಪಾದಿಸಿರುತ್ತೇನೆ. ಈ ಮೂರು ಜಿಲ್ಲೆಗಳಲ್ಲಿ ಇರುವ ಜನಪದರು ಹಾಡಿರುವ ಗೀತೆಯಲ್ಲಿ ಹೆಚ್ಚುಕಡಿಮೆ ಒಂದೇ ರೀತಿಯ ಕಥೆ ಬರುತ್ತದೆ.

ಈ ಹಾಡ್ಗತೆಯ ಪ್ರಕಾರ ಮದಗದ ಕೆರೆ ಶಿವಮೊಗ್ಗ ಜಿಲ್ಲೆಯ ಅಂಚಿನಲ್ಲಿದೆ. ಇದರ ಸುತ್ತಮುತ್ತಲಿರುವ ಊರು ಕೇರಿಗಳು ಸತ್ಯಕ್ಕೆ ಹತ್ತಿರದಲ್ಲಿವೆ.

ಆ ಕಡೆ ಕೊಡಮುಗೆ ಈ ಕಡೆ ಕಿಟ್ಟದಳ್ಳಿ
ಮಾಸೂರ ಎಡಕೆ ಮದಗಾವೆ । ಕೋಲು ಕೋಲೆ ।

ಹಾಗಾಗಿ ಕೆರೆಯು ಶಿವಮೊಗ್ಗ ಜಿಲ್ಲೆಯ ಅಂಚಿನಲ್ಲಿದ್ದು, ಧಾರವಾಡ ಜಿಲ್ಲೆಯ (ಸರ್ವಜ್ಞನ) ಮಾಸೂರಿನ ಎಡಕ್ಕೆ ಇದ್ದು 'ಮದಗ_ಮಾಸೂರು' ಎಂಬ ಜೋಡಿ ಹೆಸರಿನಿಂದ ಖ್ಯಾತಿ ಪಡೆದಿದೆಯಲ್ಲದೆ, ಧಾರವಾಡ ಜಿಲ್ಲೆಯ ಹಿರೇಕೆರೂರು ತಾಲ್ಲೂಕಿನ ರಟ್ಟಿಹಳ್ಳಿ ಪುಟ್ಟನಗೌಡನ ಹಿರಿಯ ಮಗಳಾದ ಕೆಂಚವ್ವ, ಮಾಸೂರಿನ ಮಲ್ಲನಗೌಡನ ಸೊಸೆಯಾಗಿ ಬಂದು, ತನ್ನ ಮಾವ ಮಲ್ಲನಗೌಡ ಕಟ್ಟಿಸಿದ ಮದಗದ ಕೆರೆಗೆ ಹಾರವಾಗಿ ನೀರು ತಂದ ವಿಷಯ, ಹಾಡ್ಗತೆಯಲ್ಲಿ ಬರುವುದನ್ನು ಸ್ಪಷ್ಟಪಡಿಸುವುದರಿಂದ, ಪ್ರಸಿದ್ಧ ಹಾಡಿನ ಮದಗದ ಕೆರೆ, ಐತಿಹ್ಯದಿಂದ ಇತಿಹಾಸಕ್ಕೆ ತೀರ ಸಮೀಪವಾಗಿದೆ.

ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲ್ಲೂಕು ಧಾರವಾಡ ಜಿಲ್ಲೆಯ ಹಿರೇಕೆರೂರು ತಾಲ್ಲೂಕು ನಡುವೆ ಹರಡಿರುವ ಗಡಿರೇಖೆ ಮದಗದ ಕೆರೆಯ ಮೇಲೆ ಹಾದು ಹೋಗಿ, ಜಲಾಶಯ ಶಿವಮೊಗ್ಗ ಜಿಲ್ಲೆಯಲ್ಲಿಯೂ, ನೀರಾವರಿ ಪ್ರದೇಶ ಧಾರವಾಡ ಜಿಲ್ಲೆಯಲ್ಲಿಯೂ ಇರುವಂತೆ ಮಾಡಿದೆ. ಶಿಕಾರಿಪುರದಿಂದ ಪೂರ್ವೋತ್ತರವಾಗಿ ಸುಮಾರು ೧೪ ಕಿ.ಮೀ. ದೂರದಲ್ಲಿದೆ. ಶಿವಮೊಗ್ಗದಿಂದ ಶಿಕಾರಿಪುರ ಮಾರ್ಗವಾಗಿ

ಖವಸಾಪುರ ಹಳ್ಳಿಯವರೆವಿಗೆ ಬಸ್ಸಿನಲ್ಲಿ ಪ್ರಯಾಣಮಾಡಿ, ಖವಸಾಪುರದಿಂದ ಎರಡು ಫರ್ಲಾಂಗ್ ನಡೆದುಹೋದಲ್ಲಿ (ವಿಶೇಷ ಬಸ್ ಅಥವಾ ಟ್ಯಾಕ್ಸಿಯಲ್ಲಿ ಹೋಗಲು ಕೆರೆಯುವರೆವಿಗೂ ರಸ್ತೆಯಿದೆ) ಕೆರೆ ಸಿಗುವುದು. ಧಾರವಾಡ ಜಿಲ್ಲೆಯ ಹಿರೇಕೆರೂರಿನಿಂದ ಮಾಸೂರಿಗೆ, ರಾಣೆಬೆನ್ನೂರಿನಿಂದ ಮಾಸೂರಿಗೆ, ಮಾಸೂರಿನಿಂದ ಮುದಗಕ್ಕೆ ಹೋಗಲು ಉತ್ತಮ ರಸ್ತೆಯಿದೆ. ಮಾಸೂರಿನ ಅಂಚಿನಲ್ಲಿರುವ ತಿಪ್ಪಾಯಿಕೊಪ್ಪ ಗ್ರಾಮದಿಂದ ಇಕ್ಕೆಡೆಗಳಲ್ಲೂ ಮಾವಿನಮರಗಳ ತಂಪಿನಲ್ಲಿರುವ ಬಲದಂಡೆ ಕಾಲುವೆಯ ಮೇಲೆ ಸುಮಾರು ೧ ೧/೨ ಕಿ.ಮೀ. ಸಾಗಿದರೆ, ಕೆರೆಯ ಹಿನ್ನೆಲೆಯ ಸುರಮ್ಯನೋಟ ಕಾಣ ಸಿಗುತ್ತದೆ.

ಮುದಗಡ ಜಲಾಶಯುವು ದಟ್ಟವಾದ ಕಾಡಿನ ಮಧ್ಯದಲ್ಲಿರುವ ಸಹ್ಯಾದ್ರಿ ಶಾಖೆಯ ಬೆಟ್ಟಗಳಾದ ತುರುಬಿ (ತುರುಬಿನಾಕೃತಿಯಲ್ಲಿರುವ) ಗುಡ್ಡ ಮತ್ತು ಗೋವಿ (ಗೋವಿನಾಕೃತಿಯಲ್ಲಿರುವ) ಗುಡ್ಡಗಳಿಗೆ ಹಾಕಲಾದ ವಡ್ಡಿನಿಂದ ನಿರ್ಮಾಣವಾಗಿದೆ. ಈಗ ಅರಣ್ಯವು ನಾಶವಾಗಿ ಸ್ವಲ್ಪ ಮಾತ್ರ ಉಳಿದಿದೆ. ಅಗಸ್ತ್ಯ ಪರ್ವತದಲ್ಲಿ ಹರಿದು, ಮುದಗಡ ಕೆರೆಗೆ ನೀರನ್ನೊದಗಿಸಿ, ಗುಡ್ಡವನ್ನೇ ಒಡೆದು ಮೂರು ಫರ್ಲಾಂಗ್ ಮುಂದೆ ಸಾಗಿ, ತಿಪ್ಪಾಯಿಕೊಪ್ಪ, ಮಾಸೂರನ್ನು ಸುತ್ತಿಕೊಂಡು, ರಟ್ಟೆಹಳ್ಳಿಯ ಮುಂದೆ ಅಟ್ಟಹಾಸದಿಂದ ಹರಿದ ಹೊಳೆ ಅನ್ವೇರಿ ಹತ್ತಿರ, ತುಂಗಭದ್ರಾ ನದಿಯನ್ನು ಸೇರುತ್ತದೆ, ಕುಮುದ್ವತಿ.

ವಿಜಯನಗರ ರಾಜರ ಕಾಲದಿಂದಲೂ ಈ ಕೆರೆ ಇದೆ ಎಂದು ನಂಬಲಾಗಿದ್ದು, ಇದನ್ನು ವಿಜಯನಗರದ ಅರಸ ವೀರ ನರಪತಿ ಕೃಷ್ಣರಾಯನು ೧೫೬೫ ರಲ್ಲಿ ಕಟ್ಟಿಸಿದನೆಂದು ಹೇಳಲಾಗುತ್ತಿದೆ? ಈ ಬಗ್ಗೆ ಖಚಿತ ಸಂಶೋಧನೆ ನಡೆಯಬೇಕಾಗಿದೆ.

ಇಲ್ಲಿರುವ ಅರೆಬಿಕ್ ಶಿಲಾಶಾಸನದ ಪ್ರಕಾರ ಒಮ್ಮೆ ಕೆರೆಯು ಸವಣೂರು ನವಾಬನಿಂದ ರಿಪೇರಿ ಮಾಡಲ್ಪಟ್ಟಿತ್ತೆಂದು ತಿಳಿದುಬರುತ್ತದೆ. ಕೆರೆಯ ಹಿಂಭಾಗದ ಮುಖ್ಯ ಸುರಂಗಮಾರ್ಗ ಸುಮಾರು ೮೫೦ ಅಡಿ ಉದ್ದವಾಗಿದೆ. ಈ ಸುರಂಗದ ಕಟ್ಟಡದ ಮೇಲೆ—ಸಂಸ್ಕೃತ, ಇಂಗ್ಲಿಷ್ ಮತ್ತು ಕನ್ನಡದಲ್ಲಿ ಶಿಲಾಶಾಸನಗಳಿವೆ. ಈ ಶಾಸನಗಳಲ್ಲಿ, ಕನ್ನಡ ಶಾಸನ ಸ್ಪಷ್ಟವಾಗಿಲ್ಲದ ಕಾರಣ ಇಂಗ್ಲಿಷ್ ಶಾಸನವನ್ನು ಉಲ್ಲೇಖಿಸಲಾಗಿದೆ.

The water in this tank had been locked up for many years, when by building this sluice, it was brought out to fertilize the lands of locality and adjacent villages.

The whole work was designed and executed by Captain Playfain, Executive Engineer Dharwar and Mr. Vittal Bhavana, Sub Engineer after overcoming many difficulties. it was completed in the year 1862 at the expence of the English Gvernment.



ಈ ಶಾಸನದ ಪ್ರಕಾರ ಕೆರೆಯ ನೀರು ಬಹಳ ಕಾಲ ಉಪಯೋಗವಾಗಿರಲಿಲ್ಲ. ಅಂದಿನ ಇಂಗ್ಲಿಷ್ ಸರ್ಕಾರದಲ್ಲಿ, ಧಾರವಾಡದ ಎಕ್ಸಿಕ್ಯೂಟಿವ್ ಎಂಜಿನಿಯರ್ ಆಗಿದ್ದ ಕ್ಯಾಪ್ಟನ್ ಪ್ಲೇಫೆನ್ ಮತ್ತು ಸಹಾಯಕ ಎಂಜಿನಿಯರಾಗಿದ್ದ ಮಿಸ್ಟರ್ ವಿಠಲ್ ಭವಾನಿ ಇವರುಗಳ ನೇತೃತ್ವದಲ್ಲಿ ಮುಖ್ಯ ಸುರಂಗಮಾರ್ಗ ಮತ್ತು ನಾಲೆಗಳು ೧೮೬೨ರಲ್ಲಿ ಪುನಃ ಜೀರ್ಣೋದ್ಧಾರವಾಗಿ, ಧಾರವಾಡ ಜಿಲ್ಲೆಯ ಹಲವಾರು ಹಳ್ಳಿಗಳ ಜಮೀನಿಗೆ ನೀರಾವರಿಯ ನೆರವು ನೀಡಲಾಯಿತೆಂದು ತಿಳಿದುಬರುತ್ತದೆ.

ಮುದಗಡ ಕೆರೆಯ ತೂಬಿಗೆ ದೊಡ್ಡ ಏಕಶಿಲಾಸ್ತಂಭವನ್ನು ಎತ್ತಿ ಇರಿಸಿರುವುದನ್ನು ವಿಜಯನಗರದ ರಾಜರು ಮತ್ತು ಆಸ್ಥಾನಿಕರು (೧೩೩೬–೧೫೬೫)ಪ್ರತ್ಯಕ್ಷವಾಗಿ ವೀಕ್ಷಿಸಿರುವರೆಂದು ಹೇಳಲಾಗಿದೆ. ಕೆರೆಯ ತೂಬುಗಳನ್ನು, ಹಳೆಯ ತೂಬುಗಳನ್ನು ರಚಿಸುವ ತತ್ವದಂತೆಯೇ ಜಲಾಶಯದಿಂದ ಹೊರಹರಿದ ಆಯಾಕಾರದ ಕಾಲುವೆಯನ್ನು ಮರದ ಬಿರುಟೆಗಳನ್ನು ಜೋಡಿಸಿದ ರಂಧ್ರಯುಕ್ತ ಶಿಲೆಗಳಿಂದ ಮುಚ್ಚಲಾಗಿದೆ. ಬಿರುಟೆಯ ಮೇಲೆ ಉಪಯೋಗಿಸುತ್ತಿದ್ದ ಸಣ್ಣ ಶಿಲಾಸ್ತಂಭಗಳಿಗೆ ಬದಲಾಗಿ, ಇಲ್ಲಿ ಒಂದೊಂದು ೨೦ ಟನ್ ತೂಕವಿರುವ ಏಕಶಿಲಾಸ್ತಂಭಗಳನ್ನು ಬಳಸಲಾಗಿದೆ. ಮೇಲಿನ ತೂಬುಗಳನ್ನು ಅಳವಡಿಸುವಾಗ ಸಂಪ್ರದಾಯಬದ್ಧವಾದ ನರಬಲಿಯ ಪ್ರಸಂಗ ಹೆಣೆದುಕೊಂಡಿದೆ. ಕೆರೆಯನ್ನು ಕಟ್ಟುವಾಗ ಅನೇಕ ದಿನಗಳವರೆಗೆ ಕೆಲಸಗಾರರ ಕೆಲಸಗಳೆಲ್ಲಾ ನಿಷ್ಫಲವಾದವು. ಕೊನೆಗೆ ಆ ಕ್ಷೇತ್ರದೇವಿಕೆಯು ಕೋಪಗೊಂಡಿರುವಳೆಂದೂ ಮತ್ತು ಅವಳಿಗೆ ಒಬ್ಬಳು ಕನ್ನಿಕೆಯನ್ನು ಬಲಿ ಕೊಡುವವರೆವಿಗೆ ಆ ಕಂಬಗಳನ್ನು ಏರಿಸಲು ಬಿಡುವುದಿಲ್ಲವೆಂದು ತಿಳಿದುಬಂದಿತು. ಆ ಕೆರೆಯ ಕಲ್ಲುಕುಟಿಗರ ಮುಖ್ಯಸ್ಥನ ಮಗಳಾದ ಲಕ್ಷ್ಮಿಯು ತನ್ನನ್ನೇ ಬಲಿಯನ್ನಾಗಿ ಒಪ್ಪಿಸಿಕೊಂಡಳು ಮತ್ತು ಸಜೀವವಾಗಿ ಅವಳನ್ನೂ ಶಿಲಾಸ್ತಂಭವನ್ನೇರಿಸುವ ಸ್ಥಳದಲ್ಲಿ ಸಮಾಧಿ ಮಾಡಲಾಯಿತು. ಆ ದೇವತೆಯು ತೃಪ್ತಳಾದಳು ಮತ್ತು ಯಾವ ಅವಘಡವೂ ನಡೆಯದೆ ಆ ಸ್ಥಳದಲ್ಲಿ ಕಂಬವನ್ನು ಏರಿಸಲಾಯಿತು. ಲಕ್ಷ್ಮಿಯ ಗೌರವಾರ್ಥವಾಗಿ ಆ ತೂಬು ಒಂದು ದೇವಾಲಯವಾಯಿತು.

ಅಂದಿನ ಕಾಲದ ಅದ್ಭುತಗಳಲ್ಲಿ ಇದು ಒಂದಾಗಿದ್ದು, ಅನೇಕರು ಈ ಕೆರೆಯ ನಿರ್ಮಾಣ ಕಾರ್ಯವನ್ನು ನೋಡಲೆಂದೇ ಬರುತ್ತಿರುತ್ತಾರೆ. ಈ ಕೆರೆಯು ನಾಲ್ಕು ಭಾರಿ ತೂಬುಗಳನ್ನು ಹೊಂದಿದ್ದು, ಅವುಗಳಲ್ಲಿ ಮಧ್ಯಕೆರೆಯಲ್ಲಿರುವ ಹದಿನಾರು ಕಲ್ಲಿನ ಅದ್ಭುತ ಚಮತ್ಕಾರದ 'ಕತ್ತರಿ ತೂಬು' ಬಹಳ ಮುಖ್ಯವಾಗಿದೆ. ಈ ತೂಬಿಗೆ ಮೂರು ಕಡೆಯಿಂದ ನೀರು ಬರುವ ವ್ಯವಸ್ಥೆಯಿದ್ದು, ಒಂದು ಅಂಗುಲಕ್ಕಿಂತ ದೊಡ್ಡದಾದ ಯಾವ ವಸ್ತುವೇ ಈ ತೂಬಿನಲ್ಲಿ ಬಂದಾಗ ಅದು ತಕ್ಷಣ ಕತ್ತರಿಸಿ ನೀರನ್ನು ಸುಗಮವಾಗಿ ಹರಿಯಬಿಡುತ್ತದೆ. ಹಾಗಾಗಿ ಈ ತೂಬನ್ನು 'ಕತ್ತರಿ ತೂಬು' ಎಂದು ಕರೆಯುತ್ತಾರೆ. ಈ ತೂಬಿನ ಎರಡು ಕಡೆಗಳಲ್ಲಿ ಉಬ್ಬುಶಿಲೆಯ ಎರಡು ಸುಂದರ ಸಿಂಹಗಳು ಕೆತ್ತಲ್ಪಟ್ಟಿವೆ. ಸಿಂಹಗಳ ತಲೆಯ ಮೇಲುಭಾಗದಲ್ಲಿ ಅರೆಬಿಕ್ ಲಿಪಿಯ ಶಾಸನವಿದೆ. ತೂಬಿನ ಮೇಲೆ ಸುಂದರ ನಂದಿಯನ್ನು ಸ್ಥಾಪಿಸಲಾಗಿದೆ.

ಈ ನಂದಿ ಸ್ಥಾಪನೆ ಮತ್ತು ಕೆರೆಗೆ ನೀರು ಬಂದ ಬಗ್ಗೆ ಅಲ್ಲಿಯ ಜನರು ಹೇಳುವ ಐತಿಹ್ಯವಿದು :

ಕೈಲಾಸದಲ್ಲಿ ಶಂಕರ, ನಂದಿ, ರೇಣುಕಾಚಾರ್ಯರು ಕುಳಿತಿದ್ದರು. ಅಷ್ಟರಲ್ಲಿ ನಾರದರು ಭೂಲೋಕದಿಂದ ಬಂದು "ದೇವಾ! ಭೂಲೋಕದಲ್ಲಿಯ ಸಹ್ಯಾದ್ರಿಶಾಖೆಯ ತುರುಬಿನ ಗುಡ್ಡ, ಗೋವಿನ ಗುಡ್ಡಗಳ ಇಕ್ಕಟ್ಟಿನ ಅರಣ್ಯದಲ್ಲಿರುವ ಕೆರೆಯಲ್ಲಿ ಇಬ್ಬರು ರಾಕ್ಷಸರು ಜನ ಪ್ರಾಣಿಗಳಿಗೆ ಭಾರಿ ತೊಂದರೆ ಕೊಡುತ್ತಿರುವರು. ದೇವಾ ! ಪತಿಪತ್ನಿಯರಾದ ಆ ರಾಕ್ಷಸರನ್ನು ಕೊಂದು, ಅಲ್ಲಿಯ ಜನ ಹಾಗೂ ಪ್ರಾಣಿಗಳನ್ನು ರಕ್ಷಿಸು" ಎಂದು ಬೇಡಿಕೊಂಡನು. ಶಂಕರನು ಆ ರಾಕ್ಷಸನನ್ನು ಕೊಲ್ಲಲು ರೇಣುಕರನ್ನು ಭೂಲೋಕಕ್ಕೆ ಕಳುಹಿಸಿದನು.

ವಸಂತ, ಮಾಧವರೆಂಬ ಸಣ್ಣ ಬಾಲಕರು ದನ ಕಾಯಲಿಕ್ಕೆ ಹೋಗಿದ್ದರು. ದನಗಳು ಮೇಯುತ್ತ ಗೋವಿನ ಗುಡ್ಡದ ತುದಿಗೆ ಹೋದಾಗ ಅಲ್ಲಿದ್ದ ರಾಕ್ಷಸರು ದನ ಮತ್ತು ಬಾಲಕರನ್ನು ತಿನ್ನಲು ಧಾವಿಸಿದರು. ಅದೇ ಸಮಯಕ್ಕೆ ರೇಣುಕರು ಅಲ್ಲಿಗೆ ಬಂದು ರಾಕ್ಷಸರನ್ನು ತಮ್ಮ ಕೈಯಲ್ಲಿಯ ತ್ರಿಶೂಲದಿಂದ ತಿವಿದು ಕೊಂದರು. ನೆಲದ ಮೇಲೆ ಬಿದ್ದ ರಕ್ಕಸರು ಜೀವನ ಮುಕ್ತಿಯನ್ನು ಪಡೆಯಲು ಬೇಡಿದಾಗ, ರೇಣುಕರು "ನೀವು ಮನುಷ್ಯ, ಪ್ರಾಣಿಗಳನ್ನು ತಿಂದು ಅಡ್ಡಾಡಿ ಈ ಕೆರೆಯ ನೀರನ್ನು ಕುಡಿದಿದ್ದರಿಂದ, ನೀರು ಅಪವಿತ್ರವಾಗಿದೆ. ಆದ್ದರಿಂದ ನೀನು ಮಾಸೂರು ಮಲ್ಲನಗೌಡನ ಹೊಟ್ಟೆಯಲ್ಲಿ ಗೂಳೇಶನಾಗಿ, ನಿನ್ನ ಪತ್ನಿ ರಟ್ಟೀಹಳ್ಳಿ ಪುಟ್ಟನಗೌಡ್ರ ಹೊಟ್ಟೆಯಲ್ಲಿ ಕೆಂಚಮ್ಮಳಾಗಿ ಹುಟ್ಟಿ, ನೀವಿಬ್ಬರೂ ಸತಿ–ಪತಿಗಳಾಗಿ, ನಿನ್ನ ಹೆಂಡತಿ ಕೆಂಚಮ್ಮಳಿಂದ ಈ ಕೆರೆ ಜಲಮಯವಾಗಬೇಕು. ಆಗ ಗಂಗೆಯ ಸಹಾಯದಿಂದ ನಮ್ಮಲ್ಲಿಗೆ ಬಂದಾಗ ನಿಮಗೆ ಜೀವನ್ಮುಕ್ತಿ" ಎಂದು ಹೇಳಿದರು. ಆ ರಾಕ್ಷಸರಿಬ್ಬರೂ, ಎರಡು ಕಬ್ಬಿಣದ ಗುಂಡುಗಳಾಗಿ ಗಟ್ಟಿಯಾದರು. ಅವೆರಡನ್ನೂ ಕಾಯಿಸಿದ ಜಾಗವೇ–'ಖವಸಾಪುರ'ವಾಯಿತು. ಗುಂಡುಗಳು ಕಿಡಿ ಸಿಡಿದು ಬಿದ್ದುದರಿಂದ 'ಕಿಟ್ಟದಹಳ್ಳಿ'ಯಾಯಿತು. ಎಷ್ಟು ಬಡಿದರೂ ಹೀಚಲಿಲ್ಲ. ಸುರಗಿಹಳ್ಳಿಯ ಹತ್ತಿರ ಒಯ್ದು ಬಡಿಯಹತ್ತಿದಾಗ ಒಂದು ಮೊಲವು ಬಂದಿತು. ಮೊಲವನ್ನು ಕಂಡಕೂಡಲೇ ಅವು ನಾಲಿಗೆ ಚಾಚುವಂತೆ ಮಾಡಿದವು. ಆಗ ಎರಡುಂದಲೂ ಎರಡು ಸುರಗಿ(ಖಡ್ಗ)ಗಳನ್ನು ಮಾಡಿದರು. ಆದ್ದರಿಂದ ಆ ಊರಿಗೆ 'ಸುರಗಿ ಹಳ್ಳಿ' ಎಂದು ಹೆಸರಾಯಿತು. ಒಂದನ್ನು ಕೆರೆಯಲ್ಲಿ ಹುಗಿದರು. ಇನ್ನೊಂದನ್ನು ವೀರ ವಿಕ್ರಮಾದಿತ್ಯನಿಗೆ ಕೊಟ್ಟರು. ಅವನು ಅದನ್ನು ಸುರಗಿಹಳ್ಳಿಯಲ್ಲಿಟ್ಟನು. ಮುಂದೆ ವಿಜಯನಗರದ ರಾಜನಾದ ವೀರನರಪತಿ ಕೃಷ್ಣರಾಯನು ೧೩೬೫ ರಲ್ಲಿ ಕೆರೆಯನ್ನು ಕಟ್ಟಿಸುವನು. ಕೆರೆಗೆ ನೀರು ಬರದೆ ಗಂಗೆಯ ಹೇಳಿಕೆಯಂತೆ ೧೦೧ ಜನ ಕನ್ನಿಕೆಯರನ್ನು ಬಲಿ ಕೊಡಲು ಸಿದ್ಧನಾಗುವನು. ಅಂದಿನ ರಾತ್ರಿ ರೇಣುಕರು ರಾಜನ ಕನಸಿನಲ್ಲಿ ಬಂದು "ರಟ್ಟಿಹಳ್ಳಿ ಪುಟ್ಟನಗೌಡರ ಮಗಳಾದ ಕೆಂಚಮ್ಮನಿಂದ ಈ ಕೆರೆ ಜಲಮಯವಾಗುವುದು. ನೀನು ೧೦೧ ಕನ್ನಿಕೆಯರನ್ನು ಬಲಿಕೊಡಬೇಡ. ಇದನ್ನು ನಾನು ಕೊಡಮೊಗ್ಗಿಯಲ್ಲಿದ್ದೇ ತೋರಿಸುತ್ತೇನೆ" ಎಂದು ಹೇಳುವನು. ಅಂತೆಯೇ ಕೆರೆ ಕೆಂಚಮ್ಮನಿಂದ ಜಲಮಯವಾಗುವುದು. ಅದನ್ನು ಕಣ್ಣಾರೆ ನೋಡಿ ಸಂತೋಷಪಡಲು ನಂದಿ ಬಂದು ಕೆರೆಯ ತೂಬಿನ ಮೇಲೆ ನೆಲೆಸಿರುತ್ತಾನೆ.



ಕೆರೆಯ ಜಲಾನಯನ ಪ್ರದೇಶ ೧,೩೬೮.೭ ಹೆಕ್ಟೇರ್. ಜಲಾವೃತ ಪ್ರದೇಶ ೧೯೫.೨೧ ಹೆಕ್ಟೇರ್ ಮತ್ತು ಅದರ ಸಾಮರ್ಥ್ಯ ೫೪.೬೩ ಮೆಟ್ರಿಕ್ ಘನ ಅಡಿ (ಸುಮಾರು ೧.೫೭೭ ಮೆಟ್ರಿಕ್ ಘನ ಮೀಟರುಗಳು).

ಕಲ್ಲು ಮತ್ತು ಮಣ್ಣಿನಿಂದ ನಿರ್ಮಿಸಿರುವ ಕೆರೆಯ ಏರಿ ೫೬೩.೮ ಮೀಟರ್ ಉದ್ದ ಇದ್ದು, ಅದರ ಅತಿ ಹೆಚ್ಚಿನ ಎತ್ತರ ೪೩.೬ ಮೀಟರ್ ಆಗಿದ್ದು, ಮೇಲಿನ ಕಟ್ಟೆಯ ಇಳಿಜಾರು ೨-೨/೧ : ೧ ಮತ್ತು ಕೆಳಕಟ್ಟೆಯ ಇಳಿಜಾರು ೨ : ೧ ಆಗಿದೆ. ಅಣೆಕಟ್ಟಿನ ಮೇಲುಭಾಗದ ಅಗಲ ೧೨೧.೯ ಮೀಟರಿನಿಂದ ೧೮೨.೯ ಮೀಟರುಗಳವರೆಗಿದೆ. ಜಲಾಶಯದ ಕಟ್ಟಡದ ತಳ ೨೪೩.೮ ಮೀಟರಿನಿಂದ ೩೬೫.೯ ಮೀಟರುಗಳವರೆಗೆ ಹಬ್ಬಿದೆ. ಈ ಕೆರೆಯ ನೀರನ್ನು ಸಂಪೂರ್ಣವಾಗಿ ಧಾರವಾಡ ಜಿಲ್ಲೆಯ ಭೂಮಿಗೆ ಉಣಿಸಲಾಗುತ್ತಿದೆ.

ಕೆರೆಯ ಬಲನಾಲೆಯ ಮೂಲಕವಾಗಿ, ಕೆರೆಯ ಹಿಂಭಾಗಕ್ಕೆ ಸಮೀಪಿಸುತ್ತಿದ್ದಂತೆ ವನ್ಯಸಂಪತ್ತು ಸುತ್ತಮುತ್ತ ಲಕಲಕ ಹೊಳೆಯುತ್ತ ಪ್ರವಾಸಿಗರನ್ನು ಕೈಬೀಸಿ ಕರೆಯುತ್ತದೆ. ಇಲ್ಲಿಂದ ತುರುಬಿಗುಡ್ಡ ಮತ್ತು ಗೋವಿನಗುಡ್ಡ—ಇವುಗಳ ಮಧ್ಯೆ ಕಟ್ಟಿರುವ ಕೆರೆಯ ಕಟ್ಟಡದ ಒಂದು ಸುಂದರ ನೋಟ ಕಾಣಸಿಗುತ್ತದೆ. ಕತ್ತರಿ ತೂಬಿನಿಂದ ಬಂದ ಮುಖ್ಯ ಸುರಂಗಮಾರ್ಗದಿಂದ ನೀರು, ಎಡ–ಬಲ ನಾಲೆಗಳ ಮೂಲಕ ಹಾಯಾಗಿ ಜುಳುಜುಳು ಹರಿಯುತ್ತಿರುವ ದೃಶ್ಯ ನಯನಮನೋಹರ! ನಡೆದುಬಂದ ಪ್ರವಾಸಿಗರು ಈ ಎರಡು ನಾಲೆಗಳು ಆರಂಭವಾಗಿ ಹರಿಯುವ ಕವಲಿನ ಹತ್ತಿರ ತಣ್ಣನೆಯ ಮರದಡಿ ಕುಳಿತು, ದಾಹವಾರಿಸಿಕೊಂಡು ಸ್ವಲ್ಪ ಹೊತ್ತು ವಿಶ್ರಮಿಸಿಕೊಳ್ಳುತ್ತಾರೆ.

ಬಲನಾಲೆಯ ಉದ್ದ ೧೩.೬೦ ಕಿ.ಮೀ, ಎಡ ಕಾಲುವೆಯ ಉದ್ದ ೧೦.೨೦ ಕಿ.ಮೀ. ಈ ಕಾಲುವೆಯನ್ನು ಕಡಪಕಲ್ಲಿನಿಂದ ನಿರ್ಮಿಸಿರುವುದು ಅಂದಿನ ಎಂಜಿನಿಯರ್ ಬುದ್ಧಿಕುಶಲತೆ ಮೆಚ್ಚುವಂತಹುದಾಗಿದೆ. ಈ ನಾಲೆಗಳನ್ನು ದಾಟಿ ಮುಂದೆ ಸಾಗಿದಲ್ಲಿ ಮುಖ್ಯ ಸುರಂಗಮಾರ್ಗ (ಕಲ್ಲಿನಿಂದ ನಿರ್ಮಿತವಾದ) ಸಿಗುವುದು. ಇಲ್ಲಿಯ ಶಿಲಾಶಾಸನಗಳನ್ನು ನೋಡಿಕೊಂಡು, ಕೆರೆಯ ಏರಿಯನ್ನು ಹತ್ತಲು ಉತ್ತಮರೀತಿಯ ಮೆಟ್ಟಿಲುಗಳಿವೆ. ಕೆರೆಯ ಮೇಲೆ ಹತ್ತುತ್ತಿದ್ದಂತೆಯೇ ತುರುಬಿಗುಡ್ಡದ ಮೇಲೆ ಬೃಹತ್ತಾದ ಕಲ್ಲಿನಕೋಟೆ ಕಾಣಿಸುತ್ತದೆ. ಈ ಕೋಟೆಯನ್ನು ಕೆಲಸಗಾರರ ರಕ್ಷಣೆ ಮತ್ತು ನಿರ್ದೇಶನಕ್ಕಾಗಿ ಗುಡ್ಡದ ಮೇಲೆ ಕಟ್ಟಲ್ಪಟ್ಟಿರುವುದಾಗಿ ಹೇಳಲಾಗಿದೆ. ಕೆರೆಯ ತೂಬಿನ ಮೇಲೆ ನಿಲ್ಲಿಸಿರುವ ಪರ್ಶಿಯನ್ ಮತ್ತು ಅರೇಬಿಕ್ ಶಿಲಾಶಾಸನದ ಪ್ರಕಾರ, ಈ ಕೋಟೆಯು ಬಿಜಾಪುರದ ಅದಿಲ್‌ಶಾಹನ ಅಧಿಕಾರಿಯಾದ ಮಹಮದ್‌ಖಾನ್

ರಾಜಾ ಫರಿದ್ ಎಂಬುವನಿಂದ ೧೬೩೫ ರಲ್ಲಿ ಕಟ್ಟಲ್ಪಟ್ಟಿತ್ತೆಂದು ತಿಳಿದುಬರುತ್ತದೆ.

ಈ ಕೋಟೆಗೆ ಪೂರ್ವ, ಪಶ್ಚಿಮ ಮತ್ತು ದಕ್ಷಿಣ, ಉತ್ತರದಿಕ್ಕುಗಳಲ್ಲಿ ಬಾಗಿಲುಗಳಿವೆ. ಮೇಲೆ ಹತ್ತಿ ವೈರಿಗಳನ್ನು ನೋಡುವ ಕಿಂಡಿಗಳಿವೆ. ಒಳಭಾಗದಲ್ಲಿ ಸಣ್ಣಸಣ್ಣ ಮನೆಗಳು ಬಿದ್ದಿವೆ. ಅವುಗಳನ್ನು ರಾಜರು ಧನಕನಕಾದಿಗಳನ್ನು ಇಡಲು ಮಾಡಿರಬಹುದೆಂದು ತರ್ಕಿಸಲಾಗಿದೆ. ಇಲ್ಲಿ ಒಂದು ಸುಂದರ ಕಲ್ಲಿನ ಮಂಚವಿದೆ. ಕೋಣೆಯ ಒಳಗೆ ಆದಿಲ್‌ಷಹಾನು ಕಟ್ಟಿಸಿದ ಬಾತಿಸ್ವಾಮಿಯ (ಮುಸ್ಲಿಂ ಗೋರಿ) ಗೋರಿ ಇದೆ. ಇಲ್ಲಿಗೆ ಜಾತಿಮತ ಭೇದವಿಲ್ಲದೆ ಎಲ್ಲಾ ಜಾತಿಯ ಭಕ್ತಾದಿಗಳು ಬಂದು ಹರಕೆ ಒಪ್ಪಿಸಿ ಹೋಗುತ್ತಾರೆ.

ಕೋಟೆಯನ್ನು ನೋಡಿಕೊಂಡು ಕೆಳಗೆ ಇಳಿದರೆ ವಡ್ಡರು ಕಟ್ಟಿದ ಕೆರೆಯ ವಿಶಾಲವಾದ ಏರಿಯ ಮಧ್ಯದಲ್ಲಿ ಮದಗದ ಕೆಂಚಮ್ಮನ ದೇವಾಲಯವಿದ್ದಿತು. ಅದು ಬಿದ್ದ ಮೇಲೆ ಈಗ ಚಿಕ್ಕ ಗುಡಿಯೊಂದು ನಿರ್ಮಾಣವಾಗಿದೆ. ಗುಡಿಯ ಕೆಲಸ ಅಪೂರ್ಣವಾಗಿದೆ. ಗರ್ಭಗೃಹದಲ್ಲಿ ಸುಮಾರು ೨.೧/೨ ಅಡಿಯ ಕರಿಯ ಕಲ್ಲಿನ ಸುಂದರ ವಿಗ್ರಹವಿದೆ. ದೇವಿ ಕೆಂಚಮ್ಮನು ಮೂಗಿಗೆ ಮುಕುರ, ತಲೆಗೆ ಸುಂದರ ಕಿರೀಟ, ಕೊರಳಲ್ಲಿ ರುದ್ರಾಕ್ಷಿಮಾಲೆ, ಮಾಂಗಲ್ಯಸರ ಮತ್ತು ಲಿಂಗವನ್ನು ಧರಿಸಿರುತ್ತಾಳೆ. ಒಂದು ಕೈಯಲ್ಲಿ ಭಕ್ತರಿಗೆ ಹರಸುತ್ತಿದ್ದಾಳೆ. ಇನ್ನೊಂದು ಕೈಯಲ್ಲಿ ಕಲಶವನ್ನು ಹಿಡಿದಿದ್ದಾಳೆ. ಶರಣೆ ಕೆಂಚಮ್ಮನ ಮೂರ್ತಿಯ ಹಿಂಭಾಗದಲ್ಲಿ ಲೋಹದ ಸುಂದರ ಪ್ರಭಾವಳಿಯಿದೆ. ದೇವಿ ಕೆಂಚಮ್ಮನ ಆರಾಧನೆಗೆ ದಿನವಿಡೀ ಭಕ್ತರು ಹಾಗೂ ಕೆರೆಯನ್ನು ನೋಡಲು ಪ್ರವಾಸಿಗರು ಬರುತ್ತಿರುತ್ತಾರೆ.

ಶರಣೆ ಕೆಂಚಮ್ಮನಿಗೆ ಪೂಜೆ ಸಲ್ಲಿಸಿ ಗೋವಿಗುಡ್ಡವನ್ನು ಏರುತ್ತಾಹೋದಲ್ಲಿ ಎರಡು ಕಲ್ಲುಬಂಡೆಗಳಿಂದಾದ ತಿಮ್ಮಪ್ಪನ ಗವಿಯ ದೇವಾಲಯ ಸಿಗುವುದು. ಈ ಗವಿ–ದೇಗುಲದಲ್ಲಿ ತಿಮ್ಮಪ್ಪ, ಶಿವ, ಗಣಪತಿ, ಹಲವಾರು ನಾಗಶಿಲ್ಪಗಳು, ಭಿನ್ನವಾದ ಸ್ತ್ರೀಮೂರ್ತಿ ಮತ್ತು ಎರಡು ಜೊತೆ ಪಾದುಕೆಗಳಿವೆ. ತಿಮ್ಮಪ್ಪನ ವಿಗ್ರಹ ಉಬ್ಬುಶಿಲ್ಪವಾಗಿದ್ದರೂ ಸ್ಪಷ್ಟವಾಗಿ ಕಾಣುವಂತಿಲ್ಲ. ತಿಮ್ಮಪ್ಪನ ದೇವಾಲಯದಿಂದ ಇಳಿದು ಮುಂದೆ ಬರುವಾಗ ಎರಡು ತೋಳುಗಳನ್ನು ಮೇಲಕ್ಕೆತ್ತಿರುವ ಸುಂದರವಾದ ಒಂದು 'ಮಹಾಸತಿ ಕಲ್ಲು' ಕಂಡುಬರುತ್ತದೆ. ಇದರಲ್ಲಿ–ಒಂದು ಕೆಂಚಮ್ಮನಿಗೆ ಸಂಬಂಧಿಸಿದುದು, ಮತ್ತೊಂದು ಕತ್ತರಿತೂಬಿಗೆ ಹಾರವಾದ ಕಲ್ಲುಕುಟಿಗರ ಮುಖ್ಯಸ್ಥನ ಮಗಳು ಲಕ್ಷ್ಮಿಗೆ ಸಂಬಂಧಿಸಿದುದೆಂದು ಹೇಳಲಾಗುತ್ತಿದೆ. ಸುಮಾರು ಎರಡು ಫರ್ಲಾಂಗ್ ನಡೆದಲ್ಲಿ 'ದಭೆ ದಭೆ' ಕಾಣಿಸುತ್ತದೆ. ಇದನ್ನು ಇಲ್ಲಿಯ ಜನರು 'ಒಡಕು' ಎಂದು ಕರೆಯುತ್ತಾರೆ (ಗಂಗೆಯು ಗುಡ್ಡವನ್ನು ಒಡೆದು ಮುಂದೆ ಸಾಗಿದ್ದಾಳೆ). ನೀರು ಎತ್ತರದಿಂದ ಬೀಳುತ್ತಿರುವುದರಿಂದ ಇದನ್ನು 'ದಭೆ ದಭೆ' ಎಂದು ಕರೆಯುತ್ತಾರೆ. ಈ ನೀರು ಬೀಳುವಲ್ಲಿ ಬಹಳ ಆಳವಿದೆ. ಮಳೆಗಾಲದಲ್ಲಿ ಈ ಫಾಲ್ಸ್‌ನ ದೃಶ್ಯ ಬಹಳ ಮನೋಹರವಾಗಿರುತ್ತದೆ.



ಇದರ ಮುಂದೆ ನೀರನ್ನು ತಡೆಯಲು ಒಡ್ಡನ್ನು ಹಾಕಿದ್ದಾರೆ. ಈಗ ಮದಗದ ಕೆರೆಯಿಂದ 'ಲಿಫ್ಟ್ ಇರಿಗೇಷನ್' ಸಾಗಿದೆ. ಮೊದಲು ಇದಕ್ಕೆ 'ಮದಗದ ಸರೋವರ' ಎಂದು ಕರೆಯುತ್ತಿದ್ದರು.

ಕೆರೆ ಒಡೆದಮೇಲೆ ಶಿಕಾರಿಪುರದ ಪಟ್ಟಣ ಹುಟ್ಟಿದೆ ಎನ್ನುತ್ತಾರೆ. ಅಂದಮೇಲೆ ಮೊದಲು ಮದಗದ ಸರೋವರದ ಭವ್ಯತೆಯನ್ನು, ವಿಸ್ತಾರವನ್ನು ಊಹಿಸಿಕೊಳ್ಳಬಹುದು! ೧೮೮೯–೯೦ರಲ್ಲಿ ಕೆರೆಯಲ್ಲಿ ಉಂಟಾಗಿದ್ದ ಬಿರುಕನ್ನು ಮುಚ್ಚಿ ಪುನಃ ಕೆರೆಯನ್ನು ತುಂಬಲಾಗಿದೆ.

ಶ್ರಾವಣ ಮಾಸದಲ್ಲಿ ಕೆರೆ ತುಂಬಿದಾಗ ಅದರ ಚೆಂದವನ್ನು ನೋಡಲು ಕಣ್ಣೆರಡೂ ಸಾಲವು. ಅದು ನಿಜಕ್ಕೂ ನಮ್ಮ ಜನಪದರು ವರ್ಣಿಸಿರುವಂತೆ 'ಐಭೋಗದ ಮದಗ' 'ದೇವಲೋಕದ ಮದಗ' ಮತ್ತು 'ಚಂದದ ಮದಗ'ವೇ ಸೈ! ಆಗ ಕೆರೆಯಲ್ಲಿ ಕೆಂಚಮ್ಮನ ತೆಪ್ಪೋತ್ಸವ ಜರುಗುತ್ತದೆ. ಭಕ್ತರು ಸದಾ ಕೆರೆಗೆ ಬಂದು ಗಂಗೆಯನ್ನು ಪೂಜಿಸಿ, ಹರಕೆ ಸಲ್ಲಿಸಿ, ವಿವಿಧ ಭಕ್ಷ್ಯಭೋಜ್ಯಗಳನ್ನು ಅಲ್ಲಿಯೇ ತಯಾರಿಸಿ, ಉಂಡು ತೃಪ್ತಿಯಿಂದ ಮದಗದ ಗಂಗಾದೇವಿಯ ಕೆರೆಯ ಮೇಲಿರುವ ಕೆಂಚಮ್ಮನ ಆಶೀರ್ವಾದ ಪಡೆದು ಹಿಂದಿರುಗುತ್ತಾರೆ.

ಶಿವರಾತ್ರಿಯಲ್ಲಿ ಮಾಸೂರಿನಿಂದ ತೇರು ಕಟ್ಟಿ ತಂದು, ವೈಭವದಿಂದ ಕೆರೆಯ ಅಂಗಳದಲ್ಲಿ ತೇರು ಎಳೆಯುತ್ತಾರೆ. ಉತ್ಸವಗಳು, ಭಜನೆ, ಕೋಲಿನ ಮೇಳ, ಡೊಳ್ಳಿನ ಮಜಲು, ಗೀಗೀಪದ, ಸೋಬಾನೆ ಇತ್ಯಾದಿಗಳು ಭಕ್ತಿಯಿಂದ ಮಂಗಳವಾರದಿಂದ ಶುಕ್ರವಾರದ ತನಕ ಸಾಗುತ್ತವೆ. ವರ್ಷವಿಡೀ ಸಹಸ್ರಾರು ಭಕ್ತರೂ ಮತ್ತು ಪ್ರವಾಸಿಗರೂ ಇಲ್ಲಿಗೆ ಬರುತ್ತಿರುತ್ತಾರೆ.

ಮೇಲೆ ಹೇಳಿದ ಅನೇಕ ಪುರಾವೆಗಳಿಂದ ಮದಗದ ಕೆರೆಯ ಹಾಡು ಬರೀ ಹೇಳಿಕೆ (ಐತಿಹ್ಯ)ಯಲ್ಲ—ಅದು ಕಣ್ಣೆದುರಿಗಿರುವ ಇತಿಹಾಸವನ್ನು ಹೊಂದಿದೆ ಎಂಬುದನ್ನು ಮನಗಾಣಬಹುದಾಗಿದೆ.

# ೨. ಕೆಂಚಮ್ಮನ ಹಾಡ್ಗತೆಯ ಒಳಧ್ವನಿ

ಈಗ ಐತಿಹಾಸಿಕ ಮಹತ್ವವನ್ನುಳ್ಳ ಮದಗದ ಕೆರೆ ಹೇಗೆ ಕಟ್ಟಲ್ಪಟ್ಟಿತು ? ಕೆರೆಯನ್ನು ಉಳಿಸಿಕೊಂಡ ಮಹಾಸಾಧ್ವಿ ಯಾರು ? ಅವಳ ಚರಿತ್ರೆ ಯಾವುದು ? ಎಂಬುದಕ್ಕೆ ಜನಪದರ ಬಾಯಲ್ಲಿ ಮೂಡಿ ಬಂದ 'ಮದಗದ ಕೆಂಚವ್ವ'ನ ಹಾಡ್ಗತೆಯನ್ನು ಸಿಂಹಾವಲೋಕನ ಮಾಡೋಣ :

ಧಾರವಾಡ ಜಿಲ್ಲೆಯ ಮಾಸೂರು ೧೭೪೯ರ ಕಂದಾಯ ಇಲಾಖೆಯ ಪ್ರಕಾರ 'ಬಂಕಾಪುರ ಸರ್ಕಾರದ' ವಾರ್ಷಿಕ ೧೫,೦೦೦ ರೂ.ಗಳ ಆದಾಯವನ್ನು ಹೊಂದಿದ್ದ ಪರಗಣದ (ಸಬ್ ಡಿವಿಜನ್) ಒಂದು ಮುಖ್ಯ ಕೇಂದ್ರವಾಗಿತ್ತು. ಊರಿನ ಹಿರಿಯ ಮಲ್ಲನಗೌಡ, ಮಡದಿ ಮಲ್ಲಿಗುದೇವಿ, ಮಕ್ಕಳು ಗೂಳೇಶ ಮತ್ತು ಉಜ್ಜಪ್ಪ ಮತ್ತು ಮಗಳು ಮಲಕವ್ವ. ಗೌಡ ಪ್ರಾಮಾಣಿಕ ರೈತನಾಗಿದ್ದನಲ್ಲದೆ ವ್ಯಾಪಾರಿಯೂ ಆಗಿದ್ದ. ಪರೋಪಕಾರಿ, ದಾನಿಯಾಗಿ ಜನರ ಮೆಚ್ಚುಗೆಗೆ ಪಾತ್ರನಾಗಿದ್ದ. ಊರಿಗೆ ಮುಖಂಡ ಗೌಡನಾದ್ದರಿಂದ ಯಾವ ಕೆಲಸವೂ ಅವನಿಲ್ಲದೆಯೆ ನಡೆಯುವಂತಿಲ್ಲ. ಸರ್ವ ವಿಚಾರಕ್ಕೂ ಜನ ಮಲ್ಲನಗೌಡನನ್ನೇ ಅವಲಂಬಿಸಿದ್ದರು.

ಒಂದು ಸಲ ಬೇಸಿಗೆ ಬಂತು. ಒಂದು ದಿನ ಮಗಳು ಮಲಕವ್ವ,

ಹಸನಾದ ಸಿಂಬೆ ಬರಿಗೊಡ ತಕ್ಕೊಂಡು
ಉಸುರೆಂದು ಬಾವಿ ಇಳುದಾಳೆ ....ಕೋಲು ಕೋಲೆ

ಕಯ್ಯ ಚಾಚಿ ನೀರ ಮಗುದಾಳೆ ಮಲಕವ್ವ
ಕಯ್ಯ ತುಂಬ ನೀರೆ ಬರಲಿಲ್ಲ ....ಕೋಲು ಕೋಲೆ

ಬರಿಗೈಲಿ ಬೇಜಾರಾಗಿ ಮನೆಗೆ ಬಂದ ಮಲಕವ್ವ ಊರಿನ ನೀರಿನ ಬವಣೆಯ ವಿಚಾರವನ್ನೇ ಕುರಿತು ಚಿಂತಿಸುತ್ತಾ ಉಸ್ಸರಿಗೆ ಒಳಗೆ ಮಲಗಿದ್ದಾಳೆ. ಸ್ವಪ್ನದಲ್ಲಿ ಗಂಗವ್ವ ಬಂದು,

ಸತ್ಯವಂತರ ಮಗಳೆ ಮಾತೊಂದ ಹೇಳತೀನಿ
ಸತ್ಯದನ ಕೆರೆಯ ತೆಗೆಸವ್ವ ....ಸುವ್ವಯ್ಯ

ಎಂದು ಹೇಳಿ ಮಾಯವಾಗುತ್ತಾಳೆ. ಸ್ವಪ್ನ ತಿಳಿದೆದ್ದ ಮಲಕವ್ವ ತಂದೆ ಬಳಿ ಬಂದು,

ನೀರಿಲ್ಲದ ಊರಾಗೆ ನಿರುವಯ ಮಾಡದಂಗೆ
ಬೇಗಾನೊಂದು ಕೆರೆಯ ತಗುಸಪ್ಪ ....ದೇವನೀನೆ

ಗಂಗಿಲ್ಲದ ಊರಾಗೆ ಯಂಗು ಬಾಳೆ ಮಾಡ್ಯಪ್ಪ
ತಪ್ಪನೊಂದು ಕೆರೆಯ ತಗಸಪ್ಪ ....ದೇವನೀನೆ



ಎಂದು ಕೇಳಿಕೊಂಡ ಮಗಳ ಮಾತಿಗೆ ತಂದೆ, "ತಗುಸಾನ ಹೇಳವ್ವ ನಮಗೇನು ಬಡತಾನ" ಎಂದು ಅವಳನ್ನು ಸಮಾಧಾನಮಾಡಿ, ಊರ ಜನರ ಹಿತಕ್ಕಾಗಿ ಗೌಡ, ಮದಗದ ಕೆರೆ ಕಟ್ಟಿಸಲು ನಿರ್ಧರಿಸಿ, ವಡ್ಡರನ್ನು ಕರೆಸಲು ಓಲೆ ಬರೆಯುತ್ತಾನೆ. ಓಲೆ ಪಡೆದ ವಡ್ಡರು ಏಳು ಸಾವಿರ ಮಂದಿ ಕೂಡಿಕೊಂಡು ಮಲ್ಲನಗೌಡನ ಮನೆಗೆ ಬರುತ್ತಾರೆ. ಬಂದ ವಡ್ಡರಿಗೆ ಗೌಡ "ಒಂದು ಸಾವಿರ ಹಣವ ಕೊಡುತಿನಿ ನನಮಕ್ಕಳಿರ ಒದಗೊದಗಿ ಮದಗ ತೆಗಿನಡಿರೊ" ಅಂದಾಗ ವಡ್ಡರು "ನಿಮ್ಮ ಒಂದು ಸಾವಿರ ಯಲಿಗಚ್ಚೊ ಸುಣ್ಣದ ಬೆಲಿಗಿಲ್ಲ" ಅನ್ನುತ್ತಾರೆ. "ಎರಡು ಸಾವಿರ ಕೊಡುತಿನಿ" ಅಂದಾಗ "ಅಡಿಕೆ ಯಲಿ ಬೆಲೆಯಿಲ್ಲ" ಅನ್ನುತ್ತಾರೆ. "ಐದು ಸಾವಿರ ಹಣವ ಕೊಡುತಿನಿ" ಅಂದಾಗ "ಮಣ್ಣೊಣೀರು ಸಿಂಬಿ ಬೆಲೆಯಿಲ್ಲ" ಅನ್ನುತ್ತಾರೆ. ಕೊನೆಗೆ ಒಪ್ಪಿ, ಕೆರೆಯ ಅಳತೆಯನ್ನು ಕೇಳುತ್ತಾರೆ. ಮಲ್ಲನಗೌಡ,

ಆ ಕಡೆ ಕೊಡಮಗೆ ಈ ಕಡೆ ಕಿಟ್ಟದಳ್ಳಿ
ಮಾಸೂರ ಎಡಕೆ ಮದಗ ನಿಲ್ಲಲೆಂದೆ
ಮದಗಾದ ಅಳತೆ ಕೊಡುತಾನೆ ....ಕೋಲು ಕೋಲೆ

ಗೌಡನಿಂದ ಅಳತೆ ಪಡೆದ ವಡ್ಡರು ಅತಿ ಸಂಭ್ರಮದಿಂದ ಚಿನ್ನದ ಗುದ್ದಲಿ ಹಿಡಿದು, ಒತ್ತೊತ್ತರಿಸಿ ಮದಗ ಕಡಿತಾರೆ. ಎಷ್ಟು ಕಡಿದರೂ ಹಸಿಯ ಮಣ್ಣೆಂಬೋದು ಸಿಗಲಿಲ್ಲ. ಇದ ಕಂಡ ಊರ ಜನರು,

ಲೋಕದ ಮಲ್ಲನಗೌಡ ಕೆರೆಯ ಕಟ್ಟಿಸಿದಲ್ಲೊ
ಶಿವಶಿವನೆ ಗುಬ್ಬಿ ಕುಡಿಯಾಕೆ ನೀರಿಲ್ಲ !
ಗುಬ್ಬಿ ಕುಡಿಯೊದಕ್ಕಿಲ್ಲ ಅಬ್ಬೆ ಕುಡಿಯೋದಕಿಲ್ಲ
ಹರಹರನೆ ಜನ ಸೋಜಿಗಾಗಿ ನೋಡುತೈತೆ ॥

ಜನ ಮಲ್ಲನಗೌಡನ ಶ್ರಮಕ್ಕಾಗಿ ಮರುಗುತ್ತಾರೆ. ಕೆರೆಯಲ್ಲಿ ನೀರು ಬೀಳದ್ದಕ್ಕೆ ನೊಂದ ಗೌಡ ಅದೇ ಚಿಂತೆಯಲ್ಲಿ ರಾತ್ರಿ ಮಲಗಿದ್ದಾಗ, ಸ್ವಪ್ನದಲ್ಲಿ ಗಂಗೆ ಬಂದು "ಇನ್ನೊಂದು ಸಾವಿರ ಕೊಟ್ಟು ನಡುಕೆರೆಯಲ್ಲಿ ಬಾವಿ ತೆಗೆಸು ಮದಗ ತುಂಬುತ್ತದೆ" ಎಂದು ಹೇಳಿ ಮಾಯವಾಗುತ್ತಾಳೆ. ಗಂಗಾದೇವಿಯ ಮಾತಿನಂತೆ ಗೌಡ ಮತ್ತೊಂದು ಸಾವಿರ ಕೊಟ್ಟು ನಡುಕೆರೆಯಲ್ಲಿ ಬಾವಿ ತೋಡಿಸುತ್ತಾನೆ. ಆಗ ಹಸಿಯಮಣ್ಣು ಸಿಕ್ಕಿ ಮೂಲೆ ಮೂಲೆಗೆ ಜಲ ಉಕ್ಕಿ, ಏಕಾಗಿ ಮದಗ ತುಂಬುತೈತೆ ! ಕೆರೆ ತುಂಬಿದ್ದು ಕಂಡು ಸಂತಸದಿಂದ ಗೌಡ ಗಂಗೆಗೆ ಕೈಮುಗಿದು,

ಆರು ಸಾವಿರ ಕೋಣ ಆರು ಸಾವಿರ ಕುರಿ
ಆರು ಕಂಡುಗದಕ್ಕಿ ಚರುಗಾವೆ ....ಮುಂದಗಮನೆ

ಹತ್ತು ಸಾವಿರ ಕೋಣ ಹತ್ತು ಸಾವಿರ ಕುರಿ
ಹತ್ತು ಕಂಡಗದಕ್ಕಿ ಚರುಗಾವೆ ....ಮುಂದಗಮನೆ

ಇಷ್ಟು ಚರುಗವನ್ನು ಸ್ವೀಕರಿಸಬೇಕೆಂದು ಗಂಗವ್ವನನ್ನು ಕೇಳಿಕೊಳ್ಳುತ್ತಾನೆ. ಗಂಗವ್ವ ಅದಕ್ಕೆ ಒಪ್ಪದೆ, "ಅರವತ್ತೇಳಳ್ಳಿ ತಗುಸೋಗು, ಒಡೆದೋಗುತೀನಿ ಅರುಗಾಗು" ಅಂದಾಗ ಗೌಡ ಹೆದರಿ,

ಒಡೆಯು ಬ್ಯಾಡ ನನ್ನ ಸಡಗರದ ಹಡದವ್ವ
ಒಡದೇಳವ್ವ ನಿನ್ನ ಒಳ ಮಾತ ....ಮಂದಗಮನೆ

ಎಂಬುದಾಗಿ ಕೇಳಿದಾಗ,

ನಾನು ಹೇಳಿದ ಮಾತ ನೀನು ಕೇಳ್ತಿನಂದೆ
ಸತ್ಯವ ಮಾಡಯ್ಯ ನನ ಕೂಡೆ ....ಮಂದಗಮನೆ

ಎಂದು ಕೇಳುತ್ತಾಳೆ. ಅದಕ್ಕೆ ಗೌಡ, "ನನ್ನಾಣೆ, ನಿನ್ನಾಣೆ ಕಲ್ಯಾಣದ ಶರಣರಾಣೆ ತಪ್ಪೋದಿಲ್ಲವ್ವ ಅನುತಾನೆ" ಆಗ ಗಂಗಾತಾಯಿ,

ತೂಗು ಮಂಚದ ಮೇಲೆ ತೂಗದಲೆ ಇರುವ್ನೋಳೆ
ದೇವಿ ಕೆಂಚವ್ನ ಕೊಡಹೋಗು ....ದೇವನೀನೆ

ಎಂಬುದಾಗಿ ಸೊಸೆ ಕೆಂಚಮ್ಮನನ್ನು ಬಲಿ ಕೇಳುತ್ತಾಳೆ. ಗಂಗೆಯ ಬಲಿಯ ವಿಷಯವನ್ನು ಕೇಳಿ ಅತಿ ವ್ಯಸನಗೊಂಡ ಗೌಡ "ಮಡದಿ ಮಲ್ಲಿಗೆದೇವಿಯನ್ನು ಕೊಡುತ್ತೇನೆ, ಚಿಕ್ಕ ಉಜ್ಜಪ್ಪನ್ನ ಕೊಡುತ್ತೇನೆ, ಮಗಳು ಮಲಕವ್ವನನ್ನು ಕೊಡುತ್ತೇನೆ. ನಾನೇ ಮದಗ ಧುಮುಕೇನು, ನನ್ನ ಮುದ್ದು ಸೊಸೆ ಕೆಂಚಮ್ಮನನ್ನು ಮಾತ್ರ ಕೊಡಲಾರೆ ತಾಯಿ" ಎನ್ನುತ್ತಾನೆ. ಗಂಗೆ, ಗೌಡಭಾಷೆ ಕೊಟ್ಟಿದ್ದನ್ನು ನೆನಪುಮಾಡಿ, "ನೀನು ಭಾಷೆಗೆ ತಪ್ಪಿದೆ, ನಾನು ಒಡೆದೋಗುತ್ತೀನೆಂದು" ಮತ್ತೆ ಹೆದರಿಸಿದಾಗ, ಕೆರೆ ಒಡೆಯುತ್ತದೆಂಬ ಭಯಕ್ಕೆ ಅಂಜಿ, ಗೌಡ ಕೆಂಚವ್ವನನ್ನು ಹಾರ ಕೊಡಲು ಒಪ್ಪುತ್ತಾನೆ.

ಕೆಂಚಮ್ಮನನ್ನು ಮದಗಕ್ಕೆ ಬಲಿ ಕೊಡುತ್ತೇನೆಂದು ಗಂಗೆಗೆ ಭಾಷೆ ಕೊಟ್ಟು, ಮಲ್ಲನಗೌಡ ಮನಿಗೆ ಬಂದು, ಮಗ ಗೂಳೇಶನನ್ನು ಕರೆದು,

ಕೆರೆಯು ಕಟ್ಟಿಸಿದೇನು ಬರಿಗೈಯಾದೆನು ಮಗನೆ
ಹವಳ ಮಾರಾಕೆ ಹೋಗಬೇಕು ....ಲೀಲಾಲೋಲ

ಎಂದು ಹೇಳುತ್ತಾನೆ. ಗೂಳೇಶ ತಂದೆಯ ಮಾತಿಗೆ ಒಪ್ಪಿ, ಹವಳ ಮಾರಲು ಹೊರಟು ಹೋರಿಗಳಿಗೆ ಶೃಂಗಾರಮಾಡುವ ಸಡಗರ ಇದು,

ಹಂಡ್ಹೋರಿಗೆ ಹಣಕಟ್ಟು ಗುಂಡೋರಿಗೆ ಮುಗುದಾಣ
ಜಾಣ ಹೋರಿಗೆ ಮಕರಂಬ ....ಲೀಲಾಲೋಲ

ಮುತ್ತಿನ ಹಿಡಿವಗ್ಗ ಮುತ್ತಿನ ಸಿರಿವಗ್ಗ
ಮುತ್ತ ಕೆತ್ತಿಸಿದ ಹಿಡಿವಗ್ಗ ....ಲೀಲಾಲೋಲ

ಹಿಡಿದು, ಮುತ್ತು ರತ್ನ ತುಂಬಿಕೊಂಡು, ತಾಯಿ ತಂಗಿಯರಿಗೆ ಜತುನ ಹೇಳಿ ತಾಯಿ ತಂದೆಯರಿಗೆ ಶರಣಮಾಡಿ, ಮಡದಿ ಕೆಂಚಸ್ತ್ರಿ ಮನಿಗೆ ಬರುತ್ತಾನೆ.



ಏನಲೆ ಕೆಂಚಸ್ತ್ರಿ ಏನು ಮಾಡುತೀಯ
ಲಾವಂಗದಗುಳಿ ತಗಿಬಾರೆ ....ಶಿವಶಿವನೆ

ಎಂಬುದಾಗಿ ಕರೆಯಲು, ಕೆಂಚಮ್ಮ ದಿಗ್ಗನೆ ಎದ್ದು ಬಂದು ಲಾವಂಗದಗುಳಿ ತೆಗೆದು, ಗೊಂಬೆ ಮಂಚದಲ್ಲಿ ಕೂರಿಸುತ್ತಾಳೆ. ಗೂಳೇಶ ಮಡದಿಗೆ ಬೀಡಿಕೆ ಹೋಗುವ ವಿಷಯ ತಿಳಿಸಿದಾಗ ಮುನಿದ ಕೆಂಚಮ್ಮ,

ಹವಳ ಇರದೋರಂಗ ಹವಳಕ್ಹೋಗುತೀರ
ಹವಳ ಇಲ್ಲವೇನೋ ರಾಯ ಮನಿಯಾಗ ....ದೇವನೀನೆ

ಹವಳ ಇಲ್ಲವೇನೋ ರಾಯ ಮನಿಯಾಗೆ ರಟ್ಟಿಹಳ್ಳಿ
ತಾಯಿ ಉಂಬಳದೇವಿ ಮನಿಯಿಂದ ....ದೇವನೀನೆ

ಹವಳ, ಆರು ಮಣವ ತರಿಸೇನು ರಾಯಾರೆ
ಮಡದಿ ಬಿಟ್ಹೋಗದು ತರವಲ್ಲ ....ದೇವನೀನೆ

ಎಂಬುದಾಗಿ ಶರಣೆ ಕೆಂಚಮ್ಮ ಗೋಳಾಡುತ್ತಾಳೆ. ಆಗ ಗೂಳೇಶ ಹೆಂಡತಿಯನ್ನು ರಮಿಸುತ್ತಾ,

ಹತ್ತುವಾರುದ ಸರಕ ಐದೇ ವಾರುಕೆ ಮಾರಿ
ಮುತ್ತೈದೆ ಬೇಗ ಬರುತೀನಿ ....ಲೀಲಾಲೋಲ

ಮುತ್ತೈದೆ ಬೇಗ ಬರುತೀನಿ ರಟ್ಟಿಹಳ್ಳಿ
ಚಿತ್ತಾರದ ಗೊಂಬೆ ಅಳದೀರೆ ....ಲೀಲಾಲೋಲ

ಎಂಬುದಾಗಿ ಸಮಾಧಾನ ಹೇಳಿ ಬೀಡಿಕೆ ಬಿಡುತ್ತಾನೆ. ಅತ್ತ ಮಗ ವ್ಯಾಪಾರಕ್ಕೆ ಹೋದ ನಂತರ, ಮಲ್ಲನಗೌಡ ತನ್ನ ಕಿರಿಯ ಮಗ ಉಜ್ಜಪ್ಪ, ಮಗಳು ಮಲಕವ್ವರಿಗೆ ಕೆಂಚವ್ವನನ್ನು ಕೆರೆಗೆ ಹಾರ ಕೊಡುವ ವಿಷಯ ತಿಳಿಸುತ್ತಾನೆ. ಮಕ್ಕಳಿಬ್ಬರೂ ತಂದೆಯ ಮೇಲೆ ಉರಿದು ಬೀಳುತ್ತಾರೆ.

ಅಣ್ಣ ಗೂಳೇಶ ಬೀಡಿಕೆ ಹೋದ ಒಂದೆರಡು ದಿವಸಗಳ ನಂತರ ಉಜ್ಜಪ್ಪ, ಅತ್ತಿಗೆ ಕೆಂಚಮ್ಮನ ಮನೆಗೆ ಬಂದು,

ಮುತ್ತ ಕೆರೆಗಂಗೆ ಕೊಡಬೇಕು ನನ ತಾಯಿ
ಅಣ್ಣ ಬರುವತನಕ ಕಾಣದೋಗೋಣ ....ದೇವನೀನೆ

ಮೈದುನನ ಮಾತು ಕೆಂಚವ್ವನಿಗೆ ಅರ್ಥವಾಗುತ್ತದೆ. ಆದರೆ ಯಾವ ಪ್ರತಿಕ್ರಿಯೆಯನ್ನೂ ವ್ಯಕ್ತಪಡಿಸುವುದಿಲ್ಲ. ಮೈದುನನಿಗೆ ಕೆಂಚವ್ವನನ್ನು ಕೆರೆಗೆ ಬಲಿ ಕೊಡಲು ಸ್ವಲ್ಪವೂ ಇಷ್ಟವಿಲ್ಲ. ಅದು ನನ್ನ ಅಣ್ಣ ಗೂಳೇಶ ಇಲ್ಲದ ಸಮಯದಲ್ಲಿ ಇಂಥ ನೀಚ ಕಾರ್ಯವೇ ? ಇರಲಿ, ಅಣ್ಣ ಬರುವ ತನಕ ಏನಾದರೂ ಮಾಡಿ ಅತ್ತಿಗೆಯನ್ನು ಬಚಾವ್ ಮಾಡಬೇಕು ಎಂಬ ಉತ್ತಮ ಭಾವನೆಯಿಂದಲೇ "ಅಣ್ಣ ಬರುವತನಕ ಕಾಣದೋಗೋಣ ನನ ತಾಯಿ" ಎಂದು ಕೆಂಚವ್ವನನ್ನು ಕೇಳಿದ್ದರಲ್ಲಿ ತಪ್ಪೇನಿಲ್ಲ. ಆದರೆ

ಮೈದುನನಿಗೇನೋ ಅತ್ತಿಗೆ ಕೆಂಚವ್ವ ತಾಯಿ ಸಮಾನ ಎಂಬ ಭಾವನೆಯಿದೆ. ಅವನ ಸಂಗಡ ಅಷ್ಟಕ್ಕೆ ಹೋಗುವುದು ಮನೆತನದ ಗೌರವದ ಪ್ರಶ್ನೆ?

ಮಾಸೂರರ ಸೊಸೆಯಂತೆ ರಟ್ಟೆಳ್ಳೆರ ಮಗಳಂತೆ
ಮೈದುನನ ಕಟ್ಟಿಗೊಂಡು ಹೋದಳಂತೆ ....ದೇವನೀನೆ
ಕುಂದ ತರಲೇನ್ರಿ ಬಳಗಾಕೆ ಮೈದುನರೆ
ಒಡದಾಕ್ರಿ ಪ್ರಾಣ ಕೊಡುತೀನಿ ....ದೇವನೀನೆ

—'ಮಾವರಾಗ್ನೆಗೆ ಇರುತಿನಿ' ಎಂದು ಹೇಳುವ ಕೆಂಚವ್ವನ ಮಾತು ಸ್ತ್ರೀಜಾತಿಗೇ ಆದರ್ಶಪ್ರಾಯವಾದುದಲ್ಲವೇ? ಅತ್ತಿಗೆ ಮಾತು ಒರಟಾಗಿ ಕಂಡರೂ ಸರಿಯಿರಬಹುದೆಂದು ಭಾವಿಸಿ ನಸುಮುನಿಸಿನಿಂದಲೇ ಹಿಂತಿರುಗುತ್ತಾನೆ ಉಜ್ಜಪ್ಪ.

ಈ ಕಡೆ ಮಲ್ಲೇಶ, ಮಗಳು ಮಲಕವ್ವನನ್ನು ಕರೆದು ಕೆಂಚಮ್ಮನನ್ನು ಹಾರ ಕೊಡದಿದ್ದರೆ ಕೆರೆ ಒಡೆದು ಹೋಗುವ ಭಯ ತಿಳಿಸಿ, ಕೆಂಚಮ್ಮನನ್ನು ಕರೆದುತರಲು ತಿಳಿಸುತ್ತಾನೆ. ಅಂತೆಯೇ ಮಲಕವ್ವ ಅತ್ತಿಗೆಯನ್ನು ಕರೆತರುತ್ತಾಳೆ. ಆತಂಕದಿಂದ ಮಾವನ ಬಳಿ ಬಂದು ನಿಂತ ಕೆಂಚಮ್ಮ,

ಯಾತಕೆ ನನ್ನ ಕರೆಸಿರಿ ಮಾವಯ್ಯ
ಕರೆಸಿದ ಕಾರುಣವ ನಮಗೇಳಿ ....ಸೋ

ಎಂದು ತಡವರಿಸುತ್ತ ಕೇಳಿದ ಮಾತಿಗೆ ಮಾವ ಮಲ್ಲನಗೌಡ,

ನಾಕು ಕಣ್ಣಿನ ಮದಗ ಮುಗುದೆ ಮೂರು ತಿಂಗಾಳು
ಮದಗಾಕೆ ಗಂಗವ್ನ ಮಾಡಬೇಕು ನನ ಸೊಸಿಯೇ
ನೀನೇ ಕೆಮ್ಮಣ್ಣ ತರಬೇಕು ....ಸೋ

ಎಂದು ಅಣತಿ ಮಾಡುತ್ತಾನೆ.

ಕೆಂಚಮ್ಮ ಚಿನ್ನದ ಗುದ್ದಲಿ, ಬಣ್ಣದ ಪುಟ್ಟಿ ತೆಗೆದುಕೊಂಡು, ಮನೆದೇವರನ್ನೂ, ಗಂಡನನ್ನೂ ಸ್ಮರಿಸುತ್ತಾ, ಕೆಮ್ಮಣ್ಣ ತುಂಬಿ, ಕಂಡ ಕಾಳಿಂಗನನ್ನು ಸಿಂಬಿಯನ್ನಾಗಿ ಮಾಡಿಕೊಂಡು, ಹೆಡೆಯ ನೆರಳಿನಲ್ಲಿ ಕೆಮ್ಮಣ್ಣನ್ನು ಹೊತ್ತುಬರುತ್ತಾಳೆ. ಮಾರ್ಗ ಮಧ್ಯದಲ್ಲಿ ದನಕರು ಕಾಯುತ್ತಿದ್ದ ಹುಡುಗರನ್ನು ಕುರಿತು, ಊರುಗಳ ಸುದ್ದಿ ಏನೆಂದು ಕೇಳುತ್ತಾಳೆ. ಇವಳೇ ಕೆಂಚಮ್ಮನೆಂದು ತಿಳಿಯದ ಹುಡುಗರು,

ಊರಗಳ ಸುದ್ದಿಲ್ಲ ಕೇರ್ಯಾಗಳ ಸುದ್ದಿಲ್ಲ
ಕೆಂಚಮ್ನ ಕೆರಿಗೆ ಏ ಕೊಡುತಾರೆ
....ಗಂಧವೇನೆ ಶಿವ ಬಂದರೇನೆ

ಎಂಬುದನ್ನು ತಿಳಿದ ಕೆಂಚಮ್ಮ, ತನ್ನ ಮೈದುನನ ಮಾತು ಖಚಿತವೆಂದು, ಹೆದರಿ ಅತ್ಯಂತ ಭಯದಿಂದ ವ್ಯಾಪಾರಕ್ಕೆ ಹೋದ ಗಂಡ ಬೇಗ ಬರಲೆಂದು,

ಉಜ್ಜಿನಿ ಸಿದ್ದಪ್ಪಗೆ ಗೆಜ್ಜೆತೇರ ಹರಿಸೇನು
ಹೆಜ್ಜೆಜ್ಜಿಗು ಕಾಯ ಏ ಹೊಡಿಸೇನು ....ಗಂಧವೇನೆ



ಹೆಜ್ಜೆಜ್ಜೆಗು ಕಾಯ ಹೊಡಿಸೇನು ಮಲ್ಲಾಡ
ಯಾಪಾರಕೋದಾರು ಏ ಬರಲೀಗ ....ಗಂಧವೇನೆ

ಎಂಬುದಾಗಿ ಗಂಡನ ಬರವನ್ನು ನಿರೀಕ್ಷಿಸಿ, ದೇವರಿಗೆ ಹರಕೆ ಹೊತ್ತು, ಮನೆಗೆ ಬಂದು ಕೆಮ್ಮಣ್ಣ ಇಳಿಸಿ,

ಬಾರಪ್ಪ ಕಾಳಿಂಗ ಕುಡಿವಂತೆ ನೊರಹಾಲ
ಚಂದವುಳ್ಳ ಮದಗಾಕೆ ಏ ನಡಿಯಪ್ಪ ....ಗಂಧವೇನೆ
ಮುಂದೆನೆ ನೀ ನಡಿಯೋ ಹಿಂದೆ ನಾ ಬರುತಿನಿ
ಐಭೋಗದ ಮದಗಾಕೆ ಏ ನಡಿಯಪ್ಪ ....ಗಂಧವೇನೆ

ಕೆರೆಗೆ ಹಾರವಾಗಲೇಬೇಕೆಂಬ ನಿರ್ಧಾರದ ಬಗ್ಗೆ ಕೆಂಚವ್ವನದು ಎರಡು ಮಾತಿಲ್ಲ. ಹಾಗಾಗಿಯೇ ಅವಳು "ಮುಂದೆನೆ ನೀ ನಡಿಯೋ ಹಿಂದೆ ನಾ ಬರುತಿನಿ, ಐಭೋಗದ ಮದಗಾಕೆ ಏ ನಡಿಯಪ್ಪ" ಎಂಬುದಾಗಿ ಸರುಪಾಗೆ ನಿರಾಧಾರವಾಗಿ ಹೇಳುತ್ತಾಳೆ. ಬಲಿಯಾಗಲು ಯಾವ ಹೆದರಿಕೆಯಿಲ್ಲವೆಂಬುದು ಸುಸ್ಪಷ್ಟವಾಗುತ್ತದೆ. ಆದರೆ ತುಂಬು ಗರ್ಭಿಣಿ, ಗಂಡನ ಮೋರೆಯನ್ನು ನೋಡಬೇಕೆಂಬ ಒಂದೇ ಹಂಬಲು ಕಾಡುತ್ತಿದೆ. ಹದಿಬದಿಗೆ ಇರಬೇಕಾದ ಗುಣವಲ್ಲವೆ ಅದು? ಒಟ್ಟಾರೆ ಕೆಂಚಮ್ಮನ ದೃಢನಿರ್ಧಾರ ಕನ್ನಡನಾಡಿನ ಮಹಿಳೆಯರಿಗೆಲ್ಲಾ ಆದರ್ಶಪ್ರಾಯವಾದುದಲ್ಲವೆ?

ಬಸುರಿ ಕೆಂಚಮ್ಮನಿಗೆ ಬ್ಯಾನಿ ಬರಲಾರಂಭಿಸುತ್ತದೆ. ಮಾವ ಮಲ್ಲನಗೌಡ ತಕ್ಷಣ ಸೂಲ ಬಲ್ಲವಳಾದ ಸಂಗವ್ವಳನ್ನು ಕರೆತರುತ್ತಾನೆ. ಕೋಳಿ ಕೂಗೋ ಹೊತ್ತು, ಶರಣರೇಳೋ ಹೊತ್ತಿನಲ್ಲಿ 'ದೇವಿ ಗಂಡುಮಗನ ಜನಿಸ್ಯಾಳೆ.' ಜನಿಸಿದ ಮಗುವಿಗೆ ಜನಪದ ವೈದ್ಯದ ಸೇವೆ ಸಾಗಿದ ರೀತಿಯಿದು:

ಚಿನ್ನಾದ ಸೂಜಿಲಿ ಚುಟಿಕೆಯನ್ನಾಕಿ
ಮುತ್ತಿನ ಕುಡುಗೋಲಲಿ ಹುರಿಗಾಳ ಕಡಿದು
ಅಳ್ಳೆಬೆಳ್ಳುಳ್ಳಿಯ ಕಿವಿಗೊಳಗಿಟ್ಟು
ಸುಡುವ ಪನ್ನೀರಲ್ಲಿ ತೊಡೆಗಾಳ ತೊಳೆದು
ಬಾಣಂತಿಗೆ ಬಜೆಯ ತಿನ್ನಿಲಿತ್ತಾರು....

ಪದ್ಧತಿ ಪ್ರಕಾರ, ಹೊನ್ನಾಳಿಯ ಚೆನ್ನಪ್ಪಸ್ವಾಮಿಗಳನ್ನು ಕರೆಯಿಸಿ, ಮಗುವಿಗೆ ಲಿಂಗ ಧಾರಣೆಯನ್ನು ನೆರವೇರಿಸಿ, 'ಸಣ್ಣಗೂಳೇಶ'ನೆಂದು ಹೆಸರಿಟ್ಟು, ಮುತ್ತೈದೆಯರು ಜೋಗುಳ ಹಾಡುತ್ತಾರೆ. ನಂತರ, ಬಾಣಂತಿ ಕೆಂಚವ್ವನು ಸಹ ಮಗನ ತೊಟ್ಟಲಿಡಿದು,

ಅಂಚ ನೀ ಮಲಗೋ ಚಂದ ನೀ ಮಾಲಗೋ
ತಿರುಪತಿ ಗುಡಿಯೊಳ ತಿರ್ಥ ನೀ ಮಲಗೋ ....ಜೋ ಜೋ
ಮಾವ ಮಲ್ಲೇಶನ ಮುಮ್ಮಗನೆ ಮಲಗೋ
ಅತ್ತೆ ಮಲ್ಲಿಗುದೇವಿ ಮುಮ್ಮಗನೆ ಮಲಗೋ ....ಜೋ ಜೋ
ಗಂಡ ಗೂಳೇಶನ ಚಂಡೂವೆ ಮಲಗೋ
ಕೆರೆಗ್ಹೋಗ ಕೆಂಚಮ್ನ ಕಮಲ ನೀ ಮಲಗೋ ....ಜೋ ಜೋ

ಎಂಬುದಾಗಿ ಜೋಗುಳ ಹಾಡಿ, ಹರಸಿ ಮಲಗಿಸುತ್ತಾಳೆ. 'ತಿರುಪತಿ ಗುಡಿಯೊಳ ತೀರ್ಥ ನೀ' 'ಗಂಡ ಗೂಳೀಶನ ಚಂಡೂವೆ', 'ಕೆರೆಗ್ಹೋಗೊ ಕೆಂಚಮ್ಮ ಕಮಲ ನೀ'— ಎಂಬ ಅಲಂಕಾರಗಳು ಹೇಗೆ ಒಂದಕ್ಕಿಂತ ಒಂದು ಸುಂದರವಾಗಿ ಮೂಡಿಬಂದಿವೆ ಯೆಂಬುದನ್ನು ಗಮನಿಸಬಹುದು. ಶಿಷ್ಟಕವಿಗಳ ಕಾವ್ಯಾಲಂಕಾರಗಳಿಗೇನೂ ಜಾನ ಪದಾಲಂಕಾರ ಕಡಿಮೆಯಿಲ್ಲ ಎಂಬುದನ್ನು ಸ್ಪಷ್ಟಪಡಿಸುತ್ತವೆ ಈ ಅಲಂಕಾರಗಳು.

ಕೆಲವು ತಿಂಗಳು ಕಳೆಯುತ್ತವೆ. ಮಲ್ಲನಗೌಡ ಸೊಸೆ ಕೆಂಚವ್ವ ಬಳಿ ಬಂದು, "ಕೆರೆ ಗಂಗವ್ವ ಪೂಜೆ ಮಾಡಬೇಕು. ಇದರ ಕಾರುಭಾರವನ್ನೆಲ್ಲಾ ನೀನೆ ವಹಿಸಿ ಕೊಳ್ಳಬೇಕು" ಎಂದು ಆಜ್ಞೆ ಮಾಡುತ್ತಾನೆ.

ಮಾವನ ಮಾತು ಅರ್ಥಮಾಡಿಕೊಳ್ಳದಷ್ಟು ದಡ್ಡಳೇನಲ್ಲ ಕೆಂಚಮ್ಮ. ಅವಳಿಗೆ ತನ್ನ ಭವಿಷ್ಯ ತಿಳಿದಿದೆ. ಆದರೆ ಗಂಡನ ಮುಖ ನೋಡಬೇಕೆಂಬ ಹಂಬಲ ಈಡೇರಲಿಲ್ಲ. ಕೊನೆಗೆ ಹೆತ್ತವರ ಮೋರೆಯನ್ನಾದರೂ ನೋಡುವ ಆಸೆಯುಂಟಾಗಿ, ತೌರಿಗೆ ಹೋಗಿ ಬರಲು, ಮಾವನ ಅನುಮತಿಯನ್ನು ಕೇಳುತ್ತಾಳೆ. 'ಉಗುಳಾರ ಹೊತ್ತಿಗೆ ಬರತೀನಿ' ಎಂದು ಬಲಗೈ ಭಾಷೆ ಕೊಟ್ಟು, ಎಡಗೈ ನಂಬಿಕೆ ಕೊಟ್ಟು ತವರಿಗೆ ಬರುತ್ತಾಳೆ.

ತೌರಿಗೆ ಈ ಮುಂಚೆಯೇ ತಾನು ಕೆರೆಗೆ ಹಾರವಾಗುವ ವಿಷಯವನ್ನು ಕೆಂಚವ್ವ ತಳಾರನ ಸಂಗಡ ಸುದ್ದಿ ಕಳುಹಿಸಿದ್ದಳು. ಆದಾಗ್ಯೂ ತೌರಿನಿಂದ ಯಾವ ಪ್ರತಿಕ್ರಿಯೆ ಇಲ್ಲ. ಈಗ ಕೆಂಚವ್ವ ಮಗನ ಕರಕೊಂಡು ತಾನೇ ಬಂದಿದ್ದಾಳೆ. ಮಗಳನ್ನು ಕಂಡ ತಾಯಿ ಅಳುವ ಚಿತ್ರಣ ಹೃದಯ ವಿದ್ರಾವಕವಾಗಿದೆ :

ಗುಬ್ಬಿ ಗೂಡ ಅಳಸಿದ್ನ ಅಬ್ಬಿಗೂಡ ಅಳಸಿದ್ನ ಹರಹರನೆ।
ರುದ್ರಾಕ್ಷಿಸರವ ಒಡೆದಿದ್ನ ಶಿವಶಿವನೆ ।

ಕೆಂಚವ್ನ ಬಸುರೀಲಿ ಕೆರೆಗೆ ನಾ ಹೋಗಿದ್ನ ಹರಹರನೆ।
ಕೆರೆಯ ಗಂಗವ್ನ ಬಯ್ದಿದ್ನ ಶಿವಶಿವನೆ।

ಗಂಗೆ ಒಳಗೆ ನಾನು ಮುಂಬಲ್ಲ ಬೆಳಗಿದ್ನ ಹರಹರನೆ।
ಗಂಗೆ ಒಳಗೆ ನಾನು ಉಗುಳಿದ್ನ ಶಿವಶಿವನೆ।

ಕಾಗೆಗೂಡ ಅಳದಿದ್ನ ಗೂಗೆ ಗೂಡ ಅಳದಿದ್ನ ಹರಹರನೆ।
ಇರುವೆ ಕಾಲಲ್ಲಿ ತುಳಿದಿದ್ನ ಶಿವಶಿವನೆ ।
ಅಂದವುಳ್ಳ ಮದಗಾಕೆ ಹಡದಿದ್ನ ಹರಹರನೆ।

ಎಂಬುದಾಗಿ ತಾಯಿ ಬೋರಿ ಬೋರಾಡಿ ಅಳುತ್ತಾಳೆ. ಸಮಾಧಾನ ತಂದುಕೊಂಡು ಮಗಳನ್ನು ಕುರಿತು,

ಬಿಡುವಾಕೆ ಅಪ್ರಿಚ್ಛಲ್ಲ ಕೊಡುವಾಕೆ ಅಪ್ರಿಚ್ಛಲ್ಲ
ಹುಟ್ಟದಂದೀಗೆ ಪಡವಣಿಗೆ ....ಸೋ
ತಂದವರಿಗೆ ಮಗುಳಿ ಇದಿರೇನೆ ನೀನಿನ್ನು
ಸಂಭ್ರಮದ ಕೆರೆಗೆ ದಯಮಾಡೆ ....ಸೋ



ತಾಯಿ ಹೀಗೆ ನುಡಿದರೆ ಅಣ್ಣಂದಿರು,

ತಂದವರು ಅವರು ಏನೇ ಮಾಡಿದಾರು
ಕೊಟ್ಟವರಿಗೆ ತಂಗಿ ಇದರೇನೇ ....ಸೋ
ಕೊಟ್ಟವರಿಗೆ ತಂಗಿ ಇದರೇನೇ ನೀನಿನ್ನು
ಸತ್ಯಾವುದ ಕೆರೆಗೆ ದಯಮಾಡೆ ....ಸೋ

ಎಂಬುದಾಗಿ ಹೇಳುವಲ್ಲಿ—'ಊರಿನ ಹಿತಕ್ಕಾಗಿ ಕೆಂಚವ್ವನ ಜೀವ ಬಲಿಯಾಗಲೇಬೇಕು' ಎಂಬ ಮಾತಿಗೆ ಒತ್ತು ಕೊಟ್ಟಿದ್ದಾರೆ ಹೊರತು, ಅವಳ ಬಲಿಗೆ ಹೆದರಿಲ್ಲ, ಆದರೆ ಅಳಕು ಮಾತ್ರವಿದೆ ಎಂಬುದು ಸ್ಪಷ್ಟವಾಗುತ್ತದೆ. ಇಲ್ಲಿ ತೌರಿನವರ ತ್ಯಾಗವೇನು ಕಡಿಮೆ ಯಾದುದಲ್ಲವೆಂಬುದು ಕಥೆಗೆ ಮತ್ತಷ್ಟು ಮೆರುಗು ಕೊಟ್ಟಿದೆ.

ಕೆಂಚವ್ವನೇನೋ ಕೆರೆಗೆ ಹಾರವಾಗಲು ಸಿದ್ಧಳಿದ್ದಾಳೆ. ಆದರೆ ವ್ಯಾಪಾರದಿಂದ ಬಂದ ಗಂಡ ಪರದೇಶಿಯಾಗಬಾರದಲ್ಲ ಎಂಬ ದೂರದೃಷ್ಟಿಯಿಂದ,

ನಾ ಕೆರೆಗೆ ಹೋಗುತೀನಿ ನನ ಗಂಡ ಪರದೇಶಿ
ನನ ಗಂಡಾಗೆ ತಂಗಿ ಕೊಡೀರಣ್ಣ ....ಲಿಂಗದೇವ

ಎಂಬುದಾಗಿ ತಂಗಿ ಸಣ್ಣಕೆಂಚವ್ವನನ್ನು ತನ್ನ ಗಂಡನಿಗೆ ಕೊಡಬೇಕೆಂದು ಕೇಳುತ್ತಾಳೆ. ಕೆರೆಗ್ಹೋಗ ತಂಗ್ಯವ್ವ ಆಶೆ ಇಡೇರಿಸಲು ಅಣ್ಣಂದಿರು, ಸಣ್ಣಕೆಂಚವ್ವನನ್ನು ಕೊಡಲು ಒಪ್ಪಿದರು. ಆಗ ಕೆಂಚಮ್ಮ ತನ್ನ ತಂಗಿಗೆ ಇಳ್ಯಾವಯಿಟ್ಟು, ಮಣಮಣ ಬಂಗಾರ ಹಾಕಿ ಸಭೆಗೆಲ್ಲ ಸಕ್ಕರೆ ಹಂಚಿ ತನ್ನ ತೌರೂರನ್ನು ಕೊನೆಯ ಬಾರಿಗೆ ನೋಡುತ್ತಾ, ತಾಯಿಗೆ ಶರಣಮಾಡಿ,

ಎಲ್ಲಾ ಹೆಣುಮಕ್ಕಳು ಗಂಡನ ಮನಿಗ್ಹೋಗ್ತಾರೆ
ನಾನೋಗ್ತಿನವ್ವ ಮದಗಾಕೆ ....ದೇವಾರುದೇವ

ಎಂಬುದಾಗಿ ಹೇಳುವ ಕೆಂಚಮ್ಮ, ತೌರಿನವರಿಗೆ ಸಾಕ್ಷಾತ್ ದೇವತೆಯಂತೆ ಕಂಡಳು. ಅವಳ ತ್ಯಾಗ ಅನುಪಮವೆಂದು ಬಗೆದರು. ಸೋಜಿಗಪಟ್ಟರು. ಊರೆಲ್ಲಾ ನೆರೆದು ಕೆಂಚವ್ವನನ್ನು ಹೂವಿನ ಉಜ್ಜಾಯದಲ್ಲಿ ಕೂರಿಸಿ, ಕಣ್ತುಂಬಾ ನೋಡಿ, ಕಂಬನಿದುಂಬಿ,

ನರಲೋಕದೊಳಗೆ ಇರುವಂತ ತಂಗ್ಯಲ್ಲ
ದೇವಲೋಕಕು ನೀನೆ ಸಲವವ್ವ ....ದೇವಾರುದೇವ

ಎಂದು ಹೇಳಿ, ಮನಿಗೊಂದು ಸೀರೆ ಉಡಿಸಿ, ಮನಿಗೊಂದು ಸೇರು ಮಡಿಲಕ್ಕಿ ಹಾಕಿ ಹಾಡಿ ಹರಸಿ ಕಳುಹಿಸುತ್ತಿರುವಾಗ, ಸತಿವಂತೆ ಕೆಂಚಮ್ಮನ ಹೂವಿನ ಉಚ್ಚಾಯವನ್ನು ನೋಡಲು ಹೊರಟು ನಿಂತ ನೀರೆಯರ ಗಡಿಬಿಡಿ ಸಂಭ್ರಮ ಹೇಳತೀರದು:

ಬಾರಕ್ಕ ಜಾಣೆ ತೇರಾ ನೋಡಾನ ಬನ್ನಿರಿ
ಹಾಲ ಮಾರರ ಕೇರಿ ನೂಲು ಮಾರರ ಕೇರಿ
ಜಂಗಮರ ಕೇರಿ ಒಳಗೆಲ್ಲ ....ಬಾರಕ್ಕ ಜಾಣೆ

ಸೀರೆ ಉಡುವ ಹೆಣ್ಣುಮಕ್ಕಳು ಸೀರೆಯ ಉಟ್ಟ್ಯಾರೆ
ಒಂದೊಂದು ನರಿಗೆ ಮರುತಾರೆ ....ಬಾರಕ್ಕ ಜಾಣೆ
ಕುಬುಸ ತೊಡುವ ಹೆಣ್ಣುಮಕ್ಕಳು ಕುಬುಸ ತೊಟ್ಟ್ಯಾರೆ
ಒಂದು ತೋಳನ್ನು ಮರುತಾರೆ ....ಬಾರಕ್ಕ ಜಾಣೆ
ವಾಲೆ ಇಡುವ ಹೆಣ್ಣುಮಕ್ಕಳು ವಾಲೆಯ ಇಟ್ಟ್ಯಾರೆ
ವಾಲೆ ಮೂಗಿಗೆ ಇಡುತಾರೆ ....ಬಾರಕ್ಕ ಜಾಣೆ

ಹಾಸ್ಯ, ಶೃಂಗಾರರಸಗಳ ಸಮ್ಮಿಶ್ರಣ ಈ ಜಾನಪದಕ್ಕೆ ಶರಣಾಗಿದೆ ತಾನೇತಾನಾಗಿ.

ಕೆಂಚಮ್ಮನ ಸಂಭ್ರಮದ ಉಚ್ಛ್ರಾಯ ಸಾಗಿ ಮಾಸೂರು ಮನೆಗೆ ಬಂದು ನಿಂತಿತು. ಕೊಟ್ಟ ಮಾತಿನಂತೆ ತಪ್ಪದೆ ಬಂದ ಸೊಸೆ ಕೆಂಚಮ್ಮಳನ್ನು ಕಂಡ ಮಾವ ಮಲ್ಲನಗೌಡನಿಗೆ ಅಚ್ಚರಿ ಮತ್ತು ದುಃಖ ಒಟ್ಟಿಗೆ ಮೂಡಿದವು. ಮನೆಗೆ ಬರುತ್ತಿದ್ದಂತೆಯೇ ಕೆಂಚಮ್ಮ "ಬದುಕೇನ್ರಿ ಮಾವ ಬದುಕೇಳ್ರಿ ?" ಎಂದು ಕೇಳಿದ್ದಕ್ಕೆ "ಮನೆಗೆ ಸುಣ್ಣ ಕೆಮ್ಮಣ್ಣು ಬಳಿದು, ಕೆರೆಯ ಗಂಗಮ್ನ ಮಾಡಬೇಕು" ಎನ್ನುತ್ತಾನೆ.

ಕೆಂಚಮ್ಮ ಮನೆ ಮಠ ಸಾರಿಸಿ, ಸುಣ್ಣ ಬಳಿಯುತ್ತಿರುವಾಗ ಗಂಡನ ನೆನಪಾಗಿ ಕಣ್ಣೀರು ಹಾಕುತ್ತಾಳೆ. ಇದ ಕಂಡು ಅತ್ತೆ ಮಲ್ಲಿಗುದೇವಿ, ಯಾಕೆ ಕೆಂಚಮ್ಮ ಅಳುತೀಯ ಅಂದಾಗ,

ಕೋಣೆ ಸಾರಿಸುವಾಗ ಸಿಡಿಯಿತು ಕಸವು
ಅದರಿಂದ ಕಣ್ಣಲಿ ನೀರುಕ್ಕಿತತ್ತೆ

—ಎಂದು ನೆಪ ಹೇಳುತ್ತಾಳೆ. ಅಳುತ್ತಿದ್ದ ಮಗುವಿಗೆ ಹಾಲು ಕುಡಿಸಿ, ಮಲಗಿಸಿ, ಗಂಗೆಯ ಪೂಜೆಗೆ ಎಡೆಬಿಡಾರಗಳನ್ನು ಅಣಿ ಮಾಡುತ್ತಾಳೆ.

ಒಂದು ಬಂಡಿ ಕಾಯಿ ಒಂದು ಬಂಡಿ ಹಣ್ಣು
ಮತ್ತೊಂದೇ ಬಂಡಿ ನೆನಿಯಕ್ಕಿ ....ಲೀಲಾಲೋಲ
ಒಂದು ಬಂಡಿ ಚಿಗುಳಿ ಒಂದು ಬಂಡಿ ತಂಬಿಟ್ಟು
ಮತ್ತೊಂದೇ ಬಂಡಿ ಅಂಗನೂಲು ....ಲೀಲಾಲೋಲ
ಒಂದು ಬಂಡಿ ಸೀರೆ ಒಂದು ಬಂಡಿ ಕುಬುಸ
ಮತ್ತೊಂದೇ ಬಂಡಿ ಎಡೆಗಾಳೆ ....ಲೀಲಾಲೋಲ

ಹೀಗೆ ಎಲ್ಲವನ್ನೂ ಬಂಡಿಗೆ ತುಂಬಿಸಿ, ಪೂಜೆಮಾಡಿ, ಬಂಡಿಗಳನ್ನು ಸಾಗಲು ಹೇಳುತ್ತಾಳೆ. ಮುಂದೆಮುಂದೆ ಬಂಡಿಗಳು, ಹಿಂದೆಹಿಂದೆ ಕೆಂಚಮ್ಮ ಹೋಗುತ್ತಿರುವ ದೃಶ್ಯ ನೋಡಲು ಮುತ್ತೈದೆಯರು ಮುತ್ತಿಕೊಳ್ಳುತ್ತಾರೆ, ಮಕ್ಕಳು ಸಾಲುಗಟ್ಟುತ್ತವೆ, 'ಜನಜಾತುರಾಗಿ ನೋಡುತ್ತೈತೆ!'

ಬಂಡಿಗಳು ಮದಗದ ಕರೆಗೆ ಬಂದು ನಿಲ್ಲುತ್ತವೆ. ಕೆಂಚಮ್ಮ ಗಂಗಮ್ಮನ ಪೂಜೆ ಮಾಡುತ್ತಾ, ನೆಲ ಸಾರಿಸಿ, ಎಣ್ಣೆದೀಪ ಹಚ್ಚಿ, ಮಲ್ಲಿಗೆ, ಸಂಪಿಗೆ, ತುಂಬೆ, ಕೇದಗಿ, ಬಿಲ್ವ ಮುಡಿಸಿ, ಹೊಂಬಾಳೆ ತೊಡಿಸಿ, ಇಂಪಾಗಿ ಶಿವಗೀತೆ ಹಾಡುತ್ತಾ, ಎಡೆಗಳನ್ನು



ಹಾಕಿ ಕಾಯ ಹೊಡೆದು, ಕರ್ಪೂರ ಬೆಳಗಿ, ಕೈಜೋಡಿಸಿ ಗಂಗಮ್ಮನನ್ನು ಸ್ತುತಿಸುತ್ತಾಳೆ. ಹೊನ್ನಾಳಿಯ ಚನ್ನಪ್ಪಸ್ವಾಮಿಗಳು ಬಂದು ಕೆರೆಗೆ 'ದೀಕ್ಷಾವ' ಮಾಡಿ, ಕೆಂಚಮ್ಮನನ್ನು ಹರಸಿ, ಪ್ರಸಾದ ಸ್ವೀಕರಿಸಿ ತೆರಳುತ್ತಾರೆ. ಪೂಜೆ ಮುಗಿದನಂತರ ಸರ್ವಜನರೂ ಊಟಮಾಡಿ, ನಂತರ ಬಂಡಿಗೆ ಸಾಮಾನು ತುಂಬಿ, ಗಂಗೆಗೆ ಶರಣಮಾಡಿ ಊರ ದಾರಿ ಹಿಡಿಯುತ್ತಾರೆ.

ಮುಂದೆಮುಂದೆ ಬಂಡಿಗಳು ಹಿಂದೆಹಿಂದೆ ಕೆಂಚಮ್ಮ ಸಾಗುತ್ತಿರುವಾಗ, ಅತ್ತೆ ಮಲ್ಲಿಗುದೇವಿ ಏನೋ ನೆನಪಾದಂತೆ ತಟ್ಟನೆ ನಿಂತು, ಅಳಿಯನ ಚಿನ್ನದ ಒಳಲೆಯನ್ನು ಕೆರೆಯಲ್ಲಿ ಬಿಟ್ಟು ಬಂದಿರುವುದಾಗಿ, ಅದನ್ನು ತರಲು ಮಗಳು ಮಲಕವ್ವನಿಗೆ ಹೇಳುತ್ತಾಳೆ. ಮಲಕವ್ವ ಒಳಲೆ ತರಲು ಹೋದಾಗ ಗಂಗಾದೇವಿ,

ನಿನ್ನನೆ ಅಂತಾರು ಅರವತ್ತು ಮಂದಿ ಬಂದಾರೆ
ಕೊಡುವುದಿಲ್ಲವ್ವ ಅನುತಾಳೆ ದೇವಾರು ದೇವ
ನಿನ್ನ ಅಳಿಯನ ಒಳಲೆ ನಿನಗೆ ಕೊಡುವುದಿಲ್ಲ
ಕಳಿಸೋಗವ್ವ ಕೆಂಚವ್ನ ಅನುತಾಳೆ ದೇವಾರು ದೇವ

ಬರಿಗೈಲಿ ಬಂದ ಮಗಳನ್ನು ನೋಡಿದ ಅತ್ತೆ ಮಾವ ಕೆಂಚವ್ವನನ್ನು ಒಳಲೆ ತರಲು ಕಳಿಸುತ್ತಾರೆ. ಕೆರೆಗೆ ಬಂದ ಕೆಂಚವ್ವ ಒಳಲೆ ತೆಗೆದುಕೊಂಡು, ಗಂಗವ್ವನಿಗೆ ಶರಣ ಮಾಡಿ ಒಂದೊಂದು ಹೆಜ್ಜೆಯನಿಟ್ಟು ಮೆಟ್ಟಿಲು ಹತ್ತುವಾಗ,

ಮಾತಾಡೆ ಗಂಗ ಮಾತಾಡೆ
ಒಂದೊಂದು ಹೆಜ್ಜೆಯ ಇಟ್ಟಾಳು ಕೆಂಚವ್ವ
ಅಳ್ವೆಂಬೊ ಭಾವಾಕೆ ಬರುತಾಳೆ ಮಾತಾಡೆ
ಅಳ್ವೆಂಬೊ ಭಾವಾವ ಬಿಟ್ಟಳು ಸಿರಿಗಂಗೆ
ತೊಡೆಯೆಂಬೊ ಭಾವಕ್ಕೆ ಬರುತಾಳೆ ಮಾತಾಡೆ
ತೊಡೆಯೆಂಬೊ ಭಾವಾವ ಬಿಟ್ಟಾಳು ಸಿರಿಗಂಗೆ
ಸೊಂಟೆಂಬೊ ಭಾವಕ್ಕೆ ಬರುತಾಳೆ ಮಾತಾಡೆ
ಸೊಂಟೆಂಬೊ ಭಾವಾವ ಬಿಟ್ಟಾಳು ಸಿರಿಗಂಗೆ
ಎದೆಯೆಂಬೊ ಭಾವಕ್ಕೆ ಬರುತಾಳೆ ಮಾತಾಡೆ

—ಹೀಗೆ ಕ್ರಮವಾಗಿ ತೊಡೆ, ಸೊಂಟ, ಎದೆ ಭಾವಕ್ಕೆ ಬಂದು, ಕೆಂಚವ್ವ ಗಂಗೆಯಲ್ಲಿ ಲೀನವಾಗುತ್ತಿರುವ ಸಮಯದಲ್ಲಿ ಗಂಗೆ ಕಾಣಿಸಿಕೊಂಡು "ಸಂಭ್ರಮದ ಕೆರೆಗೆ ಅಂಜದಿರವ್ವ ಮಗಳೆ, ಬಂಗಾರದ ಗುಡಿಯು ಕೆರೆಯಾಗೆ ಕಟ್ಟಿದೀನಿ ಅಂಜದಲಿ ಬಾರೆ ನನು ಮಗಳೆ" ಎಂದು ಹೇಳಿ ಕೆಂಚವ್ವನನ್ನು ಕೈಹಿಡಿದು ಕರೆದುಕೊಳ್ಳುತ್ತಾಳೆ.

ಇತ್ತ, ವ್ಯಾಪಾರಕ್ಕೆ ಹೋಗಿದ್ದ ಗೂಳೇಶನಿಗೆ ಸ್ವಪ್ನದಲ್ಲಿ ಕೆಂಚಸ್ತ್ರೀ ಮಂಚ ಕೆರೆಯಲ್ಲಿ ತೇಲಿದಂತಾಗಿ, ದಿಗ್ಗನೆದ್ದು, ನಾಗಾಲೋಟದಿಂದ ಬೀಡಿಕೆ ಸಾಗಿಸಿಕೊಂಡು

2

ಮನಿಗೆ ಬರುತ್ತಾನೆ. ಆರು ಜಾವದ ಬತ್ತಿಯಿಂದ ಮಾಡಿದ ಆರುತಿ ಬೆಳಗುತ್ತಾ ರಂಬೇರು ಇವನನ್ನು ಸ್ವಾಗತಿಸಲು ಬಂದಾಗ,

ಆರುತಿಗಾರುತಿ ಮುಂದೆ ಚಂದದಾರುತಿ ಮುಂದೆ
ಮಂದಿಯಾನೆ ಮುಂದೆ ಗಜಮಲಂಕೆ—ರಟ್ಟೆಳ್ಳಿ
ಚಿತ್ತರದ ಗೊಂಬೆ ಇಲವಲವೆ ?

ಎಂದು ಆತಂಕದಿಂದ ಕೇಳುತ್ತಾನೆ. ಅವನು ಬೇಡಿಕೆ ಹೋದಾಗ ಕೆಂಚವ್ವ ಬಿಮ್ಮ ನಿಸಿಯಾಗಿದ್ದಳು. "ಅವಳು ಏನು ಹಡೆದಳೋ ?" ಎಂದು ತಂಗಿಯನ್ನು ಕೇಳುತ್ತಾನೆ. ತಂಗಿ ಮಲಕವ್ವ ಅಣ್ಣನಿಗೆ ಗಂಡುಮಗನಾದ ವಿಷಯ ತಿಳಿಸುತ್ತಾಳೆ. ಸಂತಸದಿಂದ ಬಾಣಂತಿಮನೆಯ ಬಾಗಿಲ ಬಳಿ ಬಂದು "ಕೆಂಚಸ್ತ್ರೀ....ಕೆಂಚಸ್ತ್ರೀ...."ಎಂದು ಹಲವಾರು ಬಾರಿ ಕರೆದರೂ ಮಡದಿ ಓಗೊಡದಿರಲು, ಹೆಚ್ಚಾದ ದುಗುಡದಿಂದ "ಎಷ್ಟುನೆ ಕರೆದರೂ ಸುಮ್ಮಾನೆ ಐದೀಯ ಬಿಮ್ಮೀನೆ ನಿನಗೆ ಬಿಗುವೇನೆ, ಕೆಂಚಸ್ತ್ರೀ ಬೆನ್ನಾಗಳಲುವೆ ಮುರಿದೇನು" ಎಂದು ಚಡಪಡಿಸುತ್ತಾನೆ. ಅಣ್ಣನ ಸ್ಥಿತಿಯನ್ನು ಕಂಡು ತಂಗಿ ಮಲಕವ್ವನ ದುಃಖ ಇಮ್ಮಡಿಯಾಗಿ,

ಬೇಡ ಬೇಡೆಂದರೆ ನೀರೀಗೆ ಹೊದಳಪ್ಪ
ಬಂದಿ ಕಳಕೊಂಡು ಕೆರಿಗೆ ಬಿದ್ಲು

ಎಂದು ಬಿಕ್ಕುತ್ತ ಹೇಳುತ್ತಾಳೆ. ವಿಷಯ ತಿಳಿದ ಗೂಳೇಶ ಅತಿ ದುಃಖತಪ್ತನಾಗಿ ಒಂದೇ ಉಸರಿಗೆ ಕೆರೆಯ ಏರಿಯ ಮೇಲೆ ಬಂದು ಬೋರಬೋರಾಡಿ ಅಳುತ್ತ,

ಅತ್ತೆ ಬೈದಾರೇನೆ, ಮಾವ ಬೈದಾರೇನೆ
ಏನು ಬಂತು ನಿನಗೆ ದುರುಮರಣ

ಎಂಬುದಾಗಿ ಪ್ರಶ್ನಿಸುತ್ತಾನೆ. ಆಗ ಕೆರೆಯಿಂದ ಕೆಂಚವ್ವ,

ಬ್ಯಾಡ ಬ್ಯಾಡೆಂದರೆ ನಾನೆ ನೀರೀಗೆ ಬಂದೆ
ಬಂದಿ ಕಳಕೊಂಡು ಕೆರಿಗೆ ಬಿದ್ದೆ
ಬಂದಿಯ ಕಳಕೊಂಡು ಕೆರಿಗೆ ಬಿದ್ದೆ ಗೂಳೇಶ
ನನ ಮರೆತು ಊರ ನಡೆಸಯ್ಯ

ಎಂದು ಉತ್ತರಿಸುತ್ತಾಳೆ. "ನೀನಾದರು ಕೆರೆಗ್ಹೋದೆ ನಾನಾದರು ಪರದೇಶಿ" ಎಂಬ ಗೂಳೇಶನ ಗೋಳನ್ನು ಕೇಳಿದ ಕೆಂಚವ್ವ "ಕಿರಿಯ ಕೆಂಚವ್ವಾಗೆ ಇಳ್ಯಾವಿಟ್ಟು ಬಂದಿದೀನಿ, ಹೋಗಿ ಲಗ್ಗುನವ ಆಗಿರಯ್ಯ" ಎಂದು ಸಮಾಧಾನ ಹೇಳುತ್ತಾಳೆ. ಆಗ ಗೂಳೇಶ,

ನರಲೋಕದೊಳಗೆ ಇರುವಂತ ಸತಿಯಲ್ಲ
ದೇವಲೋಕಕು ನೀನೆ ಸಲವವ್ವ

ಎಂದು ಕೆಂಚಮ್ಮನಿಗೆ ಕೈಮುಗಿದು ಮನೆಗೆ ಬರುತ್ತಾನೆ. ಆಗ ತಂದೆ ಮಲ್ಲನಗೌಡ



ಮಗನ ಮದುವಿಗೆಸಿದ್ಧತೆ ಮಾಡುತ್ತಾನೆ. ಎಲ್ಲರೂ ಗೂಳೇಶನನ್ನು ಸಂತವಿಟ್ಟು, ಮದುಮಗನನ್ನು ಮಾಡುತ್ತಾರೆ. 'ಒಂದಾನೆ ಗಾಡ್ಯಲ್ಲ, ಎರಡಾನೆ ಗಾಡ್ಯಲ್ಲ ಹನ್ನೆರಡು ಗಾಡಿಗಳು' ಮದುವಣಿಗನೊಂದಿಗೆ ರಟ್ಟೆಹಳ್ಳಿಗೆ ಹೋಗುತ್ತಿರುವಾಗ, ಗಾಡಿಗಳು ಮದಗದ ಕೆರೆಯ ಏರಿಯ ಮೇಲೆ ಬಂದಾಗ, ಗೂಳೇಶನಿಗೆ ಕೆಂಚಮ್ಮನ ನೆನಪುಬಂದು, "ಕೆರಿಯಾಗೆ ಇರುವ್ವೋಳೆ ಕರೆದರೆ ಓ ಎನ್ನುವ್ವೋಳೆ" ಎಂದು ಹೇಳುತ್ತಿದ್ದಂತೆಯೇ, ಕೆಂಚಮ್ಮ ಗಂಡನ ಕಣ್ಣಿಗೆ ಮಾತ್ರ ಕಾಣಿಸುತ್ತಾ, ಅವನಿದ್ದ ಗಾಡಿಯ ಬಳಿಬಂದು,

ಹರಹರನೆ ಏನೆಂದು ಗಂಡಾನ ಕೇಳುತಾಳೆ
ಹಾಡಹೇಳುತೀನಿ ಹಸೆಯ ಬರೆಯೂತೀನಿ
ಶಿವಶಿವನೆ ನನಗೀಟು ಬಾನ ಇಡುತೀರಾ ?

ಎಂದು ಕೇಳಲು, ಅದಕ್ಕೆ ಗೂಳೇಶ,

ಮಾಡಾದೇ ಮದಿವ್ಯೆಂತೆ ಬಾನಕೇನು ಕೊರತೆ
ಹರಹರನೇ ಹತ್ತಿ ಬಾ ಬಂಡಿ ಅನುತಾನೆ.

ಗಂಡ ತನ್ನನ್ನು ಯಾವ ಸೀಮೆ ದೆವ್ವ, ಯಾವ ಸೀಮೆ ಪೀಡೆ ಎಂದು ಬಗೆಯದಿರಲೆಂದು, ಕೊಳ್ಳಾಗುಳ ಲಿಂಗ ತೋರಿಸುತ್ತಾಳೆ. ಗಂಡನಿಗೆ ನಂಬಿಕೆಯಾಯಿತೆಂದು ತಿಳಿದು ಗಂಡಿದ್ದ ಬಂಡಿಯನ್ನೇರುತ್ತಾಳೆ. ಆಗ,

ಮದಗದ ಏರಿಯ ಬಿಟ್ಟವು ಮದುವೆಯ ಬಂಡಿ
ಹರಹರನೆ ರಟ್ಟೆಳ್ಳಿಗಾಗ ನಡೆದಾವೆ ಮದುವೆಯ ಬಂಡಿ
ಶಿವಶಿವನೆ ಬೀಗರು ಬಂದೆದುರುಗೊಳುತಾರೆ

ಬಂದ ಮದುವೆಯ ಬಂಡಿಗಳನ್ನು ಸಂಭ್ರಮದಿಂದ ಬೀಗರು ಎದುರುಗೊಂಡು, ಎಲ್ಲಾ ವಿಧಿವಿಧಾನಗಳೊಂದಿಗೆ ಮದುವೆ ನಡೆಯುತ್ತಿರಲು, ಕೆಂಚಮ್ಮ ಹಸೆಯಾನೆ ಬರೆಯೂತ, ಹಾಡಾನೆ ಹೇಳೂತ,

ಸೋಬಾನ ನಮ್ಮ ಮನಿಯಾಗೆ
ಸುವ್ವಿ ಬಾ ಸುವ್ವಿ ಸುವ್ವಿ ಬಾ

ಸೋಬಾನುದ ಮನಿಯಾಗೆ ಕಸವಿಲ್ಲ ಕಡ್ಡಿಲ್ಲ
ಹಣ್ಣು, ಅಡಿಕೆ, ಎಲೆ ಮಲಗೀದೆ

ಹಣ್ಣು, ಅಡಿಕೆ, ಎಲೆ ಮಲಗೀದೆ ರಟ್ಟೆಳ್ಳಿ
ಹೆಣ್ಣು ಮಕ್ಕಳೆಂಥ ಚೆಲುವ್ಯಾರು

ಸೋಬಾನ ಅನ್ನೋದ ಯಾರು ಮಾಡಿದರವ್ವ
ಸೂರ್ಯನ ತಂಗಿ ಧರಣವ್ವ

ಸೂರ್ಯನ ತಂಗಿ ಧರಣವ್ವ ನಿನಪದವು
ನಾಡಿಗೊಂದೊಂದೆ ಹರುದಾವೆ

ಹಾಸ್ಯದಿ ಮದುವೆ ಮಾಡುತ್ತಾಳೆ. ಗಂಡ ಗೂಳೇಶ ತನ್ನ ತಂಗಿಗೆ ತಾಳಿ ಕಟ್ಟಿದ್ದು ಕಂಡು ಆನಂದದಿ ಹಿಗ್ಗಿ, ಗಂಡನಿಗೆ ಹೆಂಡತಿಯ ಹೆಸರು ಹೇಳಿಸುತ್ತಾ,

ಬಂಗಾರ ಬಾಯಿ ಸಿಂಗಾರ ತುಟಿ
ಬೆಲ್ಲ ತಿನ್ನು ಅಂದ್ರೆ ಒಲ್ಲೆ ಅಂತಾಳೆ ಪುಟ್ಟಕೆಂಚಕ್ಕ

ಎಂದು ಒಡಪು ಹೇಳಿಕೊಟ್ಟು, ನೀನೇಳವ್ವ ಅಂದು ತಂಗಿಗೆ ಹೆಸರು ಕೇಳುತ್ತಾಳೆ. ತಂಗಿಗೂ ಒಡಪಿನಲ್ಲಿ,

ಕುದುರೆ ಹೇರಿ ಬರುತಾರೆ
ನಿಲ್ಲದೆ ಕೇರಿ ತಿರುಗುತಾರೆ
ನನ್ನ ಗೂಳೇಶ ಕೈಯ ಬಿಡು ಅನ್ನಬಾರದೆ

ಎಂಬುದಾಗಿ ಹೆಸರು ಹೇಳಿಕೊಡುತ್ತಾಳೆ. ಗೂಳೇಶ ದೊಡ್ಡ ಕೆಂಚವ್ವನು ಮದುವೆಮಾಡುತ್ತಿರುವ ಸಡಗರ ನೋಡಿ, ಅವಳನ್ನೇ ತದೇಕಚಿತ್ತದಿಂದ ನೋಡತೊಡಗುತ್ತಾನೆ. ಆಗ ಕೆಂಚಮ್ಮ ಅವನ ದೃಷ್ಟಿಯನ್ನು ಹೊರಳಿಸಲೋಸುಗ ಗಂಡನಿಗೆ 'ಸಾಸುವೆ' ಇಡುವಂತೆ ಕೇಳಿಕೊಳ್ಳುತ್ತಾಳೆ. ಗೂಳೇಶ ಸಣ್ಣಕೆಂಚಮ್ಮನಿಗೆ 'ಸಾಸುವೆ' ಇಡುವಾಗ ಅವಳನ್ನೇ ನೋಡುತ್ತಿದ್ದಂತೆಯೇ ತಕ್ಷಣ ಕೆಂಚಮ್ಮ ಮಾಯವಾಗಿ ಕೆರೆ ಸೇರುತ್ತಾಳೆ—ಇದು ಮದಗದ ಕೆಂಚಮ್ಮನ ಸಂಕ್ಷಿಪ್ತ ಹಾಡ್ಗತೆಯ ಸಾರ.

ಕಥೆ ಹೀಗೆ ದುರಂತದಿಂದ ಸುಖಾಂತವಾಗಿ ಸಾಗುತ್ತದೆ. ಹಾಡು ಹೇಳುವವರಿಗೆ ಕರ್ಣಾನಂದವಾಗುತ್ತದೆ. ಎರಡೆರಡು ಸಾಲುಗಳಲ್ಲಿ ಒಂದು ರೀತಿಯಾಗಿ ರಗಳೆಯಲ್ಲಿ ಕಥೆ ಹರಿಯುವಂತೆ ಹರಿದಿದೆ. ಹಲವೆಡೆ ಆದಿ ಮತ್ತು ಅಂತ್ಯ ಪ್ರಾಸದ ರಗಳೆಯನ್ನು ಹೋಲುವ ಸಾಲುಗಳನ್ನು ಕಾಣಬಹುದು.

ಉಜ್ಜಣಿ ಸಿದ್ದಮ್ಮಗೆ ಗೆಜ್ಜೆ ತೇರ ಹರಸೇನು
ಹೆಜ್ಜೆಹೆಜ್ಜೆಗೂ ಕಾಯಾ ಮ ಹೊಡಿಸೇನು.

ಕೆಲವು ಪ್ರಸಂಗಗಳಲ್ಲಿ ತ್ರಿಪದಿಗಳೂ ಇಣಕಿವೆ.

ಮಂಕಿಯಾ ಸಿರೋಳೆ ಚಂತಾದ ಬಳಿಯೋಳೆ
ಮಂಚಾದ ಮೇಲೆ ನಗುವ್ರೋಳೆ। ಮಾಸೂರ
ಕೆಂಚವ್ವ ಬಾ ನಮ್ಮ ಮಚನಾಕೆ ॥

ಸೋಬಾನ ಅನ್ನೋದು ಯಾರು ಮಾಡಿದರವ್ವ
ಸೂರ್ಯನ ತಂಗಿ ಧರಣವ್ವ । ಜಿನಪದವು
ನಾಡಿಗೊಂದಂದೆ ಹರುದಾವೆ ॥

ಸಂದರ್ಭಕ್ಕೆ ತಕ್ಕಂತೆ ಇಂಪಾದ ಪಲ್ಲವಿಗಳು ಹಾಡಿನ ನಾದಕ್ಕೆ ತಕ್ಕ ತಾಳ ಹಾಕಿವೆ. ನವರಸಗಳು ಅತ್ತಿತ್ತ ಮೈದೋರಿ ಹಾಡ್ಗತೆಗೆ ಮೆರಗು ಕೊಟ್ಟಿವೆ. ಹಾಡ್ಗತೆಯ



ತುಂಬೆಲ್ಲಾ ಕಾವ್ಯದ ಕಂಪು ಸೂಸಿವೆ. ಸುಂದರ ವರ್ಣನೆ, ಅಲಂಕಾರಗಳಿಗೇನು ಕಡಿಮೆಯಾಗಿಲ್ಲ. ಒಟ್ಟಾರೆ ಕಾವ್ಯದ ಎಲ್ಲಾ ಗುಣಗಳನ್ನು ಒಳಗೊಂಡಿರುವ ಈ ಜನಪದಕಾವ್ಯ ಯಾವ ಶಿಷ್ಟಕವಿಗಳ ಕಾವ್ಯಗಳಿಗೇನೂ ಕಡಿಮೆಯಿಲ್ಲವೆಂದು ಧೈರ್ಯವಾಗಿ ಹೇಳಬಹುದು.

'ಮದಗದ ಕೆಂಚಮ್ಮ'ನ ಈ ಜನಪದ ಕಾವ್ಯ ಕನ್ನಡಮ್ಮನ ಕಾಲ್ಗೆಜ್ಜೆಯಾಗಿ ಕನ್ನಡಿಗರ ಮನ–ಮನೆಗಳಲ್ಲಿ ಸದಾ ಧ್ವನಿಗೂಡಿಸಲಿ.

[ಮದಗದ ಕೆರೆ ಏರಿಯ ಮೇಲೆ ಕೆಂಚಮ್ಮನ ದೇವಾಲಯವಿದ್ದು, ತೇರು, ತೆಪ್ಪೋತ್ಸವ ಮುಂತಾದುವು ಬಹುವೈಭವದಿಂದ ಜರುಗುತ್ತವೆ. ವರ್ಷವಿಡೀ ಭಕ್ತರು ಆರಾಧಿಸಿ, ಹರಕೆಯನ್ನು ಅರ್ಪಿಸಲು ಧಾವಿಸಿ ಬರುತ್ತಿರುತ್ತಾರೆ.]

# ಮುದಗದ ಕೆಂಚಮ್ಮ

## ಕೆಂಚವ್ವ ಬಾ ನಮ್ಮ ವಚನಾಕೆ

ಪದವ ಹಾಡುವ ಮುನ್ನ ಯಾರಾರ ನೆನೆದೇವು
ಎಳ್ಳು ಜೀರಿಗೆ ಬೆಳೆಯೋಳ । ಭೂಮವ್ನ
ಆಕೆಯು ಮೊದಲೆ ಬಲಗೊಂಬೆ ಮಂದಗಮನೆ

ದೊಡ್ಡರ ಹೊಲದಾಗೆ ದಂಟೆನಾಗಿರುವೋಳೆ
ಗಂಟೆಯು ನಾದಾಕ ಮೆರೆಯೋಳೆ । ಸರಸತಿ
ಗಂಟಲ ತೊಡರ ಬಿಡಿಸವ್ವ ಮಂದಗಮನೆ

ಸಾರಿದ ಮನಿಯಾಗ ಸೇರಿ ಕೊಂಡಿರುವೋಳೆ
ತಾಳಾದ ಜತಿಗೆ ಮೆರೆವಳೆ । ಸರಸತಿ
ನಾಲಿಗೆ ತೊಡರ ಬಿಡಿಸವ್ವ ಮಂದಗಮನೆ

ವಂಕಿಯು ಸೀರೋಳೆ ಜಂತಾದ ಬಳಿಯೋಳೆ
ಮಂಚಾದ ಮೇಲೆ ನಗುವೋಳೆ । ಮಾಸೂರ
ಕೆಂಚವ್ವ ಬಾ ನಮ್ಮ ವಚನಾಕೆ ಮಂದಗಮನೆ

ಹಾಡು ಹಾಡೆಂದರೆ ಆಡದಿದ್ದರೆ ಪಾಪ
ಹಾಡು ಕೇಳದಿದ್ದರಿಗೆ ಬಲು ಪಾಪ । ಅವರಿಗೆ
ಮುಂದೈತೆ ಶಿವನ ಯಮಗೊಂಡ ಶಿವ ಶಿವ

ಹೇಳು ಹೇಳೆಂದರೆ ಹೇಳದಿದ್ದರೆ ಪಾಪ
ಹೇಳಿ ಕೇಳದಿದ್ದವರಿಗೆ ಬಲು ಪಾಪ । ಅವ್ರೀಗೆ
ಸಾರಿ ಮುಂದೈತೆ ಯಮಗೊಂಡ ಶಿವ ಶಿವ

ಇಲ್ಲಿಗೆ ಹರಹರ ಇಲ್ಲಿಗೆ ಶಿವಶಿವ
ಇಲ್ಲಿಗೆ ಸಂದು ಪದ ಮುಂದೆ । ಕೈಲಾಸದ
ನಲೇರಿಬತ್ತಿ ಧರಿಸ್ಯಾರಿ ಶಿವಶಿವ

## ಸತ್ಯದನ ಕೆರೆಯು ತೆಗೆಸವ್ವ

ಕುಡಿಯೋಣ ಅಂದರೆ ಕುಡಿಯೋಕೆ ನೀರಿಲ್ಲ
ಹಸನಾದ ಸಿಂಬೆ ಬರಿಗೊಡ । ತಕ್ಕೊಂಡು
ಉಸುರೆಂದು ಬಾವಿ ಇಳುದಾಳೆ ಕೋಲು ಕೋಲೆ

ಕಯ್ಯಚಾಚಿ ನೀರ ಮಗುದಾಳೆ ಮಲಕವ್ವ
ಕಯ್ಯತುಂಬ ನೀರೆ ಬರಲಿಲ್ಲ ಕೋಲು ಕೋಲೆ

ಹಾಲು ಬಾನ ಉಂಡು ನಲವತ್ತು ವೀಳ್ಯ ಮೆದ್ದು
ಉಪ್ಪರಿಗೆ ಒಳಗೆ ಮಲಗಿದ । ಮಲಕವ್ಗೆ
ಗಂಗವ್ವ ಬಂದಿದ್ಲು ಸಪುನಾಕೆ ಕೋಲುಕೋಲೆ

ಸತ್ಯವಂತರ ಮಗಳ ಮತ್ತೊಂದು ಹೇಳತಿನಿ
ಸತ್ಯದನ ಕೆರೆಯ ತೆಗೆಸವ್ವ ಕೋಲುಕೋಲೆ

ನೀರಿಲ್ಲದ ಊರಾಗೆ ನೀರುವಯ ಮಾಡದಂಗೆ
ಬೇಗಾನೊಂದು ಕೆರೆಯ ತೆಗುಸವ್ವ ದೇವ ನೀನೆ

ಗಂಗಿಲ್ಲದ ಊರಾಗೆ ಯಂಗು ಬಾಳೆ ಮಾಡ್ಲಪ್ಪ
ತಪ್ಪನೊಂದು ಕೆರೆಯ ತಗಸಪ್ಪ ದೇವ ನೀನೆ

ತಗಸಾನ ಹೇಳವ್ವ ನಮುಗೇನು ಬಡತನ
ತಗಸಾನೇಳವ್ವ ಅನುತಾನೆ ದೇವ ನೀನೆ

ಎದ್ದನು ಮಲ್ಲನಗೌಡ ಏನಂದು ನುಡಿದಾನೆ
ವಡ್ಡರಿಗೆ ಓಲಿ ಬರೆದಾನೆ ದೇವ ನೀನೆ

## ವಡ್ಡರೆ ಆಗ ಬರುತಾರೆ

ವಡ್ಡರು ನಾಗಣ್ಣ ವಡ್ಡರು ತಿಮ್ಮಣ್ಣ
ವಡ್ಡರಿಗೆ ಓಲೆ ಬರೆದಾನೆ ದೇವ ನೀನೆ

ಬರದಾನೆ ಕಾಗುದ ಅರಗಳಿಗೆ ಆದಾವಿ
ವಡ್ಡರೆ ಆಗ ಬರುತಾರೆ ದೇವ ನೀನೆ



ಒಂದು ಸಾವಿರ ಅಲ್ಲ ಎಲ್ಡು ಸಾವಿರಲ್ಲ
ಏಳು ಸಾವಿರದ ವಡ್ಡಿಕೆ ಮುಂದಗಮನೆ
ಇರುವೆ ಸಾಲಿಟ್ಟಂಗೆ ಬರುತಾರೆ ಮುಂದಗಮನೆ

ಖ್ಯಾತ ಮಲ್ಲನಗೌಡ ಲೋಕದಂತೋರಲ್ಲ
ಯಾತಕೆ ನಮ್ಮಾ ಕರಸೀರಿ ದೇವಾರು ದೇವ

ಯಾತಾಕೆ ನಮ್ಮ ಕರಸೀರಿ, ಕರಿಸಿದ ಕಾರಣವ
ನಮುಗೇಳು ದೇವಾರು ದೇವ

ಹತ್ತು ಖಂಡುಗ ಅಕ್ಕಿ ಕೊಪ್ಪರಿಗೆ ಹಾಕ್ಯಾಳೆ
ತಪ್ಪನನ್ನಾವ ಇಳಿವ್ಯಾಳೆ ದೇವಾರು ದೇವ

ಬೇಗಾನೆ ಅನ್ನಾವ ಇಳಿವ್ಯಾಳೆ ಮಲಕವ್ವ
ಬೆಲ್ಲದ ಅಚ್ಚ ಒಡದಾಳೆ ದೇವಾರು ದೇವ

ವಡ್ಡರಿಗೆ ನೀರ ಒಯ್ಯುದಾಳ ಮಲಕವ್ವ
ಮಾಡಿದಂತ ಅನ್ನ ನೀಡುತಾಳೆ ದೇವಾರು ದೇವ

ಉಂಡುಟ್ಟ ವಡ್ಡಿಕೆ ಅಂಗೈ ಹಸ್ತವ ತೊಳೆದು
ಬೊಗಸೆಲೀಲ್ಯಾವ ಇಸಗೊಂಡು ದೇವಾರು ದೇವ

ಖ್ಯಾತ ಮಲ್ಲನಗೌಡ ಲೋಕದಂತನರಲ್ಲ
ಕರಸಿದ ಕಾರಣವ ನಮುಗೇಳು ದೇವಾರು ದೇವ

ಒಂದು ಸಾವಿರ ಹಣವ ಕೊಡುತಿನಿ ನನ್ನ ಮಕ್ಕಳಿರ
ಒದಗೊದಗಿ ಮದಗ ತೆಗಿನಡಿರೋ ಲಿಂಗದೇವ

ಒಂದು ಸಾವಿರ ಹಣವು ನಮುಗೆ ಮಲ್ಲನಗೌಡ
ಎಲೆಗಚ್ಚೊ ಸುಣ್ಣದ ಬೆಲಿಯಿಲ್ಲ ಲಿಂಗದೇವ

ಎರಡು ಸಾವಿರ ಹಣವ ಕೊಡುತೀನಿ ನನಮುಕ್ಕಳಿರ
ನೀವು ನಡಿರೊ ಮದಗ ತಗಿರಯ್ಯ ಲಿಂಗದೇವ

ಎರಡು ಸಾವಿರ ಹಣವು ನಮುಗೆ ಮಲ್ಲನಗೌಡ
ಇಳ್ಳೀವ್ದ ಅಡಿಕೆ ಬೆಲಿಯಿಲ್ಲ ಲಿಂಗದೇವ

ಹಸಿಯ ಮಣ್ಣಂಬೋದು ಸಿಗಲಿಲ್ಲ ವಡ್ಡೀಕೆ
ಉಸಿರೆಂದು ಕುಂತಾರು ವಡ್ಡಾರು ॥

ಉಸಿರೆಂದು ವಡ್ಡಾರು ಕುಂತಾರ ಕೆರೆಯಾಗೆ ಶಿವಶಿವನೆ
ಮಲ್ಲಪ್ಪನಾಗ ಬರುತಾನೆ ॥

ಲೋಕಾದ ಮಲ್ಲನಗೌಡ ಕೆರೆಯ ಕಟ್ಟಸಿದೆಲ್ಲೊ ಶಿವಶಿವನೆ
ಗುಬ್ಬಿ ಕುಡಿಯಾಕೆ ನೀರಿಲ್ಲ ॥

ಗುಬ್ಬಿ ಕುಡಿಯೊದಕಿಲ್ಲ ಅಬ್ಬಿ ಕುಡಿಯೊದಕಿಲ್ಲ ಶಿವಶಿವನೆ
ಜನ ಸೋಜಿಗಾಗಿ ನೋಡುತಾರೆ ॥

ಬರಿಗಾಲಲಿ ಮಲ್ಲನಗೌಡ ಮನಿಗೆ ನಡೆದಾನು ಶಿವಶಿವನೆ
ಉಸಿರೆಂದು ಮಂಚ್ಯಾಕೆ ಮಲಗ್ಯಾನು

ಉಸಿರೆಂದು ಮಂಚಾಕೆ ಮಲಗಿದ್ದ ಮಲ್ಲನಗೌಡ ಶಿವಶಿವನೆ
ಗಂಗವ್ವ ಬಂದಿದ್ಲು ಸ್ವಪ್ನನಾಕೆ ॥

## ಏಕಾಗಿ ಮದಗ ತುಂಬುತೈತೆ

ಹತ್ತು ಸಾವಿರ ಹಣವ ಖರ್ಚು ಮಾಡಿದೀಯ ಶಿವಶಿವನೆ
ಇನ್ನೊಂದು ಸಾವಿರ ಕೊಡು ಅಪ್ಪ ।
ಇನ್ನೊಂದು ಸಾವಿರ ಕೊಡುಹೋಗು ನನಮಗನೆ ಶಿವಶಿವನೆ
ನಡುಕೆರಿಯಗು ಬಾವಿ ತಗುಸಪ್ಪ ॥

ಎದ್ದನು ಮಲ್ಲನಗೌಡ ಕೆರೆಯಾಗೆ ನಡುದಾನೆ ಶಿವಶಿವನೆ
ವಡ್ಡರಿಗೆ ಆಗ ಹೇಳುತಾನೆ ॥
ಇನ್ನೊಂದು ಸಾವಿರ ಕೊಡುತಿನಿ ನನಮಕ್ಕಳಿರ ಶಿವಶಿವನೆ
ನಡುಗೆರೆಯಗು ಬಾವಿ ತೆಗಿರಪ್ಪ ॥

ಚಿನ್ನದ ಗುದ್ದಲಿ ಪಾತಾಳಕೊಗುದಾರೆ ಶಿವಶಿವನೆ
ನಡುಕೆರೆಯಗೆ ಬಾವಿ ತೆಗುದಾರೆ ॥
ನಡುಕೆರೆಯಾಗು ಬಾವಿ ತೆಗುದಾರೆ ಬಾವ್ಯಾಗೆ ಶಿವಶಿವನೆ
ಹಸಿಯ ಮಣ್ಣಂಬೋದು ಸಿಗತೈತೆ ॥



ಹಸಿಯ ಮಣ್ಣಂಬೋದು ಸಿಗತೈತೆ ಬಾವ್ಯಾಗೆ ಶಿವಶಿವನೆ
ನಾಕೆ ಮೂಲಿಗೆ ಜಲವುಟ್ಟೆ ।
ನಾಕೆ ಮೂಲಿಗೆ ಜಲವುಟ್ಟೆ ಬಾವ್ಯಾಗೆ ಶಿವಶಿವನೆ
ಏಕಾಗಿ ಮದಗ ತುಂಬುತೈತೆ ॥

ಏಕಾಗಿ ಮದಗ ತುಂಬುತೈತೆ ಕೆರಿಯಾಗೆ ಶಿವಶಿವನೆ
ನಾಗಗನ್ನೆಕ್ಕೆರುಟ್ಟುತಾರೆ ॥
ನಾಗಗನ್ನೆಕ್ಕೆರು ದೇವಗನ್ನೆಕ್ಕೆರು ಶಿವಶಿವನೆ
ದೇವಗನ್ನೆಕ್ಕೆರುಟ್ಟುತ್ತಾರೆ ॥

## ಒಡದೇಳವ್ವ ನಿನ್ನ ಒಳಮಾತ

ನಮ್ಮರಿಕೆ ನಮಿಗಾತು ನಿಮ್ಮರಿಕೆ ನಿಮಿಗಾತು
ನಮ್ಮಣವ ನಮಿಗೆ ಕೊಡಿರಯ್ಯ ಮಂದಗಮನೆ

ಲಕ್ಷದ ಕೋಣೆಗೆ ಹೊಕ್ಕಾಳೆ ಮಲಕವ್ವ
ಬಳ್ಳಾದಾಗ ಹಣವ ಅಳುದಾಳೆ ಮಂದಗಮನೆ

ಎದ್ದನು ಮಲ್ಲನಗೌಡ ಕೆರೆಗಾಗ ನಡುದಾನೆ
ಏನೆಂದು ಗಂಗವ್ನ ಕೇಳಾನೆ ಮಂದಗಮನೆ

ಆರು ಸಾವಿರ ಕೋಣ ಆರು ಸಾವಿರ ಕುರಿ
ಆರು ಕಂಡುಗದಕ್ಕಿ ಚರುಗಾವೆ ಮಂದಗಮನೆ

ಹತ್ತು ಸಾವಿರ ಕೋಣ ಹತ್ತು ಸಾವಿರ ಕುರಿ
ಹತ್ತು ಕಂಡುಗದಕ್ಕಿ ಚರುಗಾವೆ ಮಂದಗಮನೆ

ಹತ್ತು ಕಂಡುಗದಕ್ಕಿ ಚರುಗಾ ವದಗಿಸೇನು
ಏನೆಂಬುತೀಯ ಹಡೆದಪ್ಪ ಮಂದಗಮನೆ

ಹತ್ತು ಸಾವಿರ ಕೋಣಬೇಡ ಹತ್ತು ಸಾವಿರ ಕುರಿ ಬೇಡ
ಹತ್ತು ಕಂಡುಗದಕ್ಕಿ ಚೆರುಗ ಬೇಡ ಮಂದಗಮನೆ

ಹತ್ತು ಕಂಡುಗದಕ್ಕಿ ಚೆರುಗ ಬೇಡ ಮಲ್ಲನಗೌಡ
ಅರವತ್ತೇಳಳ್ಳಿ ತಗುಸೋಗೊ ಮಂದಗಮನೆ

ಅರವತ್ತೇಳಳ್ಳಿ ತಗುಸೋಗೊ ಮಲ್ಲನಗೌಡ
ಒಡೆದ್ಹೋಗುತೀನಿ ಅರುಗಾಗೋ ಮಂದಗಮನೆ

ಒಡೆಯ ಬ್ಯಾಡೆ ನನ್ನ ಸಡಗರದ ಹಡದವ್ವ
ಒಡೆದೇಳವ್ವ ನಿನ್ನ ಒಳಮಾತ ಮಂದಗಮನೆ

ನಾನು ಹೇಳಿದ ಮಾತ ನೀನುಕೇಳಿನಂದ್ರೆ
ಸತ್ಯವ ಮಾಡಯ್ಯ ನನಕೂಡೆ ಮಂದಗಮನೆ

## ದೇವಿ ಕೆಂಚವ್ನ ಕೊಡಹೋಗು

ನನ್ನಾಣೆ ನಿನ್ನಾಣೆ ಕಲ್ಯಾಣದ ಶರಣರಾಣೆ
ತಪ್ಪೊದಿಲ್ಲವ್ವ ಅನುತಾನೆ ದೇವ ನೀನೆ

ತೂಗ ಮಂಚದ ಮೇಲೆ ತೂಗದಲೆ ಇರುವೋಳೆ
ದೇವಿ ಕೆಂಚವ್ನ ಕೊಡಹೋಗು ದೇವ ನೀನೆ

ಮಗಳ ಮಲಕವ್ನ ಕೊಡುವೆ ಚಿಕ್ಕಉಜ್ಜಪ್ಪನ ಕೊಡುವೆ
ಮಡದಿ ಮಲ್ಲಿಗುದೇವಿ ಕೊಡುತೀನಿ ದೇವ ನೀನೆ

ಮಡದಿ ಮಲ್ಲಿಗುದೇವಿ ಕೊಡುತೀನಿ ಹಡೆದವ್ವ
ನಾನೇನೆ ಮದಗ ಮುಳುಗೇನ ದೇವ ನೀನೆ

ನಾನೇನೆ ಮದಗ ದುಮಿಕೇನು ಹಡೆದವ್ವ
ನನ್ನ ಸೊಸೆಯ ನಾನೆ ಕೊಡಲಾರೆ ದೇವ ನೀನೆ

ಹಸಿಯ ತಿಂಬೋನಲ್ಲ ಹುಸಿಯ ನುಡಿಯೋನಲ್ಲ
ಕೊಟ್ಟ ಭಾಷೆಗೆ ತಪ್ಪಿದಲ್ಲೊ ದೇವ ನೀನೆ

ಕೊಟ್ಟಾ ಭಾಷೆಗೆ ನೀನು ತಪ್ಪಿದಲ್ಲೊ ಮಲ್ಲನಗೌಡ
ಒಡೆದೋಗುತೀನಿ ಅರುಗಾಗೋ ದೇವ ನೀನೆ

ಮಗನೆ ಐದಾನವ್ವ ಮನಿಯಾಗೆ ಅಸವಲ್ಬೋನು
ನಾನೆಂಗೆ ಸೊಸೆಯ ಕೊಡಲವ್ವ ದೇವ ನೀನೆ



ಮಗನಿಗೆ ಉಪಾಯ ನಾನೊಂದ ಹೇಳತೀನಿ
ನಾನೊಂದ ಮಾತ ಹೇಳುತೀನಿ ದೇವ ನೀನೆ

ಕೆರೆಯಾನೆ ಕಟ್ಟಿಸಿದೆ ಬರಿಗೈಯಾದೆನು ಮಗನೆ
ಹವಳ ಮಾರಾಕೆ ಹೋಗಬೇಕು ದೇವ ನೀನೆ

ಕೆರೆಯಾನೆ ಕಟ್ಟಿಸಿದೆ ದುಡ್ಡ ನೆಲ್ಲ ಕಳಕೊಂಡ
ವಜ್ರಮಾರಾಕೆ ಕಳಸೋಗು ದೇವ ನೀನೆ

## ನಮ್ಮ ಅತ್ತಿಗೆ ಕೆರಿಗೆ ಕೊಡಬ್ಯಾಡ

ಕೆರೆಯಿಂದ ಮಲ್ಲನಗೌಡ ಮನೆಗೇನ ನಡುದಾನ
ಮಲಗೊಮಂಚಾಕೆ ಮನಿಗ್ಯಾನ ದೇವ ನೀನೆ

ಮಲಗೊ ಮಂಚಾಕೆ ಮನಿಗ್ಯಾನ ಮಲ್ಲನಗೌಡ
ಮಗಳ ಮಲಕವ್ನ ಕೇಳುತಾನೆ ದೇವ ನೀನೆ

ಮಗಳ ಮಲಕವ್ನ ಕೇಳುತಾನೆ ಮಲ್ಲನಗೌಡ
ಸತ್ಯ ಮಾಡವ್ವ ನನ ಕೂಟೆ ದೇವ ನೀನೆ

ಅಣ್ಣನ ಬೀಡಿಕೆ ಕಳಸಿ ಇಲಿಬಾರೆ ಮಲಕವ್ವ
ನಿಮ್ ಅತ್ತಿಗೆ ಕೆರಿಗೆ ಕೊಡಬೇಕು ದೇವ ನೀನೆ

ಪಲ್ಲಕ್ಕಿ ತಕ್ಕಾಳೆ ಈಗಾಲೆ ಮಲಕವ್ವ
ನಿಮ್ಮಣ್ಣನ ಬೇಗ ಕರೆತಾರೆ ದೇವ ನೀನೆ

ಅಂದಾಣ ತಕ್ಕಾಳವ್ವ ನನಮಗಳೆ ಮಲಕವ್ವ
ನಿಮ್ಮಣ್ಣನ ಈಗ ಕರೆತಾರೆ ದೇವ ನೀನೆ

ಅಂದಣ ಹಾಳಾಗಲೊ ಪಲ್ಲಕ್ಕಿ ಮುರಿಯಾಲೊ
ನಿನ್ನ ಹಾಳಾದ ಕೆರಿಯು ಒಡಿಯಾಲೊ ದೇವ ನೀನೆ

ಹಾಳಾದ ಕೆರಿಯು ಒಡಿಯಾಲೂ ಮಡಲುರುಕ
ನಮ್ ಅತ್ತಿಗೆ ಕೆರಿಗೆ ಕೊಡಬೇಡ ದೇವ ನೀನೆ

ಬ್ಯಾಸಿಗೆ ಬಿಸಿಲವ್ವ ಬರಿಯನೆಗಾಲವ್ವ
ಬರಿಗಾಲಲಿ ಮಲಕವ್ವ ನೆಡುದಾಳಿ ದೇವ ನೀನೆ

ಬರಿಗಾಲಲಿ ಮಲಕವ್ವ ನಡುದಾಳಿ ಈಗಿನ್ನು
ಎಡಬಲ ಗೂಳೆಪ್ಪ ನೋಡುತಾನೆ ದೇವ ನೀನೆ

ಎಡಬಲ ಗೂಳೆಪ್ಪ ನೋಡುತಾನೆ ಈಗಿನ್ನು
ತಂಗ್ಯವ್ವ ಬರುವ ಸಡಗರವ ದೇವ ನೀನೆ

ತಂಗ್ಯವ್ವ ಬರುವ ಸಡಗರಕೆ ಗೂಳೇಶ
ಎಣಿಎಣಿಗೆ ಕೈಯ ಮುಗುದಾನೆ ದೇವ ನೀನೆ

ಅಂದಣ ಎಲ್ಲವ್ವ ಪಲ್ಲಕ್ಕಿ ಎಲ್ಲವ್ವ
ಅಂದಣ ಬೋವೇರು ಎಲ್ಲವ್ವ ದೇವ ನೀನೆ

ಅಂದಣ ಬೋವೇರು ಎಲ್ಲವ್ವ ತಂಗ್ಯೆವ್ವ
ನಮ್ಮಪ್ಪಾಗೆ ಬಂತಿ ಬಡತನ ದೇವ ನೀನೆ

ಅಂದಣ ಹೋಗಲಪ್ಪ ಪಲ್ಲಕ್ಕಿ ಮುರಿಯಲಪ್ಪ
ನಮ್ಮಪ್ಪಾನ ಒಡಲೇ ಉರಿಯಾಲಿ ದೇವ ನೀನೆ

ನಮ್ಮನ್ಯಾಗುಟ್ಟಿದವ್ವ ನಮ್ಮನ್ಯಾಗುಂಡ್ಯೆವ್ವ
ತಾಯಿ ತಂದೆಗಳ ಬಯಬೇಡ ದೇವ ನೀನೆ

ತಾಯಿ ತಂದೆಗಳ ಬಯಬೇಡ ತಂಗ್ಯವ್ವ
ಹುಳುವಿನ ಕುಂಡಾಕೆ ಬಿಳತೀಯ ದೇವ ನೀನೆ

ಕಾತೀನೆ ಅಪ್ಪಯ್ಯ ಲೋಕದಂತೋರಲ್ಲ
ಯಾತಕೆ ನನ್ನ ಕರಿಸ್ಯಾರೆ ದೇವ ನೀನೆ

ಮುಂದೆ ಮುಂದೆ ಗೂಳೇಶ ಹಿಂದೆ ಹಿಂದೆ ಮಲಕವ್ವ
ಅವರಪ್ಪನರಮನಿಗೆ ನಡುದಾರೆ ದೇವ ನೀನೆ



## ವಜ್ರ ಮಾರಾಕೆ ಹೋಗಬೇಕು

ಕಾತೀನ ಅಪ್ಪಯ್ಯ ಲೋಕಂತೋರಲ್ಲ
ಕರಿಸಿದ ಕಾರುಣವ ನನಗೇಳು ಮುಂದಗಮನೆ

ಕೆರೆಯ ಕಟ್ಟಿಸಿದೆನು ಬರಿಗ್ಯೆಯಾದೆನು ಮಗನೆ
ಹವಳ ಮಾರಾಕೆ ಹೋಗಬೇಕು ಮುಂದಗಮನೆ

ವಡ್ಡಾನೆ ಹಾಕಿಸಿದೆ ದುಡ್ಡಿಲ್ಲ ಕಳಕೊಂಡೆ
ವಜ್ರ ಮಾರಾಕೆ ಹೋಗಬೇಕು ಮುಂದಗಮನೆ

## ಹೋರಿಗೆ ಸಿಂಗರವ ಮಾಡುತಾನೆ

ಹೋರಿಯ ಇಡುದತ್ತ ಅಂಗಳಕೆ ನೆಡುದಾನೆ
ಹೋರಿಗೆ ಸಿಂಗರವ ಮಾಡುತಾನೆ ಲೀಲಾಲೋಲ

ಹಂಡೋರಿಗೆ ಹಣಕಟ್ಟಿ ಗುಂಡೋರಿಗೆ ಮುಗುದಾಣ
ಜಾಣ ಹೋರಿಗೆ ಮಕರಂಬ ಲೀಲಾಲೋಲ
ಜಾಣಾನೆ ಹೋರಿಗೆ ಮಕರಂಬ ಗೂಳೇಶ
ಹೋರಿಗೆ ಸಿಂಗಾರ ಮಾಡುತಾನೆ ಲೀಲಾಲೋಲ

ಮುತ್ತಿನ ಹಿಡಿವಗ್ಗ ಮುತ್ತಿನ ಸಿರಿವಗ್ಗ
ಮುತ್ತಕೆತ್ತಿಸಿದ ಹಿಡಿವಗ್ಗ ಲೀಲಾಲೋಲ
ಮುತ್ತನೆ ಕೆತ್ರಿಸಿದ ಹಿಡಿವಗ್ಗಕೆ ಗೂಳೇಶ
ಎತ್ತಿನ ಸೊಂಟಕೆ ಹುರಿಹಗ್ಗ ಮುಂದಗಮನೆ

ತಣ್ಣನ ನೀರಿಗೆ ಪಾನಕವ ಹದಮಾಡಿ
ಎಣ್ಣ್ಯಾಗೆ ಹೋಳಿಗೆಯ ಮಡಿಸ್ಯಾಳೆ ಮುಂದಗಮನೆ
ಎಣ್ಣ್ಯಾಗೆ ಹೋಳಿಗೆಯ ಮಡಿಸ್ಯಾಳೆ ಮಲಕವ್ವ
ಅಣ್ಣಾಗೆ ಅಡಿಗೆ ಬಡಿಸ್ಯಾಳೆ ಮುಂದಗಮನೆ

ಬಾಗೂತ ಬಳುಕೂತ ಜಾಗೂತ ಜರಗೂತ
ಅಣ್ಣಾಗೆ ನೀರ ಹಿಡುದಾಳೆ ಮುಂದಗಮನೆ

ಅಣ್ಣಾಗೆ ನೀರ ಹಿಡುದಾಳೆ ಮಲಕವ್ವ
ಅಣ್ಣಾನ ಮೈಯ ಮರಿಸ್ಯಾಳೆ ಮಂದಗಮನೆ
ಅಣ್ಣಾನ ಮೈಯ ಮರಿಸ್ಯಾಳೆ ಮಲಕವ್ವ
ಅಣ್ಣಾಗೆ ಬಣ್ಣ ಕೊಡುತಾಳೆ ಮಂದಗಮನೆ

## ಭಾಗ್ಯದ ಕೆಂಚಸ್ತ್ರೀ ಜತುನಾವು

ಬಣ್ಣಾನ ಉಟ್ಟಿಗೊಂಡು ಅಣ್ಣ ಗೂಳೇಶಗೌಡ
ಕಂಬವ ನೆಂಬಿ ನಗುತಾನೆ ಶಿವಶಿವನೆ

ಕಂಬವ ನೆಂಬಿ ನಗುತಾ ಗೂಳೇಶಗೌಡ
ಏನೆಂದು ತಂಗಿಯ ಕೇಳ್ಯಾನೆ ಶಿವಶಿವನೆ

ದೊಡ್ಡೋರ ಮನಿಯಿಂದ ಭಾಗ್ಯವ ನೀವು ತಂದೀರಿ
ಭಾಗ್ಯದ ಕೆಂಚಸ್ತ್ರೀ ಜತುನಾವು ಶಿವಶಿವನೆ

ಉತ್ತಮರ ಮನಿಮಗಳ ಮುತ್ತ ನೀವು ತಂದೀರಿ
ಮುತ್ತಿನ ಕೆಂಚಸ್ತ್ರೀ ಬಹುಜತುನ ಶಿವಶಿವನೆ

ಅಲ್ಲಿಂದ ಗೂಳೇಶ ಎಲ್ಲೀಗೆ ನಡುದಾನೆ
ಹಡೆದವ್ವ ಮಾರೆ ನೋಡಲಿಕ್ಕೆ ಶಿವಶಿವನೆ

ಹಡೆದವ್ವ ಮಗನೀಗೆ ಬುದ್ದೀಯ ಹೇಳುತಾಳೆ
ಹೀಗೆಂದು ತಾಯಿ ನುಡಿದಾಳೆ ಶಿವಶಿವನೆ

ಮೂಡಲ ಸೀಮಿಗೆ ಹೋಗದಿರೊ ನನು ಮಗನೆ
ಉಣ್ಣ ಕಾವುಗಳ ಗನಬಹಳ ಶಿವಶಿವನೆ

ಉಣ್ಣ ಕಾವುಗಳ ಗನಬಹಳ ನನ ಮಗನೆ
ಬಣ್ಣದ ಮೋರೆ ಬಳಿದಾವು ಶಿವಶಿವನೆ

ಬಣ್ಣದ ಮೋರೆ ಬಳಿಯಾಕೆ ಬಾಳದಿಸೋಗಲ್ಲ
ಹತ್ತು ತಿಂಗಳಿಗೆ ಬರುತಿನಿ ಶಿವಶಿವನೆ
ಹತ್ತು ತಿಂಗಳಿಗೆ ಬರುತಿನಿ ಹಡೆದಮ್ಮ
ಕೆಂಚಸ್ತ್ರೀ ಮಡದಿ ಬಲು ಜತುನ ಶಿವಶಿವನೆ



ಕೆಂಚಸ್ತ್ರೀ ಅಪ್ಪ ಜತುನಾವೆ ಅಂದೇಳಿ
ತಂದೆ ಪಾದಾಕೆ ಶರಣೆಂದ ಶಿವಶಿವನೆ

ಅಲ್ಲಿಂದ ಗೂಳೇಶ ಎಲ್ಲೀಗೆ ನಡುದಾನೆ
ಮುದ್ದಿನ ಮಡದಿಯ ನೊಡಾಕೆ ಶಿವಶಿವನೆ

## ಲಾವಂಗದಗುಳಿ ತಗಿಬಾರೆ

ಹತ್ತು ಕಾಲಿನೇಣಿ ಉಪ್ಪರಿಗೆ ಹಾಕ್ಕೊಂಡು ಶಿವಶಿವನೆ
ಜತಿಯ ಗೆಣತಿಯರ ಕರಕೊಂಡು ಹರಹರನೆ
ಜತಿಯ ಗೆಣತಿಯರ ಕರಕೊಂಡು ಕೆಂಚವ್ವ ಶಿವಶಿವನೆ
ಹತ್ತಿ ನೋಡುತಾಳೆ ನೆಲಿಗಾಳ ಹರಹರನೆ

ತೆಳ್ಳನ್ನ ಹೊಟ್ಟೆಗೆ ಬೆಳ್ಳಿಯ ಉಡುದಾರ ಶಿವಶಿವನೆ
ಬಾಗೂತ ಬರುವರು ಅವರ್ಯಾರೆ ಹರಹರನೆ
ಮಾಸೂರ ಮಗನಲವೆ ರಟ್ಟೆಳ್ಳಿ ಅಳಿಯಲವೆ ಶಿವಶಿವನೆ
ಕೆಂಚವ್ವ ನಿನ ರಾಯ ಬರುತಾರೆ ಹರಹರನೆ

ಕೆಂಚವ್ವ ನಿಮ್ಮ ರಾಯ ಬರುತಾರೆ ಅಂಬೂತ ಶಿವಶಿವನೆ
ಗೆಳತಿರೊಡಗೂಡಿ ನಗುತಾರೆ ಹರಹರನೆ
ಅಲ್ಲಿಂದ ಕೆಂಚವ್ವ ಎಲ್ಲಿಗೆ ನಡುದಾಳೆ ಶಿವಶಿವನೆ
ಒಂದೊಂದೆ ಕದವ ಇಡುತಾಳೆ ಹರಹರ ನೆ

ಒಂದೊಂದೆ ಕದವ ಇಡುತಾಳೆ ಶಿವಶಿವನೆ
ಲಾವಂಗದಗುಳಿ ಇಡುತಾಳೆ ಹರಹರನೆ
ಏನಲೆ ಕೆಂಚಸ್ತ್ರೀ ಏನು ಮಾಡುತೀಯ ಶಿವಶಿವನೆ
ಲಾವಂಗದಗುಳಿ ತಗಿಬಾರೆ ಹರಹರನೆ

ನಾರಿ ನನಕೂಟೆ ಸರಸೇನೆ ಶಿವಶಿವನೆ
ಹಿಂದಕೆ ಗೂಳೇಶ ಸಿಟ್ಟಾಗಿ ತಿರುಗ್ಯಾನು ಹರಹರನೆ

ಓಡಿ ಬಂದು ಕದವ ತಗುದಾಳೆ ಸೀನೆಸೀನೆ

## ಮಡದಿ ಬಿಟ್ಹೋ್ಯಗೋದು ಒಳಿತಲ್ಲ

ಬಂದಂತ ಗಂಡಾಗೆ ಗಿಂಡಿಲಿ ನೀರಾ ಕೊಟ್ಟು ಶಿವಶಿವನೆ
ಪನ್ನೀರಲಿ ಪಾದ ತೊಳೆದಾಳೆ ಹರಹರನೆ
ಪನ್ನೀರಲಿ ಪಾದ ತೊಳೆದಾಳೆ ಕೆಂಚವ್ವ ಶಿವಶಿವನೆ
ಗೊಂಬೆ ಮಂಚವಾ ನೆರಿವ್ಯಾಳೆ ಹರಹರನೆ
ಗೊಂಬೆ ಮಂಚವಾ ನೆರಿವ್ಯಾಳೆ ಕೆಂಚಮ್ಮ ಶಿವಶಿವನೆ
ಗಂಧದಿಳ್ಯಾೀವ ಮೆಲುತಾರೆ ಹರಹರನೆ

ಬಾಯಿಯಾಗಳ ಮಾತು ಬಲು ಮೆತ್ತಗಾಡುತೀರಿ ಶಿವಶಿವನೆ
ಎತ್ತೊಂಟೆರಿ ರಾಯ ಬೈಗಾಗಿ ಹರಹರನೆ
ಎತ್ತ ಹೊಂಟೆರಿ ರಾಯ ಬೈಗಾಗಿ ಅಂಬೊತ್ತಿಗೆ
ವಜ್ರದ ಬೀಡಿಕೆ ಹೋಗತೀನಿ ದೇವ ನೀನೆ

ವಜ್ರ ಇಲ್ಲದೋರಂಗೆ ವಜ್ರ ಕೋಗುತೀರಾ
ವಜ್ರ ಇಲ್ಲವೆ ರಾಯ ಮನಿಯಾಗೆ ದೇವ ನೀನೆ
ವಜ್ರ ಇಲ್ಲವೆ ರಾಯ ಮನಿಯಾಗೆ ತವರೀಗೆ
ಹೇಳಿಕಳಿಸಿ ಮಣವ ತರಿಸೇನು ದೇವ ನೀನೆ
ಹೇಳಿ ಕಳಿಸಿ ಮಣವ ತರಿಸೇನು ರಾಯರೆ
ಮಡದಿ ಬಿಟ್ಹೋ್ಯಗದು ತರವಲ್ಲ ದೇವ ನೀನೆ

ಮಡದಿ ಬಿಟ್ಹೋ್ಯಗನು ಒಳಿತಲ್ಲ ಅಂಬುತಾ
ಶರಣೆ ಕೆಂಚವ್ವ ಅಳುತಾಳೆ ದೇವ ನೀನೆ

ಹತ್ತು ವಾರದ ಸರಕ ಐದೇ ವಾರಕೆ ಮಾರಿ
ಮುತ್ತೈದೆ ಬೇಗ ಬರುತೀನಿ ದೇವ ನೀನೆ
ಮುತ್ತೈದೆ ಬೇಗ ಬರುತೀನಿ ರಟ್ಟೆಹಳ್ಳಿ
ಚಿತ್ತಾರದ ಗೊಂಬೆ ಅಳದೀರೆ ದೇವ ನೀನೆ

ಹವಳ ಇರದೋರಂಗ ಹವಳಕೋಗುತೀರ
ಹವಳಿಲ್ಲವೇನೋ ರಾಯ ಮನಿಯಾಗ ದೇವ ನೀನೆ
ಹವಳಿಲ್ಲವೇನೋ ರಾಯ ಮನಿಯಾಗ ರಟ್ಟೆಹಳ್ಳಿ ಶಿವಶಿವನೆ
ತಾಯಿ ಉಂಬಳದೇವಿ ಮನೆಯಿಂದ ಹರಹರನೆ



ತಾಯಿ ಉಂಬಳದೇವಿ ಮನಿಯಿಂದ ನನರಾಯ ಶಿವಶಿವನೆ
ಹವಳ ಆರುಮಣವ ತರಿಸೇನು ಹರಹರನೆ
ಹವಳ ಆರುಮಣವ ತರಿಸೇನು ರಾಯರೆ ಶಿವಶಿವನೆ
ಮಡದಿ ಬಿಟ್ಹೋ್ಯಗದು ತರವಲ್ಲ ಹರಹರನೆ

ಮಡದಿ ಬಿಟ್ಹೋ್ಯಗದು ತರವಲ್ಲ ಅಂಬೂತ ಶಿವಶಿವನೆ
ಶರಣೆ ಕೆಂಚಮ್ಮ ಅಳುತಾಳೆ ಹರಹರನೆ

ಆರುವಾರದ ಸರಕ ಮೂರೇ ವಾರಕೆ ಮಾರಿ ಶಿವಶಿವನೆ
ಅರಗಳಿಗೆ ನಿಲ್ಲದೆ ಬರುತೀನಿ ಹರಹರನೆ
ಅರಗಳಿಗೆ ನಿಲ್ಲದೆ ಬರುತೀನಿ ಮೋಹದಗಿಳಿಯೆ ಶಿವಶಿವನೆ
ಗಳಗಳಿಗಿಗು ನೀನು ಅಳದಿರೆ ಹರಹರನೆ

ಅರೆಮೈಲಿ ಇರುಬ್ಯಾಡ ಅರೆದಲೆ ಮುಸುಗಿಡಬೇಡ
ಹಡದವರಿಗೆ ಮಾತ ತರಬೇಡ ಮಂದಗಮನೆ

ದಾರಿಸೀರುಡದೀರೆ ದಾರ್ಯಾಗೆ ನೀ ನಿಲದೀರೆ
ಗಂಡೇಳಿದ ಮಾತ ಇದಕೇಳೆ ಮಂದಗಮನೆ

ಆರೂರ ಹಲಿಗೇರು ಮೂರೂರ ಸ್ವನಾಯಿದಾರು
ಕೊಟ್ಟೂರ ಹೆಗ್ಗಾಳೆ ಹಿಡಿಸುತ ಕೋಲು ಕೋಲೆ
ಕೊಟ್ಟೂರ ಹೆಗ್ಗಾಳೆ ಹಿಡಿಸುತ ಕೆಂಚಮನ
ಗಂಡನ ಬೀಡಿಕೆ ನಡೆದಾವೆ ಕೋಲು ಕೋಲೆ

ಇರುವುದು ಕಂಚಿನ ಕಾಳೆ ಹೊಡೆಯೋದು ಚಿನ್ನದ ಭೇರಿ
ನಿಲ್ಲದಲಿ ಬೀಡ ಬಿಡುತಾನೆ ಕೋಲು ಕೋಲೆ

ಆ ಗುಡ್ಡ ಮರಿಯಾತು ಈ ಗುಡ್ಡ ಮರಿಯಾತು
ದೊಡ್ಡೋರ ಪಾದ ಕಡಿಯಾತು ಕೋಲು ಕೋಲೆ
ದೊಡ್ಡೋರ ಪಾದ ಕಡಿಯಾತು ಅಂಗಂಬೂತ
ದೇವಿ ಉಪ್ಪರಿಗೆ ಇಳುದಾಳೆ ಕೋಲು ಕೋಲೆ
ತಂದಾರೆ ಗಂಧಾದ ಇಳ್ಯಾವ
ಇಲ್ಲಿಗೆ ಹರಹರ ಇಲ್ಲಿಗೆ ಶಿವಶಿವ
ಇಲ್ಲಿಗೀಸಂದೆ ಪದ ಮುಂದೆ ಕೋಲು ಕೋಲೆ

ಇಲ್ಲಿಗೆ ಈ ಸಂಪೆ ಪದ ಮುಂದೆ ಈ ಮನೆಯು
ನಲ್ಲೇರಿಃಭೂತಿ ಧರಿಸ್ಯಾರೆ ಕೋಲು ಕೋಲೆ

ಸಂದ ಮುಗುದಟ್ಟೆಗೆ ತಂದಿಟ್ಟರೆ ಇಳ್ಳೀವ
ಲಿಂಗ ಜಂಗುಮೂರ ಮಗಳಿಗೆ ಕೋಲು ಕೋಲೆ
ಲಿಂಗ ಜಂಗುಮೂರ ಮಗಳು ಕೆಂಚವ್ವಗೆ
ತಂದಾರೆ ಗಂಧದ ಇಳ್ಳೀವ ಕೋಲು ಕೋಲೆ
ತಾಯಿಯ ಪೂಜೆಗೆ ಕಾಯಿ ಕರಪುರ ಕೊಟ್ಟಾವ್ಮಗೆ
ಗಂಡುಮಕ್ಕಳ ಕೊಡು ಶಿವನೆ ಕೋಲು ಕೋಲೆ

ಸತಿವಂತೆಯ ಪದವ ಕಿವಿತುಂಬ ಕೇಳಿ
ಅತ್ತಿ ಬೈತಾಳೆಂದು ಮನಿಗೋದೊ ಕೋಲು ಕೋಲೆ
ಅತ್ತಿ ಬೈತಾಳೆಂದು ಮನಿಗೋದ ಆ ಸತಿಯು
ಅತ್ತಿ ಮರನಾಗಿ ನಿಲನಿಂತೊ ಕೋಲು ಕೋಲೆ

ಶರಣೆಯು ಈ ಪದವ ಕಿವಿಯು ತುಂಬ ಕೇಳಿ
ಮಾವ ಬೈತಾನೆಂದು ಮನಿಗೋದೊ ಕೋಲು ಕೋಲೆ
ಮಾವ ಬೈತಾನೆಂದು ಮನಿಗೋರ ಆ ಸೊಸೆಯು
ಮಾವಿನ ಮರನಾಗಿ ನಿಲನಿಂತೋ ಕೋಲು ಕೋಲೆ

ಕರಿಯಾನೆ ಕಂಬಳಿ ಈಗ ಹೊದ್ದುಕೊಂಡು
ಉಳವಿಗೆ ಹೋದ ಶರಣರ ಶಾಸ್ತ್ರವ ನೆನೆದು
ಉಳಿಸದಂತೆ ನಾವು ಹಾಡೇವು ಕೋಲು ಕೋಲೆ

## ಮೂಸುರರ ಮಗನೇಕೆ ಈಗ ಬರೂತಾನೆ

ಕುಣಿಕೆಯ ನಡವೀಗೆ ಎಣಕಿಯ ಉಡುದಾರ
ಕನಕ ಸತ್ತಿಗೆ ನೆರಳಾಗೆ ದೇವ ನೀನೆ
ಕನಕ ಸತ್ತಿಗೆ ನೆರಳಾಗೆ ಮಾಸುರರ
ಮಗನೇಕೆ ಈಗ ಬರುತಾನೆ ದೇವ ನೀನೆ

ಏನಪ್ಪ ಮೈದೂನ ಇದ್ದಕಿದ್ದಲೆ ಬಂದೆ
ಅತ್ತಿ ಮಾವುಗಳು ಸುಖವೇನು ದೇವ ನೀನೆ



ಅತ್ತಿ ಸೊಲ್ಲಡಗಾಲಿ ಮಾವನ ಸೊಲ್ಲು ಬೀಳಾಲಿ
ಮುತ್ತಕೆರೆಗ್ಹಂಗೆ ಕೊಡುವಾನ ದೇವ ನೀನೆ
ಮುತ್ತ ಕೆರೆಗ್ಹಂಗೆ ಕೊಡಬೇಕು ನನ ತಾಯಿ
ಅಣ್ಣ ಬರುವತಂಕ ಕಾಣದ್ಹೋಗೋಣ ದೇವ ನೀನೆ

ಮಾಸೂರರ ಸೊಸೆಯಂತೆ ರಟ್ಟೇಳ್ಳಿರ ಮಗಳಂತೆ
ಮೈದುನನ ಕಟ್ಟಿಗೊಂಡು ಹೋದಳಂತೆ ದೇವ ನೀನೆ
ಮೈದುನನ ಕಟ್ಟಿಗೊಂಡು ಹೋದಳಂತೆ ಎಂಬೂತ
ಕುಂದ ತರಲೇನ್ರಿ ಬಳಗಾಕೆ ದೇವ ನೀನೆ

ಕುಂದೇನ ತರಲೇನ್ರಿ ತವರಿಗೆ ಮೈದುನರೆ
ಒಡದಾಕ್ರಿ ಪ್ರಾಣ ಕೊಡುತೀನಿ ದೇವ ನೀನೆ
ಒಡದಾಕ್ರಿ ಪ್ರಾಣ ಕೊಡುತೀನಿ ಉಜ್ಜಪ್ಪ
ಮಾವರಾಗ್ನೀಗೆ ಇರುತೀನಿ ದೇವ ನೀನೆ

ಮಾವರಾಗ್ನೀಗೆ ಇರುತೀನಿ ಅಂಬುದ ಕೇಳಿ
ಸಿಟು ಬಂದು ಉಜ್ಜಪ್ಪ ತಿರಿಗೋದ ದೇವ ನೀನೆ

(ಮಲ್ಲೇಶ, ಮಗಳು ಮಲಕವ್ವನನ್ನು ಕೆಂಚವ್ವನ ಅರಮನೆಗೆ ಕರೆ ತರಲು ಕಳುಹಿಸುತ್ತಾನೆ)

## ತಂದೆ ಮಲ್ಲೇಶ ಕರಿತಾರೆ

ಅಂದಣ ತಕ್ಕಾಳವ್ವ ಪಲ್ಲಕ್ಕಿ ತಕ್ಕಾಳವ್ವ
ಅಂದಣ ಬೋವ್ಯಾರ ಕರೆಸವ್ವ ಮಂದಗಮನೆ
ಅಂದಣ ಬೋವ್ಯಾರ ಕರೆಕಳಿಸೆ ಮಲಕವ್ವ
ಕೆಂಚವ್ನ ಕೆರೆಗೆ ಕರೆತಾರೆ ಮಂದಗಮನೆ

ಅಂದಣ ಹಾಳಾಗಲೋ ಪಲ್ಲಕ್ಕಿ ನಿಂದುರಿಯಾಲೊ
ನಿನ್ನಾಳಾದ ಕೆರೆಯು ಒಡಿಯಲೋ ದೇವ ನೀನೆ
ನಿನ್ನಾಳಾದ ಕೆರೆಯು ಒಡಿಯಾಲೋ ಒಡಲುರುಕ
ನಮ್ಮತ್ತೀಗೆಯು ಕೆರಿಗೆ ಕೊಡಬ್ಯಾಡ ದೇವ ನೀನೆ

ನಿಂತಾರ ನಿಂತಂಗೆ ನೆಡುದಾಳು ಮಲಕವ್ವ
ಕೆಂಚಮ್ಮನರಮನೆಗೆ ನೆಡುದಾಳೆ ದೇವ ನೀನೆ

ಬ್ಯಾಸಿಗೆ ಬಿಸಿಲಾಗೆ ಬರಿಯಾನೆಗಾಲಲಿ
ಬರಬರ ಮುಲಕವ್ವ ನೆಡುದಾಳೆ ದೇವ ನೀನೆ

ಕಡಲೆವ್ವ ಗೋದೆವ್ವ ಗೆಳತಿ ಸಾವಂತ್ರವ್ವ
ಪಗಡೆ ಆಟಕೆ ಕುಂತುದಾರೆ ದೇವ ನೀನೆ
ಪಗಡೇನ ಆಟಕೆ ಕುಂತಾಳೆ ಕೆಂಚಮ್ಮ
ಎಡಬಲಕೆ ಆಗ ನೋಡುತಾಳೆ ದೇವ ನೀನೆ

ಎಡಬಲಕೆ ಆಗ ನೋಡುತ ಕೆಂಚವ್ವ
ದಡಬಡನೆ ಉಪ್ಪರಿಗೆ ಇಳಿದು ಬರುತಾಳೆ ದೇವ ನೀನೆ

ಅಂದಣ ನಿನಗಿಲ್ಲವೆ ಪಲ್ಲಕ್ಕಿ ನಿನಗಿಲ್ಲವೆ
ನಮ್ಮಾವ್ರಗು ಬಂತೇನು ಒಡತಾನ ದೇವ ನೀನೆ
ಅಂದಣ ಹಾಳಾಗಲವ್ವ ಪಲ್ಲಕ್ಕಿ ನಿಂದುರಿಯಾಲಿ
ನಿಮ್ಮಾವನ ಒಡಲೇ ಉರಿಯಾಲಿ ದೇವ ನೀನೆ
ಈ ಮನಿಯಾಗೆ ಹುಟ್ಟಿದವ್ವ ಈ ಮನೇಲಿ ಉಂಡೆವ್ವ
ತಂದೆ ತಾಯಿಗಳ ಬಯ್ಯಬೇಡ ದೇವ ನೀನೆ
ತಂದೆ ತಾಯಿಗಳ ಬಯ್ಯಬೇಡ ಮುಲಕವ್ವ
ಹುಳುವಿನ ಕುಂಡಾಕೆ ಬಿಳುತೀಯ ದೇವ ನೀನೆ

ಕುಂದಾರಗೊಳ್ಳಿ ಸೆಳೆಮುಂಚ ಮುಲಕವ್ವ
ಬಂದ ಸುದ್ದೀಯ ಬಿಡಿಸೇಳಿ ದೇವ ನೀನೆ

ಏನೇಳಲತ್ತೀಗೆ ಎಂತೇಳಲತ್ತಿಗೆ
ತಂದೆ ಮಲ್ಲೇಶ ಕರಿತಾರೆ ದೇವ ನೀನೆ
ತಂದೆ ಮಲ್ಲೇಶ ಕರಿತಾರೆ ಅಂಬುತೇಳಿ
ನಿಲ್ಲದಲೆ ಮುಲಕವ್ವ ನೆಡುದಾಳೆ ದೇವ ನೀನೆ

## ನೀನೆ ಕೆಮ್ಮಣ್ಣ ತರಬೇಕು

ಖಾತೇನ ಮಾವಯ್ಯ ಲೋಕದಂತೋರಲ್ಲ
ಯಾತಕೆ ನನ್ನ ಕರಿಸ್ಯಾರೊ ಸೋ
ಯಾತಾಕೆ ನನ್ನ ಕರಿಸ್ಯಾರೋ ಅಂಬೂತ
ದಾವಿಸಿ ಕೆಂಚಮ್ಮ ಬರುತಾಳೆ ಸೋ



ಮಾವನಟ್ಟೆ ಮುಂದೆ ಬಾಳ ಜನ ಕುಂತಿದ್ರು
ಮನಕಂಜಿ ಮಲ್ಲಿಗೆ ವನಕ್ಹೋಗಿ ಸೋ
ಮನಕಂಜಿ ಮಲ್ಲಿಗೆ ವನಕ್ಹೋಗಿ ನನ್ನಮ್ಮ
ಮಲ್ಲಪ್ಪನರಮನೆಗೆ ನೆಡುದಾಳೆ ತಂದನೋ

ಖಾತೇನ ಮಾವಯ್ಯ ಲೋಕದಂತೋರಲ್ಲ
ಯಾತಾಕೆ ನನ್ನ ಕರೆಸಿರಿ ತಂದನೋ
ಯಾತಾಕೆ ನನ್ನ ಕರೆಸಿರಿ ಮಾವಯ್ಯ
ಕರೆಸಿದ ಕಾರುಣವ ನಮಗೇಳು ತಂದನೋ

ನಾಲ್ಕು ಕಣ್ಣಿನ ಮದಗ ಮುಗುದೆ ಮೂರು ತಿಂಗಾಳು
ಮದಗಾಕೆ ಗಂಗವ್ನ ಮಾಡಬೇಕು ತಂದನೋ
ಮದಗಾಕೆ ಗಂಗವ್ನ ಮಾಡಬೇಕು ನನಸೊಸೆಯೆ
ನೀನೆ ಕೆಮ್ಮಣ್ಣ ತರಬೇಕು ತಂದನೋ

ಹತ್ತು ಕಾಲಿನೇಣಿ ಹತ್ತಾಕ ತಕ್ಕೊಂಡು
ಹತ್ತಿ ಗುದ್ದಾಲಿ ತಗುದಾಳೆ ತಂದನೋ
ಚಿನ್ನದ ಗುದ್ದಲಿ ತಗುದೂಬಣ್ಣದ ಪುಟ್ಟಿ ತಗದೂ
ಚಿನ್ನದ ಗುದ್ದಲಿ ಹೆಗಲೇರಿ ಸೋ

ಚಿನ್ನದ ಗುದ್ದಾಲಿ ಹೆಗಲೇರಿ ಕೆಂಚಮ್ಮ
ಕೆಮ್ಮಣ್ಣಗಾಕೆ ನೆಡುದಾಳೆ ತಂದನೋ
ಆವುಕಾಯೋ ಅಣ್ಣಗಳಿರ ಆಡುಕಾಯೋ ತಮ್ಮಗಳಿರ
ಕೆಮ್ಮಣ್ಣಿನ ದಾರಿ ತೋರಿರಯ್ಯೋ ಸೋ

ಕೆಮ್ಮಣ್ಣಿನ ದಾರಿ ತೋರಿರಯ್ಯ ಅಣ್ಣತಮ್ಮಗಳಿರಾ
ಹೊನ್ನಿನ ದಾನ ಕೊಡತೀನಿ ಸೋ
ಆಕಡೆ ಕೊಡಮಗ್ಗೆ ಈ ಕಡ್ಕೆಕಿಟ್ಟಾದಳ್ಳಿ
ಮಾಸೂರ ಎಡದಡಿಗೆ ಅಯತವ್ವ ಕೇಳು ಲಿಂಗವೆ

ಕೆಮ್ಮಣ್ಣಿನ ದಾರಿ ತೋರಿಸಿದ ಅಣ್ಣತಮ್ಮಗಳಿರಾ
ಹೊನ್ನಿನ ದಾನ ಕೊಳ್ಳೀರಪ್ಪಾ ಕೇಳು ಲಿಂಗವೆ
ಯಾವ ಸೀಮೆ ಪುಣ್ಯವಂತೆ ಯಾವ ಸೀಮೆ ಶರಣೆವ್ವ
ನಿನನೋಡಿ ನಮಪಾಪ ಪರಿಹಾರ ಕೇಳು ಲಿಂಗವೆ

ನಿಮಗೆ ಕೊಟ್ಟ ದಾನ ನೀವೆ ಉಣ್ಣಲಿಬೇಕು
ಪಲ್ಲಿ ಸೆರಗೀಗೆ ಕಟ್ಟುತಾಳೆ ಕೇಳು ಲಿಂಗನೆ
ಅಲ್ಲಿಂದ ಕೆಂಚವ್ವ ಎಲ್ಲಿಗೆ ನಡೆದಾಳೆ
ಕೆಮ್ಮಣ್ಣ ಗೋಗಿ ಏನೆಲಿ ನಿಂತೊ ಕೇಳು ಲಿಂಗನೆ

ಗುದ್ದಾಲಿ ಎತ್ತಾಳೆ ಗುದ್ದಲಿ ಶರಣು ಮಾಡ್ಯಾಳೆ
ಗುದ್ದಾಲಿತ್ತೊಮ್ಮೆ ಏ ಕಡುದಾಳೆ ಸೋ
ಗುದ್ದಾಲಿ ಎತ್ತೊಮ್ಮೆ ಕಡುದಾಳೆ ಕೆಂಚಮ್ಮ
ಭೂಲೋಕದ ಹೆಂಡೆ ಕೀಳುತಾವೆ ಸೋ

ಭೂಲೋಕದ ಹೆಂಡೆ ಕೀಳುತಾವೆ ಕೆಂಚಮ್ಮ
ಬುಟ್ಟಿಗೆ ಹಾಕಿ ತುಂಬುತಾಳೆ ಸೋ
ದಿಬ್ಬಾವ ಹತ್ಯಾಳೆ ದಿಬ್ಬಾವ ಇಳುದಾಳೆ
ತಂಗಟೆ ಹೂವ ಹುಡುಕ್ಯಾಳೆ ಕೇಳು ಲಿಂಗನೆ

## ನರಲೋಕಕೆ ಅವರೆ ಬಂದಾರೆ ಶಿವರಾಯ

ತಂಗಟೇನ ಹೂವ ಹುಡುಕ್ಯಾಳೆ ಕೆಂಚಮ್ಮ
ತಂಗಟೆ ಹೂವೆ ಸಿಗಲಿಲ್ಲ ಸೋ
ಕೊರಳಾಗಿನ ಲಿಂಗ ಕೈಯ್ಯಾಕೆ ತಕ್ಕೊಂಡು
ಲಿಂಗಕೆ ಅಕ್ಷರವ ಬರುದಾಳೆ ಕೇಳು ಲಿಂಗನೆ

ಲಿಂಗಕೆ ಅಕ್ಷರವ ಬರುದಾಳೆ ಕೆಂಚಮ್ಮ
ದೇವ ಲೋಕಕೆ ಎಸುದಾಳೆ ಕೇಳು ಲಿಂಗನೆ
ದೇವ ಲೋಕಕೆ ಎಸುದಾಳೆ ಕೆಂಚಮ್ಮ
ಲಿಂಗ್ಹೋಗಿ ಬಿದ್ದಾವೆ ಶಿವನೆದುರೆ ಕೇಳು ಲಿಂಗನೆ

ಹೋದಂತ ಲಿಂಗಾವ ಓದಿಕೊಂಡ ಶಿವರಾಯ
ಶರಣೆ ಕೆಂಚಮ್ಮನ ಏ ಲಿಂಗಾವೆ ಕೇಳು ಲಿಂಗನೆ
ಸತಿವಂತೆ ಕೆಂಚಮ್ನ ಲಿಂಗವ ಓದಿಕೊಂಡು
ಜೋಳಿಗೆ ಹೂವ ಏ ತರುತಾರೆ ಗಂಧ



ಜೋಳಿಗೇನ ಹೂವ ತಂದಾನೆ ಶಿವರಾಯ
ನರಲೋಕಕೆ ಏ ಬರುತಾರೆ ಗಂಧ
ನರಲೋಕಕೆ ಅವರೆ ಬಂದಾರ ಶಿವರಾಯ
ತಂಗಟೆ ಹೂವ ಏ ಕೊಡುತಾರೆ ಗಂಧ

ಏನವ್ವ ನನು ಮಗಳೆ ಸತಿವಂತೆ ಕೆಂಚಮ್ಮ
ಚಂದವುಳ್ಳ ಮದಗಾಕೆ ಏ ನಡೆಯವ್ವ ಗಂಧ

ಅಲ್ಲಿಂದ ಶಿವರಾಯ ಎಲ್ಲಿಗೆ ನಡುದಾರೆ
ದೇವಲೋಕಕೆ ಏ ನಡುದಾರೆ ಗಂಧ

## ಚಂದವುಳ್ಳ ಮದಗಾಕೆ ಏ ನಡಿಯಪ್ಪ

ತಂಗಾಟೆನೆ ಹೂವ ಬುಟ್ಯಾಗೆ ಹಾಕ್ಕೊಂಡು
ಸಿಂಬೆಟ್ಟೆ ಅರಿವೆ ಏ ಹುಡುಕ್ಯಾಳೆ ಗಂಧ
ಸಿಂಬೆಟ್ಟೇನೇ ಅರಿವೆ ಹುಡುಕ್ಯಾಳೆ ಕೆಂಚಮ್ಮ
ಸಿಂಬೆಟ್ಟೆ ಅರಿವೆ ಏ ಸಿಗಲಿಲ್ಲ ಗಂಧ

ಅಲ್ಲಿಂದ ಕೆಂಚಮ್ಮ ಎಲ್ಲಿಗೆ ನಡುದಾಳೆ
ದೊಡ್ಡ ಹುತ್ತಕೆ ಏ ನಡುದಾಳೆ ಗಂಧ

ಬಾರಪ್ಪ ಕಾಳಿಂಗ ಕುಡಿವಂತೆ ನೊರೆಹಾಲ
ಒಂದೇ ಸಿಂಬ್ಯಾಗಿ ಏ ಇರಬಾರೊ ಗಂಧ

ಸರುಪ ಸಿಂಬೆ ಸುತ್ತಿ ಕೆಮ್ಮಣ್ಣ ಹೊತ್ತುಗೊಂಡು
ಹೆಡೆಯ ನೆರುಳಾಗೆ ಏ ಬರುತಾಳೆ ಗಂಧ

ದನಕಾಯೊ ಅಣ್ಣಗುಳಿರಾ ಕುರಿಕಾಯೊ ತಮ್ಮಗುಳಿರಾ
ಊರಾಗಳ ಸುದ್ದಿ ಏ ಹೇಳಿರಪ್ಪ ಗಂಧ

ಊರಗಳ ಸುದ್ದಿಲ್ಲ ಕೇರ್‍ಯಾಗಳ ಸುದ್ದಿಲ್ಲ
ಕೆಂಚಮ್ನ ಕೆರಿಗೆ ಏ ಕೊಡುತಾರೆ ಗಂಧ

ಅಟ್ಟೆಯ ತಿಪ್ಪಣ್ಣಗೆ ಮುತ್ತಿನ ತೇರ ಹರಿಸೇನ
ಘಟ್ಟಾಕೋಗ್ಯಾರು ಏ ಬರಲಿ ಗಂಧ

ಉಜ್ಜಣಿ ಸಿದ್ದಪ್ಪಾಗೆ ಗೆಜ್ಜಿ ತೇರ ಹರಿಸೇನು
ಹೆಜ್ಜೆಜ್ಜೆಗು ಕಾಯ ಏ ಹೊಡಿಸೇನು ಗಂಧ
ಹೆಜ್ಜೆಜ್ಜೆಗು ಕಾಯ ಹೊಡಿಸೇನು ಮಲ್ಲಾಡ
ಯಾಪಾರಕೋದೋರು ಏ ಬರಲೀಗ ಗಂಧ

ಕೆಮ್ಮಣ್ಣ ಇಳಿವಾಳೆ ಮನೆಗೇನ ಬಂದಾಳೆ
ಸರುಪಾಗೆ ಹಾಲ ಏ ಕುಡಿಸ್ಯಾಳೆ ಗಂಧ

ಬಾರಪ್ಪ ಕಾಳಿಂಗ ಕುಡಿಬಾರೋ ನೊರೆಹಾಲ
ಚಂದವುಳ್ಳ ಮದಗಾಕೆ ಏ ನಡಿಯಪ್ಪ ಗಂಧ

ಮುಂದೆನೆ ನೀ ನಡಿಯೊ ಹಿಂದೆ ನಾ ಬರುತಿನಿ
ಐಭೋಗದ ಮದಗಾಕೆ ಏ ನಡಿಯಪ್ಪ ಗಂಧ

## ಸೂಲಗಿತ್ತಿ ಸಂಗವನ ಅಂದವೇನೆ

ಹೊಟ್ಟೆಹೊಟ್ಟೆಗಿ ಬ್ಯಾನಿ ಕತ್ತೀಲಿ ಕಡದಾಂಗ
ಹೆತ್ತವ್ವ ಇರಬೇಕ ಜಲುಮಾಕೆ ಸೋ
ಹೆತ್ತವ್ವ ಇರಬೇಕು ಜಲುಮಾಕೆ ಅಂಗಂಬೂತ
ಸತಿವಂತೆ ಕೆಂಚವ್ವ ಅಳುತಾಳೆ ಸೋ

ಜಾವಜಾವಕು ಬ್ಯಾನಿ ತಾಳ ಬಾರಿಸಿದ್ದಾಂಗ
ತಾಯವ್ವ ಇರಬೇಕ ಮನಿಯಾಗೆ ಶಿವ
ತಾಯವ್ವ ಇರಬೇಕು ಮನಿಯಾಗೆ ಅಂಗಂಬೂತ
ಶರಣೆ ಕೆಂಚವ್ವ ಅಳುತಾಳೆ ಶಿವ

ನನ್ನ ನಾದುನಿ ಬಾರೆ ಚಿನ್ನದ ಕೇದಿಗು ಬಾರೆ
ಸೂಲ ಬಲ್ಲವರ ಕರಸವ್ವ ಶಿವ

ಅಲ್ಲಿಂದ ಮಲಕವ್ವ ಎಲ್ಲಿಗೆ ನಡೆದಾಳೆ
ತಂದೆ ಅರಮನೆಗೆ ನಡುದಾಳೆ ಶಿವ

ಏನಪ್ಪ ನನ ತಂದೆ ಒಳಗೇನು ಮಾಡುತೀಯೋ
ಅತ್ತೀಗೆ ಕೆಂಚವ್ವಗೆ ಘನಬ್ಯಾನೆ ಶಿವ



ಅತ್ತೀಗೆ ಕೆಂಚವ್ವಗೆ ಘನಬ್ಯಾನೆ ನನ್ನಪ್ಪ
ಸೂಲಗಿತ್ತಿ ಸಂಗವ್ವನ ಕರಿತಾರೊ ಶಿವ

ಅಲ್ಲಿಂದ ಮಲ್ಲೇಶ ಎಲ್ಲೀಗೆ ನಡುದಾನೆ
ಸೂಲಗಿತ್ತಿ ಸಂಗವ್ವನ ಕರುವಾಕೆ ಶಿವ

ಸಣ್ಣ ಮಲ್ಲಿಗೆ ಸೆನಿಯೇ ಗಾಳಿ ಬಂದಾರ ವನಿಯೇ
ಬಾಳೆಲೆ ಸುಳಿಯೇ
ಹಟ್ಟಿಯಾಗುಳ ಸಗಣಿ ಎತ್ತಿ ಗುಡಿಸೋ ಬಾಲೆ
ಎತ್ತ ಸಂಗವ್ನ ಅರಮಾನೆ ಸಣ್ಣ ಮಲ್ಲಿಗೆ
ಎತ್ತನೆ ಸಂಗವ್ವನ ಅರಮನೆ ನೀ ತೋರಿದರೆ
ಕೆಪ್ಪೆಗೆ ಮುತ್ತ ಬಿಗಿಸೇನು ಸಣ್ಣ ಮಲ್ಲಿಗೆ

ಬಾಳೇಯ ಬಲಕೊತ್ತಿ ಅಡಿಕೇಯ ಎಡಕೊತ್ತಿ
ನಾಗಸಂಪಿಗೇ ನೆಡೆಹೋಗು ಸಣ್ಣ ಮಲ್ಲಿಗೆ

ಆಲೆ ಆಡೊತಾವೆ ಗಾಣ ತಿರುಗುತಾವೆ
ಸೋಗೆಯ ನವಿಲೆ ನಲಿದಾಡುತಾವೆ ಸಣ್ಣ ಮಲ್ಲಿಗೆ
ಸೋಗೇನೆ ನವಿಲೆ ಆಡುತಾವೆ ಮಲ್ಲೇಶ
ಅದೆಕಣೊ ಸಂಗವ್ನ ಅರಮನೆ ಸಣ್ಣ ಮಲ್ಲಿಗೆ

ಎಂದು ಬಾರದ ಮಲ್ಲೇಶ ಇಂದೇಕೆ ಬಂದ್ಯಪ್ಪ
ಕುಂದಾರಗೊಳ್ಳು ಮಣಿಗೊಳ್ಳು ಸಣ್ಣ ಮಲ್ಲಿಗೆ
ಕುಂದ್ರಾಕೆ ಬಂದಿಲ್ಲ ನಿಂದ್ರಾಕೆ ಬಂದಿಲ್ಲ
ಸೊಸೆ ಕೆಂಚಮ್ಮಾಗೆ ಘನಬ್ಯಾನಿ ಸಣ್ಣ ಮಲ್ಲಿಗೆ
ಸೊಸೆ ಕೆಂಚವ್ವಗ ಘನ ಬ್ಯಾನೆ ಸಂಗವ್ವ
ನೀ ಬರಬೇಕು ನನ್ನ ಮನಿತಂಕ ಸಣ್ಣ ಮಲ್ಲಿಗೆ

ಕಬ್ಬು ಕಡಿಯಾದ್ಯೆತೊ ಕಡ್ಲೆ ಕೀಳಾದ್ಯೆತೋ
ನಾ ಖಂಡುಗ ಗದ್ದೆ ಕೊಯಲೈತೊ ಮಲ್ಲೇಶ
ನಾನೇನು ಬಂದೇನು ಬರಲಾರೆ ಸಣ್ಣ ಮಲ್ಲಿಗೆ

ಕಬ್ಬು ನಾ ಕಡಿಸೇನು ಕಡಲೇ ನಾ ಕಿಳಿಸೇನು
ನಾ ಖಂಡುಗ ಗದ್ದೆ ಕೋಯಿಸೇನು ಸಣ್ಣ ಮಲ್ಲಿಗೆ

ನಾ ಖಂಡುಗ ಗದ್ದೆ ಕೊಯಿಸೇನು ಸಂಗವ್ವ
ನೀ ಬರಬೇಕು ನನ್ನ ಮನೆತಂಕ ಸಣ್ಣ ಮಲ್ಲಿಗೆ

ಅಕ್ಕೋ ಅನ್ನೋರಿಲ್ಲ ಹಿಡಿಯ ಚತ್ರಿಕಿಲ್ಲ
ಕಾಲಾಳು ಮಂದಿ ಜನರಿಲ್ಲ ಸಣ್ಣ ಮಲ್ಲಿಗೆ
ಕಾಲಾಳು ಮಂದಿ ಜನರಿಲ್ಲ ಮಲ್ಲೇಶ
ನಾನೇನು ಬಂದೇನು ಬರುಲಾರೆ ಸಣ್ಣ ಮಲ್ಲಿಗೆ

ಹಿಡಿಯ ಚತ್ರಿಕೆ ತರುವೆ ಕಾಲಾಳು ಮಂದಿ ತರುವೆ
ನೀ ಬರಬೇಕು ನನ್ನ ಮನಿ ತಂಕ ಸಣ್ಣ ಮಲ್ಲಿಗೆ

ಹತ್ತು ಕೊಪ್ಪರಿಗೆ ನೀರು ಒಟ್ಟಿಗೆ ಮಳ್ಯಾವೆ
ನಿನ್ನೆ ಸಂಗವ್ನ ಜಳಪಾವೇ ಸಣ್ಣ ಮಲ್ಲಿಗೆ

ಬಿಳಿದೊಂದು ಉಟ್ಟಾಳೆ ಬಿಳಿದೊಂದು ತೊಟ್ಟಾಳೆ
ಬಿಳಿವಿನ ಮುಂಜೆರಗ ಇಳಿಬಿಟ್ಟು ಸಣ್ಣ ಮಲ್ಲಿಗೆ

ಕರಿದೊಂದು ಉಟ್ಟಾಳೆ ಕರಿದೊಂದು ತೊಟ್ಟಾಳೆ
ಕರವಿನ ಮುಂಜೆರಗ ಇಳಿಬಿಟ್ಟು ಸಣ್ಣ ಮಲ್ಲಿಗೆ

ಹಸುರಂದು ಉಟ್ಟಾಳೆ ಹಸುರೊಂದು ತೊಟ್ಟಾಳೆ
ಹಸುರಿನ ಮುಂಜೆರಗ ಇಳಿಬಿಟ್ಟು ಸಣ್ಣ ಮಲ್ಲಿಗೆ
ಹಸುರಿನ ಮುಂಜೆರಗ ಇಳಿಬಿಟ್ಟು ಸಂಗವ್ವ
ನಿಲುವುಗನ್ನಡಿಯ ಇಡುದಾಳೆ ಸಣ್ಣ ಮಲ್ಲಿಗೆ
ನಿಲವುಗನ್ನಡಿಯ ಇಡದು ನೋಡಿಕಂಡು
ಒಪ್ಪಿಕೆ ಅಂದರೆ ನಗುತಾಳೆ ಸಣ್ಣ ಮಲ್ಲಿಗೆ

ವಾರೇನೆ ಕೂದಲ ನಾರೆರೈವರು ಹಿಡಿದು
ನಾರಿ ಕೂದಲ ಬಿಗಿ ಬಾಚಿ ಸಣ್ಣ ಮಲ್ಲಿಗೆ
ನಾರಿಯ ಕೂದಲ ಬಿಗಿ ಬಾಚಿ ಹಾಕ್ಯಾರವ್ವ
ಮುಕ್ಕಣ್ಣನೆಂಬೊ ಚವಲೀಯ ಸಣ್ಣ ಮಲ್ಲಿಗೆ

ಮುಕ್ಕಣ್ಣನೆಂಬೊ ಚವಲೀಯ ನಡವಿಗೆ
ಅಚ್ಚ ಮಲ್ಲಿಗೆ ಮುಡಿಸ್ಯಾರೆ ಸಣ್ಣ ಮಲ್ಲಿಗೆ



ಮುತ್ತಿನ ಬಾಚಣಿಗೆ ನಿನ್ರೈರೈವರು ಪಿಡಿದು
ನೆತ್ತಿ ಕೂದಲ ಬಿಗಿ ಬಾಚಿ ಸಣ್ಣ ಮಲ್ಲಿಗೆ
ನೆತ್ತೀನೆ ಕೂದಲ ಬಿಗಿ ಬಾಚಿ ಹಾಕ್ಯಾರವ್ವ
ಚೆನ್ನಣ್ಣನೆಂಬೊ ಚವಲೀಯ ಸಣ್ಣ ಮಲ್ಲಿಗೆ

ಚೆನ್ನಣ್ಣನೆಂಬೊ ಚವಲೀಯ ನಡುವೀಗೆ
ಸಣ್ಣ ಮಲ್ಲಿಗಿಯ ಮುಡಿಸ್ಯಾರೆ ಸಣ್ಣ ಮಲ್ಲಿಗೆ
ಸಣ್ಣ ಮಲ್ಲಿಗಿಯ ಮುಡಿಸ್ಯಾರೆ ಸಂಗವ್ವಾಗೆ
ಮುತ್ತು ಮಾಣಿಕದಿ ಸಿಂಗರಿಸ್ಯಾರೆ ಸಣ್ಣ ಮಲ್ಲಿಗೆ

## ಜನಿಸ್ಯಾಳು ಕೆಂಚವ್ವ ಗಂಡುಮಗನ

ಅಲ್ಲಿಂದ ಸಂಗವ್ವ ಎಲ್ಲಿಗೆ ನಡೆದಾಳೆ
ಕೆಂಚವ್ವನ ಅರಮನೆಗೆ ನಡುದಾಳೆ ಕೋಲು ಕೋಲೆ
ಕೆಂಚವ್ವ ಅರಮನೆಗೆ ನಡುದಾಳೆ ಸಂಗವ್ವ
ಎಣ್ಣೆ ಮಂಚಾಕೆ ಬರುತಾಳೆ ಕೋಲು ಕೋಲೆ
ಎಣ್ಣೆ ಮಂಚಾಕೆ ಬರುತಾಳೆ ಸಂಗವ್ವ
ಎಣ್ಣೆ ಮಂತುರಿಸಿ ಕೊಡುತಾಳೆ ಕೋಲು ಕೋಲೆ

ಎಲೆ ಅಡಿಕೆ ನೀವುಳಿಸಿ ಕೊಡುತಾಳೆ ಸಂಗವ್ವ
ಕಾಯ ನೀವುಳಿಸಿ ಹೊಡುದಾಳೆ ಕೋಲು ಕೋಲೇ
ಕಾಯ ನೀವುಳಿಸಿ ಹೊಡುದಾಳೆ ಸಂಗವ್ವ
ನೀರ ನೀವುಳಿಸಿ ಹೊಯಿದಾಳೆ ಕೋಲು ಕೋಲೆ
ನೀರ ನೀವುಳಿಸಿ ಹೊಯಿದಾಳೆ ಸಂಗವ್ವ
ಹಡದಳೆ ಕೆಂಚವ್ವ ಗಂಡುಮಗನ ಕೋಲು ಕೋಲೆ

ಹುಟ್ಟೆ ಹುಟ್ಟೆ ಬರುವ ಶುಕ್ರ ಚಂದ್ರಾರಂಗೆ
ಜನಿಸ್ಯಾಳು ಕೆಂಚವ್ವ ಗಂಡುಮಗನ ಕೋಲು ಕೋಲೆ

ಮೂಡಿ ಮೂಡಿ ಬರುವ ಸೂರ್ಯ ಚಂದ್ರಾರಂಗೆ
ಹಡೆದಳು ಕೆಂಚವ್ವ ಗಂಡುಮಗನ ಕೋಲು ಕೋಲೆ

ಕೋಳಿ ಕೂಗೋ ಹೊತ್ತು ಶರಣರೇಳೋ ಹೊತ್ತು
ದೇವಿ ಗಂಡುಮಗನ ಜನಿಸ್ಯಾಳೆ ಕೋಲು ಕೋಲೆ

ಮುತ್ತಿನ ಕೂಸ ಮುಂದಕೆ ಬಿದ್ದು
ಚಿನ್ನಾದ ಸೂಜಿಲಿ ಚುಟಿಕೆಯನ್ನಾಕಿ ಕೋಲು ಕೋಲೆ

ಮುತ್ತಿನ ಕುಡುಗೋಲಲಿ ಹುರಿಗಾಳ ಕಡಿದು
ಅಳ್ಳೆ ಬೆಳ್ಳುಳ್ಳಿಯ ಕಿವಿಯೊಳಗಿಟ್ಟು ಕೋಲು ಕೋಲೆ

ಸುಡುವ ಪನ್ನೀರಲಿ ತೊಡೆಗಾಳ ತೊಳೆದು
ಬಾಣತಿಗೆ ಬಜೆಯ ತಿನ್ನಲಿತ್ತಾರು ಕೋಲು ಕೋಲೆ

ತುಪ್ಪದಲಿ ಅಡುಗ್ಯಾಗಿ ಒಪ್ಪದಲಿ ಕರುದಾರೆ
ಉಣ್ಣೇಳವ್ವ ಅಂದು ಕರುದಾರೆ ಕೋಲು ಕೋಲೆ

ತಾಯಿ ಕೆಂಚವ್ವಾಗೆ ಹಾಲಿನ ಅಡಿಗ್ಯಾಗಿ
ಉಣ್ಣೇಳವ್ವ ಅಂದೆ ಕರುದಾರೆ ಕೋಲು ಕೋಲೆ

ಹಸಿವು ಆಗಾಲವ್ವ ಅಂಗೆ ನಾನಿರುತೀನಿ
ಶಿವನೀಗೆ ಪ್ರಾಣ ಕೊಡುತೀನಿ ಕೋಲು ಕೋಲೆ
ಶಿವನಿಗೆ ಪ್ರಾಣ ಕೊಡುತೀನಿ ಹೊನ್ನಾಳಿ
ಚನ್ನಪ್ಪಸ್ವಾಮಿ ಬರದೆ ಉಣ್ಣೋದಿಲ್ಲ ಕೋಲು ಕೋಲೆ
ಜಂಗಮರ ಕರೆಸ್ಯಾರು ಸೂತಕವ ತೊಳೆದಾರು
ಲಿಂಗುಧಾರಣೆಯ ನಡೆಸ್ಯಾರು ಕೋಲು ಕೋಲೆ
ಲಿಂಗುಧಾರಣೆಯ ನಡೆಸಿ ಚನ್ನಪ್ಪಸ್ವಾಮಿ
ಸಣ್ಣಾನು ಗೂಳೇಶನೆಂದು ಕರೆದಾರು ಕೋಲು ಕೋಲೆ

ಅಟ್ಟದ ಮ್ಯಾಗಳ ತೊಟ್ಟಿಲ ತೆಗೆದು
ಬಣ್ಣಾದ ಬಟ್ಟೆಯ ಬಡಬಡ ಹಾಸಿ
ಬೆಚ್ಚ ಬೆಚ್ಚಿನ್ನುವ ಬಿಸಿನೀರ ಎರೆದು
ಕಂದನ ತೊಟ್ಟಿಲ ತೂಗೂತ ನಗುತ
ಜೋಗುಳವ ಹಾಡಿದರು ಜಾಣೆಯರೆಲ್ಲರು ಜೋ ಜೋ

## ತಿರುಪತಿ ಗುಡಿಯಾಳ ತೀರ್ಥನೀ ಮಲಗೋ

ಅಂದನೀ ಮಲಗೋ ಚಂದನೀ ಮಲಗೋ
ತಿರುಪತಿ ಗುಡಿಯಾಳ ತೀರ್ಥನೀ ಮಲಗೋ ಜೋಜೋ

ಬಾಲ ನೀ ಮಲಗೋ ಲೋಲ ನೀ ಮಲಗೋ
ನಾಲರ ಗೆಣತೇರ ಮಗನೆ ನೀ ಮಲಗೋ ಜೋಜೋ

ಮಾವ ಮಲ್ಲೇಶನ ಮಮ್ಮೊಗನೆ ಮಲಗೋ
ಅತ್ತೆ ಮಲ್ಲಿಗುದೇವಿ ಮಮ್ಮೊಗನೆ ಮಲಗೋ ಜೋಜೋ
ತಂದೆ ಪುಟ್ಟನ ಗೌಡನ ಮಮ್ಮೊಗನೆ ಮಲಗೋ
ತಾಯಿ ಉಂಬಳದೇವಿ ಮಮ್ಮೊಗನೆ ಮಲಗೋ ಜೋಜೋ

ಹನ್ನೆರಡು ಮಂದಿ ಅಣ್ಣಾಗಳ ಅಳಿಯ ನೀ ಮಲಗೋ
ಹನ್ನೆರಡು ಮಂದಿ ಅತ್ತೇಗೇರ ಅಳಿಯ ನೀ ಮಲಗೋ ಜೋಜೋ

ಮೈದುನ ಉಜ್ಜಪ್ಪನ ಮಗನೇ ನೀ ಮಲಗೋ
ಚಿಕ್ಕಳು ಕೆಂಚವ್ವನ ಮಗನೇ ನೀ ಮಲಗೋ ಜೋಜೋ

ನಾದಿನಿ ಮಲಕವ್ವ ಅಳಿಯ ನೀ ಮಲಗೋ
ಗಂಡ ಗೂಳೇಶನ ಚಂಡೂವೆ ಮಲಗೋ ಜೋಜೋ
ಕೆರೆಗ್ಹೋಗೊ ಕೆಂಚವ್ವ ಕಮಲ ನೀ ಮಲಗೋ ಜೋಜೋ

ಇಲ್ಲಿಗೆ ಹರಹರ ಇಲ್ಲಿಗೆ ಶಿವಶಿವ
ಇಲ್ಲಿಗೀ ಸಂಧಿ ಪದ ಮುಂದೆ
ಇಲ್ಲಿಗೆ ಈ ಸಂಧಿ ಪದ ಮುಂದೆ
ಕೈಲಾಸಾದ ನಲ್ಲೇರು ಇಬೂತಿ ಧರಿಸ್ಯಾರೆ

## ಕೆಂಚವ್ನ ಸುದ್ದಿ ಇನ್ನೇನ ಹೇಳಲವ್ವ

ಎದ್ದನು ಮಲ್ಲನಗೌಡ ಕೆರೆಗ್ಹೋಗಿ ನಡುದಾನೆ
ಸೂತಕ ಬಂದೈತಿ ಹಡೆದವ್ವ ಕೋಲು ಕೋಲೆ

ಸೂತಕ ಬಂದೈತಿ ಹಡೆದವ್ವ ನನ್ನ ಸೊಸಿ
ಗಂಡು ಮಗನನ್ನು ಜನಿಸ್ಯಾಳೆ    ಕೋಲು ಕೋಲೆ

ತಂಗೀಗೆ ಸೀರಿಲ್ಲ ಲಿಂಗಾಕೆ ಹೊಲೆಯಿಲ್ಲ
ಕಳಸೋಗು ಅಪ್ಪ ಅನುತಾಳೆ    ಕೋಲು ಕೋಲೆ

ಅಲ್ಲಿಂದ ಮಲ್ಲನಗೌಡ ಮನಿಗೇನ ನಡುದಾನೆ
ಪತ್ತುರುಸಿ ಮಾವ ಕರುದಾನೆ    ಕೋಲು ಕೋಲೆ

ನಾಕು ಕಣ್ಣಿನ ಮದಗ ಮುಗುದೆ ಮೂರು ತಿಂಗಾಳು
ಪತ್ತುರುಸಿ ಮಾವ ಕರುದಾನೆ    ಕೋಲು ಕೋಲೆ

ಏನೇನ್ರಿ ಮಾವುಗಳೆ ಏನ ಮಾಡಲಿಬೇಕು
ಬದುಕೇಳ್ರಿ ಮಾವ ಬದುಕೇಳ್ರಿ    ಕೋಲು ಕೋಲೆ
ಬದುಕೇಳ್ರಿ ಮಾವ ಬದುಕೇಳ್ರಿ ಅಂಬೊತ್ತಿಗೆ
ಮನೆಮಾರ ನೀನೆ ಬಳಿಬೇಕು    ಕೋಲು ಕೋಲೆ
ಮನೆಮಾರ ನೀನೆ ಬಳಬೇಕು ಕೆಂಚವ್ವ
ಕೆರೆಯ ಗಂಗವ್ವನ ಮಾಡಬೇಕು    ಕೋಲು ಕೋಲೆ

ಕೆರೆಯ ಗಂಗಮ್ಮನ ಮಾಡಬೇಕು ಅಂಬುದ ಕೇಳಿ
ಸುದ್ದಿಯ ಕಳುವ್ಯಾಳೆ ತವರೀಗೆ    ಕೋಲು ಕೋಲೆ
ಬಾರಪ್ಪ ನನು ಮಗನೆ ಬರುಬಾರೋ ನನುಮಗನೆ
ರಟ್ಟೆಳ್ಳಿಗೆ ಓಲೆ ಒಯ್ಯಬಾರೋ    ಕೋಲು ಕೋಲೆ

ಹಸಿಯ ಹಾಲನೊಯ್ದು ಬಿಸಿಯ ಪಾಯಸ ಮಾಡಿ
ತುಪ್ಪದ ಅನ್ನಾವ ಉಣನೀಡಿ    ಕೋಲು ಕೋಲೆ
ತುಪ್ಪದ ಅನ್ನಾವ ಉಣ ನೀಡಿ ನನಮಗನೆ
ರಟ್ಟೆಳ್ಳಿಗೆ ಓಲೆ ಒಯ್ಯಬಾರೊ    ಕೋಲು ಕೋಲೆ

ಓಲೆ ತಳವಾರನ ಕಂಡಾರೆ ನಡುಮಧ್ಯ
ಕಂಡಾರೆ ಅಣ್ಣಗಳು ತಳವಾರ್ನ    ಕೋಲು ಕೋಲೆ

ಕೆಮ್ಮಾನೆ ಪಟ್ಟಣಕೆ ತಂಗ್ಯಮ್ಮನ ಕೊಟ್ಟದ್ವಿ
ತಂಗ್ಯವ್ವ ಪಾಡಾಗಿ ಅಯಿದಾಳ    ಕೋಲು ಕೋಲೆ



ತಂಗ್ಯವ್ವನ ಸುದ್ದಿ ಇನ್ನೇನ ಹೇಳಲಯ್ಯ
ತಂಗವ್ವನ ಕೆರಿಗೆ ಕೊಡುತಾರೆ    ಕೋಲು ಕೋಲೆ

ತಂಗಿಯ ಮಗನಿಗೆ ತಿಂಗಾಳೆ ತುಂಬಿಲ್ಲ
ತಂಗ್ಯವ್ವಗೆ ಕುಂದ ನುಡಿದಲ್ಲೊ    ಕೋಲು ಕೋಲೆ

ತಂಗಿ ಅವ್ವಾಗೆ ಕುಂದ ನುಡಿದ ತಳವಾರ್ನ
ತುಂಡರಿಸಿ ತಲೆಯ ಹೊಡಿರಯ್ಯ    ಕೋಲು ಕೋಲೆ

ಹೊಡೆಯೋರು ಹೊಡೆಯುತೀರಿ ಬಡಿಯೋರು ಬಡಿತೀರಿ
ಒರೆದ ಕಾಗುದವ ಓದಿರಯ್ಯ    ಕೋಲು ಕೋಲೆ

ಒಬ್ಬಣ್ಣ ಓದುತಾನೆ ಒಬ್ಬಣ್ಣ ಅಳುತಾನೆ
ಸೇರಿ ಕಾಗುದವ ಹರಿದಾರೆ    ಕೋಲು ಕೋಲೆ

ಅಣ್ಣಗಳು ಇದ ಓದಿ ಓಡೋಡಿ ನಡುದಾರೆ
ತಾಯಿ ಉಂಬಳದೇವಿ ಮನಿಗಾಗ    ಕೋಲು ಕೋಲೆ

ಮಾಸೂರ ಮನೆಯಿಂದ ತಳವಾರ ಬಂದಾನೆ
ಸುದ್ದಿ ಏನೆಂದು ಕೇಳವ್ವ    ಕೋಲು ಕೋಲೆ

ಹಸಿಯ ಹಾಲಾನೊಯ್ದು ಬಿಸಿಯ ಪಾಯಸಮಾಡಿ
ಉಣ್ಣಪ್ಪ ನನ್ನ ಮಗನೆಂದೊ    ಕೋಲು ಕೋಲೆ

ಉಂಡುಟ್ಟು ತಳವಾರ ಕೈಯ್ಯಾನೆ ತೊಳಕೊಂಡು
ಬೊಗಸೇಲಿ ಇಳ್ಳೇವ ಇಸಗೊಂಡ    ಕೋಲು ಕೋಲೆ

ದೊಡ್ಡೋರ ಮನಿಯುಗಳ ಭಾಗ್ಯವ್ನ ಕೊಟ್ಟದ್ವಿ    ಶಿವಶಿವನೆ
ಭಾಗ್ಯವಂತೆ ಪಾಡಾಗಿ ಅಯಿದಾಳೆ    ಶಿವಶಿವನೆ

ಪಂಜರದ ಅರಗಿಳಿ ಅಯಿದಾಳ ಶಿವಶಿವನೆ
ಖಾತೆ ರಟ್ಟೆಳ್ಳಿ ಕಮಲಾವೆ    ಶಿವಶಿವನೆ
ನಮ್ಮ ಕೆಂಚವ್ವ ಪಾಡಾಗಿ ಅಯಿದಾಳ    ಶಿವಶಿವನೆ

ಕೆಂಚವ್ವನ ಸುದ್ದಿಯ ಏನೆಂದು ಹೇಳಲವ್ವ ಶಿವಶಿವನೆ
ಕೆಂಚವ್ವನ ಕೆರಿಗೆ ಕೊಡುತಾರೆ    ಶಿವಶಿವನೆ

ಕೆಂಚವ್ವನ ಕೆರಿಗೆ ಕೊಡುತಾರೆಂಬುದ ಕೇಳಿ ಶಿವಶಿವನೆ
ಎದೆ ಎದೆ ಬಡಕೊಂಡು ಅಳುತಾಳೆ ಶಿವಶಿವನೆ

ಹಾದಿಯನೆ ಹೊಲಕೆ ಗೋಧಿ ನಾ ಬಿತ್ತಿದ್ನ ಶಿವಶಿವನೆ
ದಾರೀಗೆ ಮುಳ್ಳ ಎಳೆಸಿದ್ನ ಶಿವಶಿ ವನೆ

ಒಂದುನೆ ಅಣತೀಗೆ ಒಂದೆ ಬತ್ತಿ ಎರದಿದ್ನ ಶಿವಶಿವನೆ
ಬಂದ ಜಂಗುವರ ಬಯುದಿದ್ನ ಶಿವಶಿವನೆ
ಬಂದ ಜಂಗುವರ ಬಯುದ ಕಾರಣದಿಂದ ಶಿವಶಿವನೆ
ಕಂದಮ್ಮ ಕೆರೆಗೆ ಹಡೆದಿದ್ನ ಶಿವಶಿವನೆ

ಗುಬ್ಬಿ ಗೂಡ ಅಳಸಿದ್ನ ಅಬ್ಬೆಗೂಡ ಅಳಸಿದ್ನ ಶಿವಶಿವನೆ
ರುದ್ರಾ ಕ್ಷಿ ಸರವ ಒಡೆದಿದ್ನ ಶಿವಶಿವನೆ
ರುದ್ರಾಕ್ಷಿ ಸರವ ಒಡೆದಿದ್ದ ಕಾರುಣದಿಂದ ಶಿವಶಿವನೆ
ಭದ್ರವ್ನ ಕೆರೆಗೆ ಹಡೆದಿದ್ನ ಶಿವಶಿವನೆ

ಕೆಂಚವ್ನ ಬಸರೀಲಿ ಕೆರಿಗೆ ನಾ ಹೋಗಿದ್ನ ಶಿವಶಿವನೆ
ಕೆರಿಯು ಗಂಗವ್ನ ಬಯುದಿದ್ನ ಶಿವಶಿವನೆ
ಕೆರಿಯು ಗಂಗವ್ನ ಬಯುದಿದ್ನ ಅಂಗಂಬೂತ
ಹೆತ್ತವ್ವ ಭೋರಾಡಿ ಅಳುತಾಳೆ ಲಿಂಗದೇವ

ಗಂಗೆ ಒಳಗೆ ನಾನು ಮುಂಬಲ್ಲ ಬೆಳಗಿದ್ನ
ಗಂಗೆ ಒಳಗೆ ನಾನು ಉಗಳದ್ನ ಲಿಂಗದೇವ

ಕಾಗೆ ಗೂಡಳದಿದ್ನ ಗೂಗೆ ಗೂಡಳದಿದ್ನ
ಇರುವೆ ಕಾಲಲ್ಲಿ ತುಳಿದಿದ್ನ ಲಿಂಗದೇವ
ಇರುವೆ ಕಾಲಲ್ಲಿ ತುಳಿದಿದ್ನ ಕೆಂಚವ್ವನ
ಅಂದವುಳ್ಳ ಮದಗಕೆ ಹಡಿದಿದ್ನ ಲಿಂಗದೇವ

ಅಂದವುಳ್ಳ ಮದಗಕೆ ಹಡೆದಿದ್ನ ಅಂಗಂಬೂತ
ತಾಯಿ ಭೋರಾಡಿ ಅಳುತಾಳೆ ಲಿಂಗದೇವ

## ತವರೂರಣ್ಣ ನಿಮ್ಮ ದಾರಿ ನೋಡಿದೆನು

ಲಿಂಗವಂತರ ಕೈಯ ಮೋರೆ ಮೇಲೆ ಎಳಕೊಂಡು
ತಾರೆ ಕೇದಿಗೆಯು
ದಾರಿ ನೋಡ್ಯಾಳೆ ತವರೂರ ಅಣ್ಣ
ನಿಮ್ಮ ದಾರಿ ನೋಡಿದೆನು
ಅಪರಂಜಿ ಉಡುದಾರ ತಿಪುರದ ಸುಣ್ಣದ ಕಾಯಿ
ತಾರೆ ಕೇದಿಗೆಯು
ಮಕರಂಬದೋರಿ ಬಲಗೈಲಿ ಅಣ್ಣ ನಿಮ್ಮ
ದಾರಿ ನೋಡಿದೆನು
ಮಕರಂಬದೋರಿ ಬಲಗೈಲಿ ದೇವಿಂದ್ರಣ್ಣ
ತಾರೆ ಕೇದಿಗೆಯು
ನನ್ನ ಕಂದನ ಕೈಸೆರೆಯು ಉಳವೀರಣ್ಣ ನಿಮ್ಮ
ದಾರಿ ನೋಡಿದೆನು
ಏತುದ ಬಾವ್ಯಾಗೆ ಜೋತುರವ ಒಗೆವಾನ
ತಾರೆ ಕೇದಿಗೆಯು
ಜಾತಿ ಮುತ್ತುಗಳೆ ಕಿವಿಯೊಳಣ್ಣ ನಿಮ್ಮ
ದಾರಿ ನೋಡಿದೆನೆ
ಜಾತೀನೆ ಮುತ್ತುಗಳು ಕಿವಿಯಾಗೆ ದೇವಿಂದ್ರಣ್ಣ
ತಾರೆ ಕೇದಿಗೆಯು
ನಮ್ಮ ಬಾಲನ ಕೈ ಸೆರೆಯು ಉಳುವೀರಣ್ಣ
ನಿಮ್ಮ ದಾರಿ ನೋಡಿದೆನು
ಅಂಗಿ ಮ್ಯಾಲೆ ಅಂಗಿ ತುಂಬಿ ಬಿಟ್ಟ್ಲದೀಯು
ತಾರೆ ಕೇದಿಗೆಯು
ಗಂಗ್ಯಾಗೆ ಗಂಧ ಧರಿಸಿದ ಧರ್ಮದಣ್ಣ
ನಿಮ್ಮ ದಾರಿ ನೋಡಿದೆನೆ
ಗಂಗ್ಯಾಗೆ ಗಂಧ ಧರಿಸೋ ದೇವಿಂದ್ರಣ್ಣ
ತಾರೆ ಕೇದಿಗೆಯು
ನಮ್ಮ ಕಂದನ ಕೈಸೆರೆಯು ಉಳವೀರಣ್ಣ
ನಿಮ್ಮ ದಾರಿ ನೋಡಿದೆನೆ

## ತವರೀಗೆ ಆಕೆ ನಡುದಾಳೆ

ಬಾರಪ್ಪ ನನು ಮಗನೆ ಬರುಬಾರೋ ನನು ಮಗನೆ
ನಮ್ಮಾನೆ ನೋಡಿ ಬರುವಾನ ಕೋಲೆ ಕೋಲನ್ನ ಕೋಲೆ

ಹಟ್ಟೀಯ ಹಬ್ಬಾಕೆ ಅಪ್ಪ ನಮ್ಮ ಕರಿಸ್ಯಾನೆ
ದಟ್ಟಿ ದುಂಡಿನ ಸೀರೆ ಉಡಿಸ್ಯಾನೆ ಕೋಲೆ
ದಟ್ಟಿ ದುಂಡಿನ ಸೀರೆ ಉಡಿಸ್ಯಾರು ನನು ಮಗನೆ
ಬೆಳ್ಳಿಯ ಉಡುದಾರ ತರುತಾರೋ ಕೋಲೆ

ಥಾರಿಯೇನೆ ಸೀರೆಯ ಉಡುತೀನೊ ನನ ಮಗನೆ
ನಾಗಮುರುವ ನಿನಗೆ ತರಿಸ್ಯಾರು ಕೋಲೆ
ನಾಗಮುರುವ ನಿನಗೆ ತರಿಸೇನು ಅಂದೇಳಿ
ಪುತ್ರಯ್ಯನ ಕೂಟೆ ಒಳ ಮಾತೆ ಕೋಲೆ

ತೌವರಿಂದ ಸುದ್ದಿಯು ಇನ್ನಾದ್ರು ಬರಲಿಲ್ಲ
ಚಿಂತೀಲಿ ಕೆಂಚವ್ವ ಹೊರಟಾಳೆ ಕೋಲೆ

ಕರಿಯ ಕಲ್ಲಿನ ಮೇಲೆ ಬಿಳಿಯ ಉಗುಳಾ ಹೊಯ್ದು
ಉಗುಳಾರ ಹೊತ್ತಿಗೆ ಬರುತೀನೋ ಕೋಲೆ
ಉಗುಳಾರ ಹೊತ್ತಿಗೆ ಬರುತೀನೊ ನಮ್ಮಾವ
ತವರೀಗೆ ಹೋಗಿ ಬರತೀನೋ ಕೋಲೆ

ತವರೀಗೆ ಹೋಗಾಕೆ ಬಾಳದಿನಿಲ್ಲನ್ವ
ಕೆರೆಯ ಗಂಗಮ್ಮ ಮಾಡಬೇಕು ಕೋಲೆ
ಕೆರೆಯ ಗಂಗಮ್ಮನ ಮಾಡಬೇಕು ಅಂಬೊತ್ತಿಗೆ
ಉಗುಳಾರ ಹೊತ್ತಿಗೆ ಬರತೀನೋ ಕೋಲೆ

ಬಲಗೈ ಭಾಷೆ ಕೊಟ್ಟು ಎಡಗೈ ನಂಬಿಕೆ ಕೊಟ್ಟು
ತವರೀಗೆ ಆಕೆ ನಡುದಾಳೆ ಕೋಲೆ

## ಸತ್ಯಾವುದ ಕೆರಿಗೆ ದಯಮಾಡೆ

ಕರಿಯ ಸೀರೆ ಉಟುಗೊಂಡು ಕಾಲುಂಗುರಿಟ್ಟುಕೊಂಡು
ಯಾಕೋ ಕೆಂಚವ್ವ ಬರುತಾಳೆ ಸೋ
ಯಾಕೇನೆ ಕೆಂಚವ್ವ ಬರುತಾಳೆ ಅಂಬೂತ
ಅಣ್ಣನ ಹೆಂಡಿರೆ ನೋಡುತಾರೆ ಸೋ

ಅಲ್ಲಿಂದ ಕೆಂಚವ್ವ ಎಲ್ಲಿಗೆ ನಡುದಾಳೆ
ತವರೀಗೆ ಹೋಗಿ ನೆಲಿನಿಂತೊ ಸೋ

ಖಾತೆ ನನ್ನ ಮಗಳು ಲೋಕದಂತೋಳಲ್ಲ
ಲೋಕಾದ ಮೇಲೆ ಮಳೆರಾಯ ಸೋ
ಲೋಕಾದ ಮೇಲೆ ಮಳೆರಾಯ ತಡೆದಂಗೆ
ತಡದ್ಯಾಕೆ ಬಂದೆ ನನ ಮಗಳೆ ಸೋ
ತಡದ್ಯಾಕೆ ಬಂದೆ ನನ ಮಗಳೆ ಕೆಂಚಮ್ಮ
ಯಾವ ಪಾಪಿ ನಿನ್ನ ಉಳಿವ್ಯಾರು ಸೋ

ಬಿಡುವಾಕೆ ಅಪ್ರಿಚ್ಛಲ್ಲ ಕೊಡುವಾಕೆ ಅಪ್ರಿಚ್ಛಲ್ಲ
ಹುಟ್ಟಿದಂದೀಗೆ ಪಡವಣಿಗೆ ಸೋ
ಹುಟ್ಟಿದಂದೀಗೆ ಪಡವಣಿಗೆ ನಮ್ಮವ್ವ
ತಪ್ಪಿಸಿಕೊಂಡಾರೆ ಬಿಡದವ್ವ ಸೋ

ತಂದವರು ಅವರು ಏನೇ ಮಾಡಿದಾರು
ಕೊಟ್ಟವರಿಗೆ ತಂಗಿ ಇದರೇನೆ ಸೋ
ಕೊಟ್ಟವರಿಗೆ ತಂಗಿ ಇದರೇನೆ ನೀನಿನ್ನು
ಸತ್ಯಾವುದ ಕೆರಿಗೆ ದಯಮಾಡೆ ಸೋ

ಆರು ಸಾವಿರ ಹಣವ ಸೂರೆ ಮಾಡ್ಯೆದಾರೆ
ತಂದವರಿಗೆ ಮಗಳೆ ಇದರೇನು ಸೋ
ತಂದವರಿಗೆ ಮಗಳೆ ಇದರೇನೆ ನೀನಿನ್ನು
ಸಂಭ್ರಮದ ಕೆರಿಗೆ ದಯಮಾಡೆ ಸೋ

## ನನ ಗಂಡಾಗೆ ತಂಗಿ ಕೊಡಿರಣ್ಣ

ನಾ ಕೆರಿಗೆ ಹೋಗತೀನಿ ನನ ಗಂಡ ಪರದೇಶಿ
ನನ ಗಂಡಾಗೆ ತಂಗಿ ಕೊಡಿರಣ್ಣ ಮಂದಗಮನೆ

ಬಾವಿಗೆ ನೂಕೋರ ಮನೆ ಕೆರಿಗೆ ನೂಕೋರ ಮನೆ
ಕೊಡುವದಿಲ್ಲವ್ವ ಅನುತಾರೆ ಮಂದಗಮನೆ

ಕೆರಿಗೆ ನೂಕೋರ ಮನಿಗೆ ಬಾವಿಗೆ ನೂಕೋರ ಮನಿಗೆ
ಇನ್ನಾರು ಹೆಣ್ಣ ಕೊಡುತಾರೆ ಮಂದಗಮನೆ

ಹೆಣ್ಣಾನೆ ಕೊಟ್ಟಾರು ಮದುವೆಯನಾದರೆ
ನಿಮ್ಮೀಗೆ ದುಃಖ ಬರುವುದಿಲ್ಲವೆ ಮಂದಗಮನೆ

ನಮ್ಮಪ್ಪನ ಅಳಿಯ ಹೋಗಿ ಇನ್ನೊಬ್ಬನ ಅಳಿಯಾದರೆ
ನಮ್ಮಪ್ಪಗೆ ದುಃಖ ಬರದೇನೊ ಮಂದಗಮನೆ

ನಮ್ಮವ್ವನ ಅಳಿಯ ಹೋಗಿ ಇನ್ನೊಬ್ಬನ ಅಳಿಯಾನಾದ್ರೆ
ನಮ್ಮವ್ವಗೆ ದುಃಖ ಬರದೇನೊ ಮಂದಗಮನೆ

ನಿಮ್ಮ ಬಾವ್ಯೆದುನೋಗಿ ಇನ್ನೊಬ್ರ ಬಾವ್ಯೆದುನಾದ್ರೆ
ನಿಮ್ಮೀಗೆ ದುಃಖ ಬರದೇನು ಮಂದಗಮನೆ

ಕೆರಿಗ್ಹೋಗೋ ತಂಗ್ಯವ್ವಗೆ ಈಟೋಂದು ಅತಿಯಾಸೆ
ಕೊಡುತೀವೋಗಪ್ಪ ಅನುತಾರೆ ಮಂದಗಮನೆ
ಕೊಡುತೀವೋಗಪ್ಪ ಅನುತಾರೆ

ಕೆರಿಗೆ ಹೋದಾ ಮೇಲೆ ಹೆಣ್ಣ ಕೊಡುವುದು ನಲೆಯಿಲ್ಲ
ಇಳ್ಯಾವಿಟ್ಟುಕೋಡೋ ಹಿರಿಯಣ್ಣ ಮಂದಗಮನೆ
ಇಳ್ಯಾವ ಮಾಡಲಿಕೆ ಏನೇನು ಸಾಮಾನ ತರಬೇಕು
ತಿಳಿದೇಳಿರೊ ನನ್ನ ಹಿರಿಯಣ್ಣ ಮಂದಗಮನೆ

ದೇವರಿಗೆ ಹಾಕೋ ಲೋಬಾನ ತರಬೇಡ ತಂಗ್ಯವ್ವ
ಇಳ್ಯಾವ ಇಟಗೊಂಡು ಹೋಗಬೇಕು ಮಂದಗಮನೆ



ನಗುನಗುತ ಕೆಂಚವ್ವ ತಂಗೀಗೆ ಇಳ್ಯೀವ ಇಟ್ಟು
ಬಂಗಾರ ಹಾಕ್ಯಾಳೆ ಮಣ ಮಣವ ಮಂದಗಮನೆ
ಬಂಗಾರ ಹಾಕ್ಯಾಳೆ ಮಣಮಣವ ಕೆಂಚಮ್ಮ
ಸಕ್ಕರೆ ಹಂಚ್ಯಾಳೆ ಸಭೆಗೆಲ್ಲ ಮಂದಗಮನೆ
ಸಕ್ಕರೆ ಹಂಚ್ಯಾಳೆ ಸಭೆಗೆಲ್ಲ ಕೆಂಚಮ್ಮ
ಉತ್ತುತ್ತಿ ಹಂಚ್ಯಾಳೆ ಬಳಗಾಕೆ ಮಂದಗಮನೆ

ಬಾರಪ್ಪ ತಳವಾರ ಬಾರುಬಾರೊ ತಳವಾರ
ಕರಿಬಾರೊ ರಟ್ಟೆಳ್ಳಿ ಬಳಗೆಲ್ಲ ಮಂದಗಮನೆ

ಏನೆಂದು ಸಾರಲಿ ಎಂತೆಂದು ಸಾರಾಲಿ
ಏನೆಂದು ಸಾರಲಿ ಹಡೆದವ್ವ ಮಂದಗಮನೆ

ಅಡಿಕ್ಯಾರ ಮನಿಯಾರಣ್ಣ ಹೂವಿನರ ಮನಿಗೆ ಕೊಟ್ಟಾರೆಂದು
ಕರಿಬಾರೊ ರಟ್ಟೆಳ್ಳಿ ಬಳಗೆಲ್ಲ ಮಂದಗಮನೆ

ಕರಿಬಂದ ತಳವರುಗೆ ಏನೇನು ಉಡುಗರೆ
ಏನು ಕಕುಲಾತಿ ನೀಡುತಾಳೆ ಮಂದಗಮನೆ
ಏನೋ ಕಕುಲಾತಿ ನೀಡುತಾಳೆ ಕೆಂಚಮ್ಮ
ಮೂರೂರು ಉಂಬಳಿ ಬರದಾಳೆ ಮಂದಗಮನೆ

ಗಂಡ ಗೂಳೇಶ ತಿಂಗಳಿಗೊಮ್ಮೆ ಬಂದಾರೆ
ತಿಂಗಳಿಗೆ ಕೆರಾ ಸವೆದಾವೆ ಮಂದಗಮನೆ
ತಿಂಗಳಿಗೆ ಕೆರಾ ಸವೆದಾವೆ ರಟ್ಟೆಳ್ಳಿ
ಅಂಗಳಕೆ ಹಾಕಿಸ್ಯಾಳ ಚಡಿಗಲ್ಲು ಮಂದಗಮನೆ

## ನಾನೋಗ್ತಿನವ್ವ ಮದಗಾಕೆ

ಎಲ್ಲ ಹೆಣ್ಣ ಮಕ್ಕಳು ಗಂಡನ ಮನೆಗೆ ಹೋಗ್ತಾರೆ
ನಾನೋಗ್ತೀನವ್ವ ಮದಗಾಕೆ ದೇವಾರುದೇವ
ನಾನೋಗ್ತಿನವ್ವ ಮದಗಾಕೆ ಅಂಬುದ ಕೇಳಿ
ಹೂವಿನ ಉಚ್ಚಾಯ ಕಟ್ಟುತಾರೆ ದೇವಾರುದೇವ

## ಮುದಗದ ಏರಿಯು ಬಿಟ್ಟವು ಮದುವೆಯ ಬಂಡಿ

ಗೂಳೇಶಪ್ಪನ ಮದುಮಗನ ಮಾಡುತಾರೆ
ಶಿವಶಿವನೆ ಮದುವೀಗೆ ಗಾಡಿ ಹೂಡುತಾರೆ

ಒಂದಾನೇ ಗಾಡ್ಯಾಲ್ಲ ಎರುಡಾನೆ ಗಾಡ್ಯಾಲ್ಲ
ಹರಹರನೆ ಹನ್ನೆರಡು ಗಾಡಿ ಹೊರಡುತಾವೆ
ಹನ್ನೆರಡು ಗಾಡಿ ಹೊರಟಾವೆ ಮಾಸೂರ
ಶಿವಶಿವನೆ ಕೆರೆ ಏರಿಮ್ಯಾಲೆ ಬರುತಾವೇ

ಕೆರೆಯಾಗೆ ಇರುವ್ವೋಳೆ ಕರದಾರೆ ಓ ಎನ್ನೋಳೆ
ಹರಹರನೆ ಮೂರುದಿನಕೆ ಅಪ್ಪಾಣಿ ಪಡುದಾಳೆ
ಮೂರುದಿನ ಅಪ್ಪಾಣಿ ಪಡುದಾಳೆ ಕೆಂಚಮ್ಮ
ಶಿವಶಿವನೆ ಗಂಡಿದ್ದ ಬಂಡಿಗೂ ನಡೆದಾಳೆ

ಗಂಡಿದ್ದ ಬಂಡೀಗೂ ನಡೆದಾಳೆ ನನ್ನಮ್ಮ
ಹರಹರನೆ ಏನೆಂದು ಗಂಡಾನ ಕೇಳುತಾಳೆ

ಹಾಡ ಹೇಳೂತೀನಿ ಹಸೆಯ ಬರೆಯೂತೀನಿ
ಶಿವಶಿವನೆ ನನಗೀಟೆ ಬಾನ ಇಡುತೀರಾ

ಮಾಡಾದೆ ಮದಿವ್ಯಂತೆ ಬಾನಕೇನು ಕೊರತೆ
ಹರಹರನೆ ಹತ್ತಿ ಬಾ ಬಂಡಿ ಅನುತಾನೆ

ಯಾವ ಸೀಮೆ ದೆವ್ವಂದಿರಿ ಯಾವ ಸೀಮೆ ಪೀಡೆಂದಿರಿ
ಶಿವಶಿವನೆ ಕೊಳ್ಳಾಗುಳಿ ಲಿಂಗ ತೋರಿಸ್ಯಾಳೆ

ಮದಗದ ಏರಿಯ ಬಿಟ್ಟವು ಮದುವೆಯ ಬಂಡಿ
ಹರಹರನೆ ರಟ್ಟೆಳ್ಳಿಗಾಗ ನಡೆದಾವೆ
ರಟ್ಟೆಳ್ಳಿಗಾಗ ನಡೆದಾವೆ ಮದುವೆಯ ಬಂಡಿ
ಶಿವಶಿವನೆ ಬೀಗರು ಬಂದೆದುರುಗೊಳತಾರೆ
ಬೀಗರು ಬಂದೆದುರುಗೊಳುತಾರೆ ಕಳಸ ಹಿಡಿದು
ಹರಹರನೆ ಮದಲಿಂಗಗು ಮಾಲೆ ಹಾಕ್ಯಾರೆ



ಮಲ್ಲಿಗೆಯ ಮಾಲೆ ಹಾಕಿ ಮುತ್ತೈದೆಯರು
ಶಿವಶಿವನೆ ಮುತ್ತಿನಾರುತೀಯ ಬೆಳಗ್ಯಾರೆ
ಮುತ್ತೀನ ಆರುತೀಯ ಬೆಳಗೂತ ನಾರಿಯರು
ಹರಹರನೆ ಒಪ್ಪುಳ್ಳ ಸೋಬಾನ ಹಾಡುತಾರೆ

ಒಪ್ಪುಳ್ಳ ಸೋಬಾನ ಹಾಡೂತ ಬೀಗಾರು
ಶಿವಶಿವನೆ ಮಂಗಳವಾದ್ಯದಿ ಡೌಲು ಬರುತಾವೆ
ಈಗಾನೆ ಮದುವೆಯ ಮಾಡುದುಕೆ ಕೆಂಚಮ್ಮ
ಹರಹರನೆ ಹಡೆದಮ್ಮನ ಮನೆಗೆ ನಡೆದಾಳೆ

## ಸೋಬಾನ ನಮ್ಮ ಮನಿಯಾಗೆ

ಸೋಬಾನ ನಮ್ಮ ಮನಿಯಾಗ ಗೂಳೇಶ
ಹೊತ್ತು ಮೂಡೊತ್ತಿಗೆ ಮದುಮಗ ಸುವ್ವಿ ಬಾ ಸುವ್ವಿ

ನೆಲ್ಲೂವ ಕುಟ್ಯಾಕೆ ನೆಲವಳ್ಳು ಕೊಡಿರವ್ವ
ಕಲ್ಯಾಣ ನಮ್ಮ ಮನಿಯಾಗೆ ಸಣ ಕೆಂಚವ್ವ
ಬೆಳ್ಳಿ ಮೂಡೊತ್ತಿಗೆ ಮದುಮಗಳು ಸುವ್ವಿ ಬಾ ಸುವ್ವಿ

ಸೋಬಾನುದ ಮನಿಯಾಗೆ ಕಸವಿಲ್ಲ ಕಡ್ಡಿಲ್ಲ
ಹಣ್ಣು ಅಡಿಕೆ ಎಲೆ ಮಲಗಿದೆ ಸುವ್ವಿ ಬಾ ಸುವ್ವಿ
ಹಣ್ಣು ಅಡಿಕೆ ಸಿಪ್ಪೆ ಮಲಗೀದೆ ರಟ್ಟೆಳ್ಳಿ
ಹೆಣ್ಣು ಮಕ್ಕಳೆಂಥ ಚೆಲುವ್ಯಾರೆ ಸುವ್ವಿ ಬಾ ಸುವ್ವಿ

ಸೋಬಾನ ಅನ್ನೋದ ಯಾರು ಮಾಡಿದರವ್ವ
ಸೂರ್ಯನ ತಂಗಿ ಧರಣ್ವ ಸುವ್ವಿ ಬಾ ಸುವ್ವಿ
ಸೂರ್ಯನ ತಂಗಿ ಧರಣವ್ವ ಮಾಡಿದ ಪದವು
ನಾಡಿಗೊಂದೊಂದೆ ಹರುದಾವೆ ಸುವ್ವಿ ಬಾ ಸುವ್ವಿ

ಉಬ್ಬು ತಗ್ಗುಗಳೆಲ್ಲ ಚೌಕಟ್ಟು ಮಾಡಿಸಿದ
ನೆಲಕೆ ವಜ್ರವ ಬಿಗಿಸೀದ ಸುವ್ವಿ ಬಾ ಸುವ್ವಿ
ನೆಲಕೆ ವಜ್ರವ ಬಿಗಿಸಿದ ಪುಟ್ಟನಗೌಡ
ದೊಡ್ಡುಳ್ಳ ಅಳಿಯಾನ ಮದವೀಗೆ ಸುವ್ವಿ ಬಾ ಸುವ್ವಿ

ಉಬ್ಬು ತಗ್ಗುಗಳೆಲ್ಲ ಚೌಕಟ್ಟು ಮಾಡಿಸಿದ
ನೆಲಕೆ ಚಿನ್ನಾವ ಬಿಗಿಸೀದ ಸುವ್ವಿ ಬಾ ಸುವ್ವಿ
ನೆಲಕೆ ಚಿನ್ನಾವ ಬಿಗಿಸೀದ ಜಾಣುಳ್ಳ
ಸಣ್ಣ ಕೆಂಚವ್ವ ಮದವೀಗೆ ಸುವ್ವಿ ಬಾ ಸುವ್ವಿ

ಹತ್ತು ಕಾಲೇಣಿ ಹತ್ತಾಕಿ ಹಾಕೆಂದು
ಸುತ್ತಲ ಆಸರದ ಗೊನಿಬಾಳೆ ಸುವ್ವಿ ಬಾ ಸುವ್ವಿ
ಸುತ್ತಲ ರಾಜ್ಯದ ಗೊನಿಬಾಳೆ ನೆಲ್ಲೂವ
ಅವರತ್ತೆ ತಂದಿಕ್ಯಾಳೆ ವರಳೀಗೆ ಸುವ್ವಿ ಬಾ ಸುವ್ವಿ

ಆರು ಕಾಲಿನೇಣಿ ವಾವುರಿಗೆ ಹಾಕ್ಕೊಂಡು
ದೂರಲ ರಾಜ್ಯದ ಗೊನಿಬಾಳೆ ಸುವ್ವಿ ಬಾ ಸುವ್ವಿ
ದೂರಲ ರಾಜ್ಯದ ಗೊನಿಬಾಳೆ ನೆಲ್ಲೂವ
ಅವ್ರತಾಯಿ ತಂದಾಳೆ ವರಳೀಗೆ ಸುವ್ವಿ ಬಾ ಸುವ್ವಿ

ಅ ಕೈಯಾಗುಳ ಒನಿಕೆ ಈ ಕೈಗೆ ತಿರುವೂತ
ಬಾಪೂರಿ ತೋಳ ತಿರುವೂತ ಸುವ್ವಿ ಬಾ ಸುವ್ವಿ
ಬಾಪುರಿ ಕೈಯಾ ತಿರುವೂತ ಮುತ್ತೈದೆಯರು
ಎತ್ತಿಬಿಟ್ಟರು ಜಂತದೊನಿಕೇಯ ಸುವ್ವಿ ಬಾ ಸುವ್ವಿ

ಆ ಕೈಯಾಗುಳ ಒನಿಕೆ ಈ ಕೈಗೆ ತಿರವೂತ
ಬಂದೀಯ ತೋಳ ತಿರವೂತ ಸುವ್ವಿ ಬಾ ಸುವ್ವಿ
ಬಂದೀಯ ತೋಳ ತಿರವೂತ ಮುತ್ತೈದೆರು
ಎತ್ತಿಬಿಟ್ಟರು ಜಂತದೊನಿಕೆಯ ಸುವ್ವಿ ಬಾ ಸುವ್ವಿ

ಕಡಲೆಯ ಬೀಸಾಕೆ ಕಡುಜಾಣೆ ಬರಲಿಲ್ಲ
ಹತ್ತು ಮಾಳಿಗೆ ಮನಿಯೋಳು ಸುವ್ವಿ ಬಾ ಸುವ್ವಿ
ಹತ್ತುಮಾಳಿಗೆ ಮನೆಯೋಳು ಕೆಂಚವ್ವ
ಕಡಲೆ ಬೀಸಕೆ ಕರವೀರಿ
ಸುವ್ವಿ ಬಾ ಸುವ್ವಿ

ಉದ್ದನೆ ಬೀಸಕೆ ಬುದ್ಧಿವಂತರ ಬರಹೇಳಿ
ತಿದ್ದಿದ ಮಾಳಿಗೆ ಮನೆಯೋಳ ಸುವ್ವಿ ಬಾ ಸುವ್ವಿ
ತಿದ್ದಿದ ಮಾಳಿಗೆ ಮನೆಯೋಳ ಮಲಕವ್ವ
ಉದ್ದ ಬೀಸಾಕೆ ಕರವೀರಿ ಸುವ್ವಿ ಬಾ ಸುವ್ವಿ



ಮನಿಯಾಕೆ ಮುತ್ತ ನಿಧಿ ಹೊಯ್ದು ಕೈಲಾಸಾದ
ದೊರೆಗಳು ಬಂದಾರೆ ಮದವೀಗೆ ಸುವ್ವಿ ಬಾ ಸುವ್ವಿ

ದೊರೆಗಳು ಬಂದಾರೆ ಮದವೀಗೆ ಮತ್ತೆ
ಋಷಿಗಳು ಬಂದಾರೆ ಮದವೀಗೆ ಸುವ್ವಿ ಬಾ ಸುವ್ವಿ

ಸತಿವಂತೆ ಪಾರ್ವತಿದೇವಿ, ಋಷಿಗಳು ಬಂದೈದಾರೆ
ಹಸೆಬರೆದು ಮುತ್ತ ನಿಧಿ ಹೊಯ್ಯೆ ಸುವ್ವಿ ಬಾ ಸುವ್ವಿ

ಹಸೆ ಬರೆದು ಮುತ್ತ ನಿಧಿ ಹೊಯ್ಯ ಕೆಲಾಸಾದ
ಶರಣರು ಬಂದಾರೆ ಮದವೀಗೆ ಸುವ್ವಿ ಬಾ ಸುವ್ವಿ

ಕಲ್ಯಾಣುದ ಮನಿಗೆ ಎಲ್ಲರೋಗುವ ಬನಿ
ಚೆನ್ನೆ ಗಂಗಮ್ಮ ಗೌರಮ್ಮ ಸುವ್ವಿ ಬಾ ಸುವ್ವಿ
ಚೆನ್ನೆ ಗಂಗಮ್ಮ ಗೌರಮ್ಮ ನಿಲನಿಂತು
ಕಲ್ಯಾಣುದ ಮನಿಗೆ ನಡೆದಾರೆ ಸುವ್ವಿ ಬಾ ಸುವ್ವಿ

## ಸೋಬಾನವೆನ್ನಿ ಶಿವ ಬನ್ನಿ

(ಬೀಗರನ್ನು ಕರೆಯುವ ಹಾಡು)

ಆ ಪಟ್ಟಿ ಇಡತನ್ನಿ ಈ ಪಟ್ಟಿ ಇಡತನ್ನಿ
ಗಾಳೀಯ ಪಟ್ಟಿ ಇಡತನ್ನಿ
ಗಾಳೀಯನೆ ಪಟ್ಟಿ ಇಡತನ್ನಿ
ಮಾವ ಮಲ್ಲನಗೌಡ್ನ
ಡೊಳ್ಳುಹೊಟ್ಟೆಯ ಬಿಗಿತನ್ನಿ ।

ಆ ಪಟ್ಟಿ ಇಡತನ್ನಿ ಈ ಪಟ್ಟಿ ಇಡತನ್ನಿ
ಹತ್ತಿಯ ಪಟ್ಟಿ ಇಡತನ್ನಿ ।
ಹತ್ತಿಯನ್ನೇ ಪಟ್ಟಿ ಇಡತನ್ನಿ ಮಲ್ಲಿಗುದೇವಿಯ
ಡೊಳ್ಳ ಹೊಟ್ಟೆಯ ಇಡತನ್ನಿ ।

ಆನೆ ಮೇಲೆ ಬರುವರು ಜಾಣೆರೆಂಬುತಿದ್ವಿ
ನಾವು ಕೊಡಲಾರೆವು ಮದುಮಗಳ ।

ನಾವು ಕೊಡಲಾರೆವು ಮದುಮಗಳ ನಮ್ಮನೆಯ
ಜಾಣೆಗು ನೀವೆಲ್ಲಿ ದೊರಕೀರಿ।

ಒಂಟೆ ಮೇಲ್ ಬರುವೋರು ಬಂಟರಂಬುತಿದ್ವಿ
ಗಂಟುಗಾಲರ ಮದುಮಗ।
ಗಂಟುಗಾಲರೆ ಮದುಮಗ ನಮ್ಮನೆಯ
ಬಂಟೆಗು ನೀವೆಲ್ಲಿ ದೊರಕೀರಿ

## ಗಂಡನ್ನು ಜರಿಯುವುದು

ಜಮ್ಮನೇರಲರಿದಂಗ ಎಳೆನಾಗರ ಬಳ್ಳಿ ತರಿದಂಗ
ಏನ್ ತರುದವ್ವ ಮದುಮಗ। ಬೀಗರೆ
ಏನ ತರುದವ್ವ ಮದುಮಗ ಮಲ್ಲಿಗುದೇವಿ
ಉದ್ದಿನಕಾಳತಿಂದು ಹಡೆದಿದ್ಲ। ಬೀಗರೆ

ಕೋಣೇನೆ ಬಾಗುಲಿಗೆ ಸಾದವ ಬಳುದಂಗ
ಏನ ತರದವ್ವ ಮದುಮಗ ಬೀಗರೆ
ಏನು ತರದವ್ವ ಮದುಮಗ ಮಲ್ಲಿಗುದೇವಿ
ಇದ್ದಲಿ ತಿಂದೆ ಹಡದಿದ್ಯಾ ಕೋಲು ಕೋಲೆ

## ಹೆಣ್ಣನ್ನು ಜರಿಯುವುದು

ಸೆಟ್ಟರು ಸೆಟ್ಟರು ಕೂಡಿ ಮತ್ತೆಲ್ಲಿ ತಂದೀರಿ
ಹತ್ತಿ ಮರದಗಳ ಚೌವಡವ್ನ। ನಂಟರ
ಹತ್ತಿ ಮರದಗಳ ಚೌವಡವ್ವ ನಿಮ್ಮ ಮಗಳು
ಚಿತ್ತರದ ಗೊಂಬೆ ಮದುಮಗ। ನಂಟರೆ

ರಾಯರಾಯರು ಕೂಡಿ ಇದು ಎಲ್ಲಿ ತಂದೀರಿ
ಆಲದ ಮರದಗಳ ಚೌಡವ್ವನ। ನಂಟರೆ
ಆಲದ ಮರದಗಳ ಚೌಡವ್ವ ಮದುಮಗಳು
ಚಿತ್ತರದ ಗೊಂಬೆ ಮದುಮಗ ಕೋಲು ಕೋಲೆ

## ಚಂದಾದಿ ಹೆಸರ ಹೇಳಿರಯ್ಯಾ....

ಅಡಿಕೆ ಕೋಡಾಕೋಗಿ ಮಡಿಕೆ ಮ್ಯಾಗೆ ಬಿದ್ದು
ಮಡಿಕೊಡದೆ ಮೂಗೆ ಮಸಿ ನಿಂತು ಕೋಲು ಕೋಲೆ
ಮಡಿಕೊಡದೆ ಮೂಗೆ ಮಸಿನಿಂತು ಮಲಕವ್ವ
ಅಡಿಕೆಯ ಹಂಚ ಸಡಗರವೆ ಕೋಲು ಕೋಲೆ

ಎಲೆಯ ಹಂಚಾಕ್ಹೋಗಿಒಲಿಯ ಮೇಲೆ ಬಿದ್ದೋ
ಒಲಿಯೊಡೆದ ಮುಖವೆ ಮಸಿನಿಂತು ಕೋಲು ಕೋಲೆ
ಹನಿಯಾನೆ ಬರೆಯೂತ ಹಾಡನೆ ಹೇಳೂತ
ಹಾಸ್ಯದಿ ಮದುವೆ ಮಾಡುತಾಳೆ ಕೋಲು ಕೋಲೆ

ದಾರೀನೆ ಮೂರುತವ ಮಾಡ್ಯಾಳೆ ಕೆಂಚಮ್ಮ
ಶಿವಶಿವನೆ ನಾಗುವಾಲೆ ಆಗ ಮಾಡಿಸ್ಯಾಳೆ
ನಾಗುವಾಲಿಯ ಆಗ ಮಾಡಿಸ್ಯಾಳೆ ಕೆಂಚಮ್ಮ
ಹರಹರನೆ ಗಂಡನ ಹೆಸರ ಕೇಳುತಾಳೆ

ಗಂಡನ ಹೆಸರು ಕೇಳುತಾಳೆ ಕೆಂಚಮ್ಮ
ಶಿವಶಿವನೆ ಹೆಸರೇಳಿರಯ್ಯ ಅನುತಾಳೆ

ಹೆಸರಾನೆ ಹೇಳಾಕೆ ನಮ್ಮಿಗೆ ಬರೋದಿಲ್ಲ
ನೀನೇಳಿಕೊಡು ಅನುತಾಳೆ ಕೋಲು ಕೋಲೆ

ತಿಂಗಾಳು ಆಗಾಲಿ ಅಂಗೆ ನಾನಿಲಸೇನು
ಚಂದಾದಿ ಹೆಸರ ಹೇಳಿರಯ್ಯ ಕೋಲು ಕೋಲೆ

ಹೆಸರನ್ನೆ ಹೇಳಲಿಕೆ ನಮ್ಮಿಗೆ ಬರುವೋದಿಲ್ಲ
ನೀನೇಳಿಕೊಡು ಅನುತಾನೆ ಕೋಲು ಕೋಲೆ

## ಒಡಪ ಚಂದಾದಿ ಹೇಳಿಕೊಟ್ಟು

ಆರು ಸೇರು ಎಳ್ಳು, ಮೂರುಸೇರು ಜೊಳ್ಳು
ನಮ್ಮಾಕಿ ಹೇಳುವುದು ಬರೇ ಸುಳ್ಳು
ಸಣ್ಣಾಳು ಕೆಂಚಸ್ತ್ರೀ ಕೈಬಿಡು ಅನ್ನಬಾರದೆ।

ಹೂವಿನ ಉಚ್ಛ್ರಾಯ ಕಟ್ಟ್ಯಾರೆ ಅಣ್ಣಗಳು
ಭತ್ತ ಮೇಲಾಕೆ ಒಗುದಾರೆ ಅಣ್ಣಗಳು
ಭತ್ತ ಅಳ್ಳಾಗಿ ಸುರುದಾವೆ ದೇವಾರುದೇವ

ನರಲೋಕದೊಳಗೆ ನೀನು ಸಲವವ್ವ ದೇವಾರುದೇವ
ದೇವಲೋಕಕೆ ನೀನು ಸಲವವ್ವ ಸತಿವಂತೆ
ಅಣ್ಣಗಳೆ ಕೈಯ ಮುಗುದಾರೆ ದೇವಾರುದೇವ

ಒಂದು ಸಾವಿರಲ್ಲ ಎಲ್ಡು ಸಾವಿರಲ್ಲ
ಏಳೇ ಸಾವಿರುದ ಬಳುಗಾವೆ ದೇವಾರುದೇವ

ಮನಿಗೇನೆ ಒಂದೊಂದು ಸೀರೆಯ ಉಡಿಸ್ಯಾರೆ
ಅವು ಒಂದು ಗಾಡಿ ತುಂಬುತಾವೆ ದೇವಾರುದೇವ

ಮನಿಗೇನೆ ಒಂದೊಂದು ಕುಬುಸಾವ ಕೊಟ್ಟ್ಯಾರು
ಅವು ಒಂದೇ ಗಾಡಿ ತುಂಬುತಾವೆ ದೇವಾರುದೇವ

ಮನಿಗೇನೆ ಒಂದು ಸೇರು ಮಡಲಕ್ಕಿ ಹಾಕ್ಯಾರ
ಅವು ಎಳ್ಡೆ ಗಾಡಿ ತುಂಬುತಾವೆ ದೇವಾರುದೇವ

ಮನಿಗೇನೆ ಒಂದೊಂದು ಅಂಗುನೂಲ ಕೊಟ್ಟ್ಯಾರೆ
ಅವು ಒಂದು ಗಾಡಿ ತುಂಬುತಾವೆ ದೇವಾರುದೇವ

## ಬಾರಕ್ಕ ಜಾಣೆ ತೇರಾ ನೋಡಾನ ಬನ್ನಿರೆ

ಅಕ್ಕಿಮಾರರ ಕೇರಿ ಮುತ್ತ್ಯಾ ಮಾರರ ಕೇರಿ
ದಿಟ್ಟ ಪಂಚುಮರ ಒಳಕೇರಿ ಬಾರಕ್ಕ ಜಾಣೆ
ತೇರಾ ನೋಡಾನ ಬನ್ನಿರೇ

ದಿಟ್ಟನ ಪಂಚುಮರ ಒಳಕೇರಿ ಒಳುಗೆಲ್ಲ
ಅಮ್ಮನ ಜೆಲ್ಲಿನಂದುರವೆ ನೆಡದಾವೆ ಬಾರಕ್ಕ ಜಾಣೆ

ಹಾಲು ಮಾರರ ಕೇರಿ ನೂಲು ಮಾರರ ಕೇರಿ
ಜಂಗುಮುರ ಕೇರಿ ಒಳುಗೆಲ್ಲ ಬಾರಕ್ಕ ಜಾಣೆ



ಜಂಗುಮುರ ಕೇರಿ ಒಳುಗೆಲ್ಲ ಅಕ್ಕ ಕೆಂಚಮ್ಮ
ಮುತ್ತಿನಂದರವೆ ಮಿನಿಗ್ಯಾವೆ ಬಾರಕ್ಕ ಜಾಣೆ

ಸೀರೆ ಉಡುವ ಹೆಣ್ಣು ಮಕ್ಕಳು ಸೀರೆಯ ಉಟ್ಟಾರೆ
ಒಂದೊಂದು ನರುಗೆ ಮರುತಾರೆ ಬಾರಕ್ಕ ಜಾಣೆ
ಒಂದೊಂದ ನರುಗೆ ಮರುತಾರೆ ಮೂಡಲ
ದೇವಿಯ ನೋಡುವ ಸಡಗರವೆ ಬಾರಕ್ಕ ಜಾಣೆ

ಕುಬುಸ ತೊಡುವ ಹೆಣ್ಣು ಮಕ್ಕಳು ಕುಬುಸತೊಟ್ಟಾರೆ
ಒಂದು ತೋಳನ್ನು ಮರುತಾರೆ ಬಾರಕ್ಕ ಜಾಣೆ

ವಾಲೆ ಇಡುವ ಹೆಣ್ಣು ಮಕ್ಕಳು ವಾಲೆಯ ಇಟ್ಟಾರೆ
ವಾಲೆ ಮೂಗೀಗೆ ಇಡುತಾರೆ ಬಾರಕ್ಕ ಜಾಣೆ
ದೇವಿ ನೋಡುವ ಸಡಗರವೆ ಬಾರಕ್ಕ ಜಾಣೆ

ವಾಲೆ ಇಡುವ ಕಿವಿಗೆ ಮೂಗುತಿ ಇಟ್ಟಾರೆ
ದೇವಿನೋಡುವ ಸಡಗರವೆ ಬಾರಕ್ಕ ಜಾಣೆ
ಸಂಭ್ರಮದ ಉಚ್ಛ್ರಾಯ ಸಾಲಾಗಿ ಸಾಗೀತು
ಮಾಸೂರ ಅರಮನೆಗೆ ನೆಲ ನಿಂತು ಬಾರಕ್ಕ ಜಾಣೆ
ತೇರಾ ನೋಡಾನ ಬನ್ನಿರೆ

## ಕೆಮ್ಮಣ್ಣ ನೀನೆ ಬಳಿಬೇಕು

ಉಗುಳಾರ ಹೊತ್ತಿಗೆ ಬಂದಂತೆ ಕೆಂಚಮ್ಮನ
ಸತಿವಂತೆ ಎಂದು ಮಾವ ಕರುದಾನೆ ತಂದಾನೊ ತಾನು

ಏನೇನ್ರಿ ಮಾವ್ರುಗಳೆ ಏನು ಮಾಡಲಿಬೇಕು
ಬದುಕೆಲ್ಲಿರಿ ಮಾವ ಬದುಕೇಳಿ ತಂದಾನೊ ತಾನು
ಬದುಕೆಲ್ಲಿರಿ ಮಾವ ಬದುಕೇಳ್ರಿ ಅಂಬೊತ್ತಿಗೆ
ಕೆಮ್ಮಣ್ಣ ನೀನೆ ಬಳಿಬೇಕು ತಂದಾನೊ ತಾನು

ಏನೇನೆ ಕೆಂಚಮ್ಮ ಏನು ಬದುಕು ಮಾಡುತೀಯೋ
ಸುಣ್ಣಾವ ನೀನೆ ಬಳಿಬೇಕು ತಂದಾನೊ ತಾನು

ಸುಣ್ಣಾವ ಬಳಿದಾಳೆ ಕೆಮ್ಮಣ್ಣು ಬಳಿದಾಳೆ
ಬೋರಿ ಬೋರಾಡಿ ಅಳುತಾಳೆ ತಂದಾನೊ ತಾನು

ಬೋರಿ ಬೋರಡಿ ಅಳುತಾಳೆ ಕೆಂಚಮ್ಮ
ಬಾಗಿ ನೋಡ್ಯಾರೆ ಅವಳ ಮಾವ ತಂದಾನೊ ತಾನು
ಬಾಗಿ ನೋಡ್ಯಾರೆ ಅವಳ ಮಾವ ಮಲ್ಲೇಶ
ಯಾಕೆ ಕೆಂಚವ್ವ ಅಳತೀಯ ತಂದಾನೊ ತಾನು

ಸುಣ್ಣದಾಗಳ ಕಲ್ಲು ಕಣ್ಣಿಗೆ ಬಿದ್ದಾವು ಮಾವ
ಅದರಿಂದ ಕಣ್ಣಾಗೆ ನೀರು ಬಂತು ತಂದಾನೊ ತಾನು

ಕೆಮ್ಮಣ್ಣು ಬಳಿದಾಳೆ ಸುಣ್ಣಾವ ಬಳಿದಾಳೆ
ಕೋಣೇಯ ಆಕೆ ಬಳುದಾಳೆ ತಂದಾನೊ ತಾನು

## ಹೂವಿನುಚ್ಚಾಯ ನಡಿಸ್ಯಾಳೆ

ಕೋಣೇಯ ಬಳಿಯೂತ ಕರೆದಾಳ ಕಣ್ಣೀರ
ಕರೆದಂತ ಕಣ್ಣೀರ ಕಂಡಾಳೆ ಅವರತ್ತೆ ತಂದಾನೊ ತಾನು
ಕಣ್ಣೀರ ಕಂಡಾಳ ಅವಳತ್ತೆ ಮಲ್ಲಿಗುದೇವಿ
ಯಾಕೆ ಕೆಂಚಮ್ಮ ಕಣ್ಣೀರು ತಂದಾನೊ ತಾನು
ಕೋಣೆ ಸಾರಿಸುವಾಗ ಸಿಡಿಯಿತು ಕಸವೆ
ಅದರಿಂದ ಕಣ್ಣಲ್ಲಿ ನೀರುಕ್ಕಿತು ಅತ್ತೆ ತಂದಾನೊ ತಾನು

ಹೊಸಬಟ್ಟೆ ಉಟ್ಟಾಳೆ ಹೊಸಬಣ್ಣ ತೊಟ್ಟಾಳೆ
ಗಂಗವ್ವಗೆ ಎಡೆಗಾಳ ಮಾಡುತಾಳೆ ತಂದಾನೊ ತಾನು

ಕೈಯ್ಯಾಗುಳ ಮಗನ ತೊಟ್ಟಲಿಗೆ ಹಾಕ್ಯಾಳೆ
ಗಂಗವ್ನ ಎಡೆಗಾಳ ಮಾಡುತಾಳೆ ಲೀಲಾಲೋಲ

ಒಂದು ಬಂಡಿ ಕಾಯಿ ಒಂದು ಬಂಡಿ ಹಣ್ಣು
ಮತ್ತೊಂದೇ ಬಂಡಿ ನೆನಿಯಕ್ಕಿ ಲಿಂಗದೇವ
ಒಂದು ಬಂಡಿ ಚಿಗುಳಿ ಒಂದು ಬಂಡಿ ತಂಬ್ಟು
ಮತ್ತೊಂದೇ ಬಂಡಿ ಅಂಗನೂಲೆ ಲಿಂಗದೇವ

ಒಂದು ಬಂಡಿ ಸೀರೆ ಒಂದು ಬಂಡಿ ಕುಬುಸ
ಮತ್ತೊಂದೇ ಬಂಡಿ ಎಡೆಗಾಳ ಲಿಂಗದೇವ



ಮತ್ತೊಂದೇ ಬಂಡಿ ಎಡೆಗಾಳ ಕೆಂಚಮ್ಮ
ಬಂಡೀಗೆ ಹಾಕಿ ತುಂಬುತಾಳೆ ಲಿಂಗದೇವ

ಬಂಡೀಗೆ ಹಾಕಿ ತುಂಬುತಾಳೆ ಕೆಂಚಮ್ಮ
ಬಂಡೀಗೆ ಪೂಜೆ ಮಾಡುತಾಳೆ ಲಿಂಗದೇವ
ಬಂಡೀಗೆ ಪೂಜೆ ಮಾಡ್ಯಾಳು ಕೆಂಚಮ್ಮ
ಕಾಯೊಡೆದು ಕರುಪುರವ ಬೆಳಿಗ್ಯಾಳೆ ಲಿಂಗದೇವ
ಕಾಯೊಡೆದು ಕರುಪುರವ ಬೆಳಿಗ್ಯಾಳೆ ಕೆಂಚಮ್ಮ
ಜೋಡುಸಿ ಕೈಯ ಮುಗುದಾಳೆ ಲಿಂಗದೇವ

ಮುಂದೆ ಮುಂದೆ ಬಂಡಿಗಳು ಹಿಂದೆ ಹಿಂದೆ ಕೆಂಚಮ್ಮ
ಹೂವಿನುಚ್ಚಾಯ ನೆಡಿಸ್ಯಾಳೆ ಲಿಂಗದೇವ

ಮೂರು ಹಿಡಿ ಜೋಳ ಒಗುದಾನೆ ಮಲ್ಲೇಶ
ಜೋಳ ಅಳ್ಳಾಗಿ ಸುರೂದಾವೆ ಲಿಂಗದೇವ

ಮೂರಿಡಿಯ ಭತ್ತ ಒಗುದಾನೆ ಮಲ್ಲೇಶ
ಮಂಡಕ್ಕಿಯಾಗಿ ಸುರೂದಾವೆ ಲಿಂಗದೇವ

ಕೆರಿಗೆ ಹೋಗೊ ಕೆಂಚಮ್ನ ಸತ್ಯಾವ ನೋಡುದಕ
ಊರ ಮುತ್ತೈದೆಯರು ನೆರುದಾರೆ ಲಿಂಗದೇವ
ಜನ ಜಾತುರಾಗಿ ಸೇರುತ್ತೈತಿ
ಕೆಂಚಮ್ನ ಸತ್ಯ ನೋಡುದಕೆ ಲಿಂಗದೇವ

ಅಲ್ಲಿಂದ ಕೆಂಚಮ್ಮ ಎಲ್ಲಿಗೆ ನೆಡುದಾಳೆ
ಕೆರೆ ಏರಿ ಮ್ಯಾಲೆ ನೆಡುದಾಳೆ ಲಿಂಗದೇವ
ಕೆರೆ ಏರಿ ಮ್ಯಾಲೆ ನೆಡುದಾಳೆ ಕೆಂಚಮ್ಮ
ಹೂವಿನುಚ್ಚಾಯ ಇಳುದಾಳೆ ಲಿಂಗದೇವ

## ಕೆರಿಗೆ ದೀಕ್ಸಾವ ಮಾಡುತಾ

ಶಿವಶಿವನೆ ಕೆರಿಗೆ ದೀಕ್ಸಾವ ಮಾಡುತಾಳೆ
ಹೊನ್ನುಹಳ್ಳಾಗಿರುವ ಚನ್ನಪ್ಪ ಸ್ವಾಮೀಗೆ
ಶಿವಶಿವನೆ ಚನ್ನಪ್ಪಗೋಲೆ ಬರುದಾಳೆ

ಚನ್ನಪ್ಪಗೆ ಓಲೆ ಬರುದಾಳೆ ನನ್ನಮ್ಮ
ಶಿವಶಿವನೆ ಕೈಲಾಸಕು ಲಿಂಗ ಕಳುವ್ಯಾಳೆ

ನೆನೆಯಕ್ಕಿ ನೆನಗಡಲೆ ಒಳ್ಳೆಣ್ಣೆ ಒಳುದೀಪ
ಶಿವಶಿವನೆ ಜೇನುತುಪ್ಪಗಳ ತರಿಸ್ಯಾಳೆ

ನೆಲಗಾಳ ಬಳುದಾಳೆ ಎಡಿಗ್ಯಾಳ ಹಾಕ್ಯಾಳೆ
ಶಿವಶಿವನೆ ಅಕ್ಕಸ್ತೆ ಅಂಗುನೂಲ ಧರಿಸ್ಯಾಳೆ
ಅಕ್ಕಸ್ತೆ ಅಂಗುನೂಲ ಧರಿಸ್ಯಾಳೆ ಕೆಂಚಮ್ಮ
ನೆನೆಯಕ್ಕಿ ನೆಲುಗಡ್ಲೆ ಇಡುತಾಳೆ
ಶಿವಶಿವನೆ ಮಲ್ಲಿಗಿ ಪುಷ್ಪ ಇಡುತಾಳೆ

ಶಿವಶಿವನೆ ಮುಕ್ಕಣ್ಣಗು ಕೈಯ ಮುಗುದಾಳೆ
ಶಿವಶಿವನೆ ಹೊಂಬಾಳೆ ಬಾಗಿ ಮುಡಿಸ್ಯಾಳೆ
ಶಿವಶಿವನೆ ತುಂಬೆ ಬಿಲ್ವವ ಮುಡಿಸ್ಯಾಳೆ
ಶಿವಶಿವನೆ ಮಾಲಿಂಗಗು ಕೈಯ ಮುಗುದಾಳೆ
ಶಿವಶಿವನೆ ಸಂಪಿಗೆ ಕೇದಿಗೆ ಮುಡಿಸ್ಯಾಳೆ
ಶಿವಶಿವನೆ ಇಂಪಾಗಿ ಶಿವಗೀತೆ ಹಾಡುತಾಳೆ
ಶಿವಶಿವನೆ ಚಿಗುಳಿ ತಂಬಿಟುವ ಇಡುತಾಳೆ
ಶಿವಶಿವನೆ ಕಾಯಿ ಒಡೆದು ಕರುಪುರವ ಬೆಳಿಗ್ಯಾಳೆ
ಕಾಯಿ ಒಡೆದು ಕರುಪುರವ ಬೆಳಿಗ್ಯಾಳೆ ಕೆಂಚಮ್ಮ ಶಿವಶಿವನೆ
ಜೋಡಿಸಿ ಕೈಯ ಮುಗುದಾಳೆ ಹರಹರನೆ

ಜೋಡಿಸಿ ಕೈಯ ಮುಗುದಾಳೆ ಕೆಂಚಮ್ಮ ಶಿವಶಿವನೆ
ಚನ್ನಪ್ಪಸ್ವಾಮಿ ಬರುತಾರೆ ಹರಹರನೆ
ಕೆರಿಗೆ ದಿಕ್ಷಾವ ಮಾಡುತಾರೆ ಶಿವಶಿವನೆ

ಮುಂಜೆರಗನಾಸಿ ಶರಣೆಂದೂ ಹರಹರನೆ
ಮುಂಜೆರಗನಾಸಿ ಶರಣೆಂದ ಕೆಂಚಮ್ನ ಹರಹರನೆ
ಮನದಾಗ ಕೆಂಚವ್ವ ನಗುನಗುತ ನೆರೆದರಿಗೆ ಶಿವಶಿದನೆ
ಉಣಬಡಿಸಿ ಕೈಯಾ ಮುಗುದಾಳೆ ಹರಹರನೆ
ಉಣಬಡಿಸಿ ಕೈಯಾ ಮುಗಿಯುತ ನನ್ನಮ್ಮ ಶಿವಶಿವನೆ
ಬಂಡಿಗೆ ಸಾಮಾನು ತುಂಬೂತಾಳೆ ಹರಹರನೆ



ಬಂಡಿಗೆ ಸಾಮಾನು ತುಂಬೂತ ಶಿವಶಿವನೆ
ಮುತ್ತೈದೆಯರಿಗೆ ಕುಂಕುಮ ಕೊಡುತಾಳೆ ಹರಹರನೆ
ಕುಂಕುಮ ಕೊಡುತ ಕೈಯಾ ಮುಗುದಾಳೆ ಶಿವಶಿವನೆ

ಮುಂದೆ ಮುಂದೆ ಬಂಡಿಗಳು ಹಿಂದೆ ಹಿಂದೆ ಕೆಂಚವ್ವ
ಹೂವಿನುಚ್ಚಾಯ ನೆಡಿಸ್ಯಾಳೆ ದೇವಾರುದೇವ

ಹೂವಿನ ಉಚ್ಚಾಯ ಬಂಡಿಗಳು ನಡೆದಾವೆ
ಕೆರಿ ಏರಿ ಮ್ಯಾಲೆ ಬರುತಾವೆ ದೇವಾರುದೇವ

ಮಲ್ಲೇಶ ಮಲ್ಲಿಗುದೇವಿ ನಿಂತು ಮಾತಾಡ್ಯಾರು
ತಟ್ಟನೆ ಮಲಕವ್ನ ಕರೆದಾರು ದೇವಾರುದೇವ

ಇಲ್ಲಿ ಬಾರೆ ನಮುಮಗಳೆ ಮಾಸೂರ ಮಲಕವ್ವ
ನಿನ್ನ ಅಳಿಯನ ಚಿನ್ನದ ಒಳಲೆ ಕೆರೆಯಾಗ ದೇವಾರುದೇವ
ಅಳಿಯನ ಚಿನ್ನದ ಒಳಲೆ ಕೆರಿಯಾಗೆ ಮರೆತಿವವ್ವ
ತಪ್ಪನೆ ತರುಬಾರೆ ನಮ ಮಗಳೆ ದೇವಾರುದೇವ

ಒಳಲೇನ ತರುವಾಕೆ ಹೋದಾಳು ಮಲಕವ್ವ
ಏನೆಂದು ಗಂಗವ್ವ ಹೇಳುತಾಳೆ ದೇವಾರುದೇವ
ನಿನ್ನನಾ ಅಂತಾರು ಅರುವತ್ತು ಮಂದಿ ಬಂದಾರೆ
ಕೊಡುವುದಿಲ್ಲವ್ವ ಅನುತಾಳೆ ದೇವಾರುದೇವ

ನಿನ್ನ ಅಳಿಯನ ಒಳಲೆ ನಿನಗೆ ಕೊಡುವುದಿಲ್ಲ
ಕಳಿಸೋಗವ್ವ ಕೆಂಚವ್ನ ಅನುತಾಳೆ ದೇವಾರುದೇವ

ಕೆಂಚವ್ನ ಕರೆದಾರು ಈ ಮಾತ ತಿಳಿಸ್ಯಾರು
ಹೋಗಿ ಬಾ ತಾಯೆಂದು ಕಳುವ್ಯಾರು ದೇವಾರುದೇವ
ಹೋಗಿ ಬಾ ತಾಯೆಂದು ಕಳುವ್ಯಾರು ಅತ್ತೀಮಾವ
ಒತ್ತಿ ಬಂದ ದುಃಖ ತಡೆದಾರು ದೇವಾರುದೇವ

ಉಚ್ಚಾಯನೆ ಇಳಿದು ನನ್ನಮ್ಮ ಹೊರಟಾಳೆ
ಕೆರಿಯಾಗೆ ಗಂಗವ್ವ ನಗುತಾಳೆ ದೇವಾರುದೇವ

## ಗಂಗವ್ವ ಕೈಹಿಡಿದು ಕರಕೊಂಡೊ

ಒಳಲೆ ಎತ್ತಿಗಂಡು ಗಂಗವ್ವಗೆ ಶರಣೆಂದು
ಒಂದೊಂದು ಹೆಜ್ಜೆಯ ಇಡುತಾಳೆ        ಮಾತಾಡೇ ಗಂಗ ಮಾತಾಡೇ

ಒಂದೊಂದು ಹೆಜ್ಜೆಯ ಇಟ್ಟಾಳು ಕೆಂಚವ್ವ
ಅಳ್ದಿಂಬೊ ಭಾವಕೆ ಬರುತಾಳೆ        ಮಾತಾಡೇ ಗಂಗ ಮಾತಾಡೇ

ಅಳ್ದಿಂಬೊ ಭಾವವಾ ಬಿಟ್ಟಾಳು ಸಿರಿಗಂಗ
ಮಣಿಕಾಲ ಭಾವಕ್ಕೆ ಬರುತಾಳೆ        ಮಾತಾಡೇ ಗಂಗ ಮಾತಾಡೇ

ಮಣಿಕಾಲ ಭಾವಾವ ಬಿಟ್ಟಾಳು ಸಿರಿ ಗಂಗ
ತೊಡೆಯೆಂಬೊ ಭಾವಕೆ ಬರುತಾಳೆ।        ಮಾತಾಡೇ ಗಂಗ ಮಾತಾಡೆ

ತೊಡೆಯೆಂಬೊ ಭಾವಾವ ಬಿಟ್ಟಾಳು ಸಿರಿಗಂಗ
ಸೊಂಟೆಂಬೊ ಭಾವಕೆ ಬರುತಾಳೆ        ಮಾತಾಡೇ ಗಂಗ ಮಾತಾಡೆ

ಸೊಂಟೆಂಬೊ ಭಾವಾವ ಬಿಟ್ಟಾಳು ಸಿರಿಗಂಗ
ಎದೆಯೆಂಬೊ ಭಾವಕೆ ಬರುತಾಳೆ        ಮಾತಾಡೇ ಗಂಗ ಮಾತಾಡೆ

ಸಂಭ್ರಮದ ಕೆರಿಗೆ ಅಂಜದಿರವ್ವ ಮಗಳೆ ಶಿವಶಿವನೆ
ಅಂಜದಲೆ ಬಾರೆ ನನ್ನ ಮಗಳೆ        ಹರಹರನೆ
ಅಂಜದಲೆ ಬಾರೆ ನನ ಮಗಳೆ ಅಂದೇಳಿ ಶಿವಶಿವನೆ
ಗಂಗವ್ವ ಕೈ ಹಿಡಿದು ಕರಕೊಂಡೊ        ಹರಹರನೆ

ಬಂಗಾರದ ಗುಡಿಗೆ ಹೋದಾಳು ಕೆಂಚಮ್ಮ ಶಿವಶಿವನೆ
ಮಗನ ಕಳುವಿರೆನುತಾಳೆ        ಹರಹರನೆ

ಹಾವಿನ ಹಾಸಿಗೆ ಮಾಡಿ ಚೇಳಿನ ತಲೆದಿಂಬ ಮಾಡಿ ಶಿವಶಿವನೆ
ಬಾಳೆಲೆ ಮೇಲೆ ತೇಲಿ ಬಿಟ್ರು        ಹರಹರನೆ

ಬಾಳೆಲೆ ಮೇಲೆ ತೇಲಿಬಿಟ್ಟರಾಕೆಯ ಮಗನ ಶಿವಶಿವನೆ
ಆಕೆ ಮಗಾನ ಕರಕೊಂಡ್ಹೊ        ಹರಹರನೆ



ಇಲ್ಲೀಗೆ ಹರಹರ ಇಲ್ಲೀಗೆ ಶಿವಶಿವ
ಇಲ್ಲೀಗೆ ಈ ಸಂದೆ ಪದ ಮುಂದೆ
ಇಲ್ಲಿಗೆ ಈ ಸಂದೆ ಪದ ಮುಂದೆ
ಈ ಮನೆಯ ನಲ್ಲೇರಿಭೂತಿ ಧರಿಸೇವು

## ಕೆಂಚಸ್ತ್ರೀ ಮಂಚ ಕೆರಿಯಾಗೆ

ಎದ್ದು ಏಳಿರಿ ನನ್ನ ಹತ್ತು ಮಂದಿ ಗೆಣಿಯಾರೆ
ಕೆಂಚಸ್ತ್ರೀ ಮಂಚ ಕೆರಿಯಾಗೆ        ಕೇಳು ಲಿಂಗವೆ
ಕೆಂಚಸ್ತ್ರೀ ಮಂಚ ಕೆರಿಯಾಗೆ ತೇಲಿತು
ರಾತ್ರಿ ಬಂದಿದ್ದು ಸ್ವಪನಾಕೆ        ಕೇಳು ಲಿಂಗವೆ

ಹಿಂದಕು ಖಂಡುಗ ಮುಂದಕು ಖಂಡುಗ
ಲಕ್ಷ ಬೀಡಿಕೆ ಸಾಗಿ ಬರೂತಾವೆ        ಕೇಳು ಲಿಂಗವೆ
ಬೀಡಿಕೆ ಸಾಗಿ ಬರುತಾವೆ ಗೂಳೇಶ
ತಂದೆ ಅರಮನೆಗೆ ನಡೆದಾನೆ        ಕೇಳು ಲಿಂಗವೆ

ಅಣ್ಣನ ಬೀಡಿಕೆ ಬಂದು ಅಂಗುಳದಾಗೆ ನಿಂತೈತೆ
ಏನೇಳುತೀಯೋ ನನ್ನ ತಂದೆ        ಕೇಳು ಲಿಂಗವೆ
ಏನೇಳುತೀಯೋ ನನ ತಂದೆ ಮಲ್ಲೇಶ
ಮಗಳು ಮಲಕವ್ವ ಕೇಳೂತಾಳೆ        ಕೇಳು ಲಿಂಗವೆ

ಏನೆಂದು ಹೇಳಲವ್ವ ಬಂದುದ್ದು ಬರಲವ್ವ
ಅಣ್ಣಾಗಾರುತಿಯ ಮಾಡಿರೆಂದ        ಕೇಳು ಲಿಂಗವೆ

ಶರಣ್ಣವ್ವ, ದಾನೆವ್ವ ಗೆಣತಿ ಶ್ಯಾವಂತ್ರವ್ವ
ನಮ್ಮಣ್ಣಗೆ ಆರುತಿಯ ಒಯ್ಯಬೇಕು        ಕೇಳು ಲಿಂಗವೆ
ಆರು ಜಾವದ ಬತ್ತಿ ರಂಬೆ ಆರುತಿ ಮುಂದೆ
ವಾಲೆಯ ಮುಂದೆ ಗಜಮುಲುಕೆ        ಕೇಳು ಲಿಂಗವೆ

ರಂಬೆ ರಂಬೆರು ಮುಂದೆ ರಂಬೇರಾರುತಿ ಮುಂದೆ
ರಟ್ಟೆಳ್ಳಿ ಗೊಂಬೆ ಇಲವಲವೆ        ಕೇಳು ಲಿಂಗವೆ

ನಿನ್ನೆ ನಿನ್ನೆರು ಮುಂದೆ ನಿನ್ನೆರಾರುತಿ ಮುಂದೆ
ಮಂದಿಯ ಮುಂದೆ ಗಜಮಲುಕಿ ಕೇಳು ಲಿಂಗವೆ

ಮಂದಿಯಾನೆ ಮುಂದೆ ಗಜಮಲುಕೆ ರಟ್ಟೆಳ್ಳಿ
ಚಿತ್ತರದ ರಂಬೆ ಇಲವಲವೆ ಕೇಳು ಲಿಂಗವೆ

ಆರುತಿಗಾರುತಿ ಮುಂದೆ ಚಂದದಾರುತಿ ಮುಂದೆ
ಒಪ್ಪ ಉಳ್ಳೋಳು ಅವಳಿಲ್ಲ ಶಿವಶಿವನೆ
ನ್ಯಾಯವುಳ್ಳೋಳೆ ಅವಳಿಲ್ಲ ಕೆಂಚಸ್ರೀ
ಎಲ್ಲಿಗೋದಾಳು ನೆಲೆಯಿಲ್ಲ ಶಿವಶಿವನೆ

ನನ್ನ ಬೀಡಿಕೆ ಬಂದು ಅಟ್ಟೀಯ ಹೋಗುವಾಗ
ಹಟ್ಟೀಯ ಕಸವ ಹೊಡೆದಿಲ್ಲ ಕೇಳು ಲಿಂಗವೆ
ಹಟ್ಟೀಯ ಕಸವ ಹೊಡೆದಿಲ್ಲ ನಮ್ಮನೆಯ
ನಿನ್ನೀಗೇನು ಬಂತೆ ದವಲತ್ತು ಕೇಳು ಲಿಂಗವೆ

ಗಂಡನ ಬೀಡಿಕೆ ಬಂದುಅಂಗುಳ ಹೋಗುವಾಗ
ಅಂಗುಳದ ಕಸವೆ ಒಡೆದಿಲ್ಲ ಕೇಳು ಲಿಂಗವೇ

## ನಿನ್ನೆಲ್ಲಿಗೆ ಹೋದಾಳು ನೆಲೆಯಿಲ್ಲ

ಅಂಗುಳದ ಕಸವೆ ಒಡೆದಿಲ್ಲ ನನಮನೆಯ
ರಂಬೀಗೂ ಬಂದೀತೆ ದವಲತ್ತು ಕೇಳು ಲಿಂಗವೆ
ರಂಬೀಗೇ ಬಂದೀತೆ ದವಲತ್ತು ಈ ಮನೆಯ
ನಿನ್ನೆಲ್ಲಿಗೆ ಹೋದಾಳು ನೆಲೆಯಿಲ್ಲ ಕೇಳು ಲಿಂಗವೆ

ಶೆಟ್ಟೆ ಬೀಡೇ ಬಂದು ಎಷ್ಟೊಂದು ಹೊತ್ತಾಯ್ತು
ಎತ್ತೀನ ಕೋಡಿಗೆ ಬಿಸುಲಾತು ದೇವಾರುದೇವ
ಎತ್ತೀನ ಕೋಡಿಗೆ ಬಿಸುಲಾತು ನನಮನೆಯ
ನಿನ್ನೆಗೆ ಬಂದೀತೆ ದವಲತ್ತು ದೇವಾನುದೇವ

ಗಂಡನ ಬೀಡಿಕೆ ಬಂದು ಹನ್ನೊಂದು ತಾಸಾತು
ಮಂದಿಕೋಡೀಗೆ ಬಿಸಿಲಾತು ದೇವಾರುದೇವ



ಬೀಡಿಕೆ ಹೋದಾಗ ಕೆಂಚಸ್ರೀ ಬಿಮ್ಮನಿಸಿ
ಏನು ಹಡೆದಾಕೋ ನೆಲಿಯಿಲ್ಲ ದೇವಾರುದೇವ

ಬಣ್ಣಾದ ತೊಟ್ಟಿಲಿಗೆ ಹನ್ನೆರುಡೆ ಗೊಂಡೇವು
ಕಂದನ ಮುಂದಿಟ್ಟು ಮನಿಗಾಳು ದೇವಾರುದೇವ

ಬಾಲನ ತೊಟ್ಟಿಲಿಗೆ ನಲವತ್ತು ಗೊಂಡೇವು
ಬಾಲನ ಮುಂದಿಟ್ಟು ಮನಿಗ್ಯಾಳು ದೇವಾರುದೇವ
ಬಾಲನ ಮುಂದಿಟ್ಟು ಮನಿಗ್ಯಾಳತ್ತಿಗಮ್ಮ
ಗಂಡುಮುಗನಾಕೆ.ಹಡೆದಾಳೊ ದೇವಾರುದೇವ

ಗಂಡು ಮಗನ ಆಕೆ ಹಡೆದಾಳೊ ಅಣ್ಣಯ್ಯ
ಎಂದೇಳುತ್ತಾಳೆ ಮಲಕವ್ವ ದೇವಾರುದೇವ
ಅಕ್ಕಿ ಏಸು ಹೇರು ತುಪ್ಪಾ ಏಸು ಕೊಡ
ಉತ್ತುತ್ತಿ ಏಸು ಮಣ ಸವೆದಾವೆ ದೇವಾರುದೇವ

## ಕೆರಿಯಾಗು ಕೆಂಚವ್ವ ನಗುತಾಳೆ

ಉತ್ತುತ್ತಿ ಏಸು ಮಣ ಸವೆದಾವೆ ನನ ತಂಗಿ
ಬಾಣಂತಿ ಬಾಗಿಲ ಏಕೆ ತಗೆವಲ್ಲೊ ದೇವಾರುದೇವ
ಬಾಗಿಲ ಏಕೆ ತಗೆವಲ್ಲೆ ಮುದ್ದಿನ ಮಡದಿ
ಕೋಪ ಬಿಟ್ಟು ಕದವ ತೆಗೆಯೆಂದ ದೇವಾರುದೇವ

ಎಷ್ಟುನೆ ಕರೆದಾರೆ ಸುಮ್ಮಾನೆ ಇದೀಯ
ಬಿಮ್ಮೇನೆ ನಿನಗೆ ಬಿಗುವೇನೆ ದೇವಾರುದೇನೆ
ಬಿಮ್ಮೇನೆ ನಿನಗೆ ಬಿಗುವೇನೆ ಕೆಂಚಸ್ರೀ
ಬೆನ್ನಾಗಳೆಲುವ ಮುರುದೇನು ದೇವಾರುದೇವ

ಬೆನ್ನಾ ಗಳ ಎಲುವ ಮುರುದೇನೆಂಬುದ ಕೇಳಿ
ಮಲಕವ್ವ ದುಃಖವ ಮಾಡುತಾಳೆ ದೇವಾರುದೇವ

ಒತ್ತುರಿಸಿ ಬರುವ ದುಃಖವನೇ ತಡೆದು
ಅತ್ತಿಗೆಯ ನೀನಿನ್ನು ಕಾಣಲಾರೆ ದೇವಾತುದೇವ

ಆದುದಾದರು ಏನು  ಬೇಗೇಳೆ ನನತಂಗಿ
ಹೌಹಾರಿ ಗೂಳೇಶ ಕೇಳುತಾನೆ      ದೇವಾರುದೇವ

ಬೇಡ ಬೇಡೆಂದರೆ ನೀರಿಗೆ ಹೋದಳಪ್ಪ
ಬಂದಿ ಕಳಕೊಂಡು ಕೆರಿ ಬಿದ್ಲು      ದೇವಾರುದೇವ

ಅಲ್ಲಿಂದ ಗೂಳೇಶ ಎಲ್ಲೀಗೆ ನಡೆದಾನೆ
ಕೆರೆಏರಿ ಮ್ಯಾಲೆ ನಡೆದಾನೆ      ದೇವಾರುದೇವ
ಕೆರೆಯ ಏರಿ ಮ್ಯಾಲೆ ನಡೆದಾನೆ ಗೂಳೇಶ
ಬೋರಿ ಬೋರಾಡಿ ಅಳುತಾನೆ      ದೇವಾರುದೇವ
ಬೋರಿ ಬೋರಾಡಿ ಅಳುತಾನೆ ಗೂಳೇಶ
ಕೆರಿಯಾಗು ಕೆಂಚವ್ವ ನಗುತಾಳೆ      ದೇವಾರುದೇವ

## ಹೋಗಿ ಲಗ್ಗುನವ ಆಗಿರಯ್ಯ

ಅತ್ತೆ ಬೈದಾರೇನು ಮಾವ ಬೈದಾರೇನು
ಚಿಕ್ಕ ಮೈದುನರೆ ಬೈಯುದಾರೆ      ದೇವಾರುದೇವ
ಚಿಕ್ಕ ಮೈದುನರೆ ಬೈಯುದಾರೆ ಕೆಂಚಸ್ತ್ರೀ
ಏನು ಬಂತು ನಿನಗೆ ದುರುಮರಣ      ದೇವಾರುದೇವ

ಏನು ಬಂತು ನಿನಗೆ ದುರುಮರಣ ಅಂಬುದ ಕೇಳಿ
ಕೆರಿಯಾಗು ಕೆಂಚವ್ವ ನುಡಿದಾಳ      ದೇವಾರುದೇವ

ಬ್ಯಾಡ ಬ್ಯಾಡೆಂದರೆ ನಾನೇ ನೀರಿಗೆ ಬಂದೆ
ಬಂದಿ ಕಳಕಂಡು ಕೆರಿ ಬಿದ್ದೆ      ಕೇಳು ಲಿಂಗವೆ
ಬಂದಿಯ ಕಳಕಂಡು ಕೆರಿಬಿದ್ದೆ ಗೂಳೇಶ
ನನ ಮರೆತು ಊರ ನಡೆಸಯ್ಯ      ಕೇಳು ಲಿಂಗವೆ

ನೀನಾದರು ಕೆರಿಗ್ಹೋದೆ ನಾನಾದರೂ ಪರದೇಶಿ
ನಾನೇ ಪರದೇಶಿ ಅನುತಾನೆ      ಕೇಳು ಲಿಂಗವೆ

ತಾಯಿ ಇಲ್ಲವೆ ನಿಮಗೆ ತಂದೆ ಇಲ್ಲವೆ ನಿಮಗೆ
ಹೋಗಿ ಲಗ್ಗುನವ ಆಗಿರಯ್ಯ      ಕೇಳು ಲಿಂಗವೆ



ಬಾವಿ ನೂಕೋರ ಮನೆ ಕೆರೆಗೆ ನೂಕೋರ ಮನೆ
ಇನ್ನಾರು ಹೆಣ್ಣ ಕೊಡುತಾರೆ      ಕೇಳು ಲಿಂಗವೆ

ಹೆಣ್ಣಾನೆ ಕೊಟ್ಟಾರು ಮದಿವೇನೆ ಆದೀತು
ಅಂತ ಅತ್ತೆ ಮಾವುಗುಳೆ ಸಿಗೊದಿಲ್ಲ      ಕೇಳು ಲಿಂಗವೆ

ನಮ್ಮಪ್ಪನ ಅಳಿಯೋಗಿ ಇನ್ನೊಬ್ಬರಳಿಯಾದರೆ
ನಮ್ಮಪ್ಪಾಗೆ ದುಃಖ ಬರೋದಿಲ್ಲವೆ      ದೇವಾರುದೇವ

ನಮ್ಮವ್ವನ ಅಳಿಯೋಗಿ ಇನ್ನೊಬ್ಬರಳಿಯಾದರೆ
ನಮ್ಮವ್ವಾಗೆ ದುಃಖ ಬರೋದಿಲ್ಲವೆ      ದೇವಾರುದೇವ

## ಕೆರಿಯಾಗೆ ಇರುವ್ರೋಳ ಕರೆದರೆ ಓ ಎನ್ನೋಳೆ

ನಮ್ಮಣ್ಣನ ಭಾವ್ಯೆದ್ನ ಹೋಗಿ ಇನ್ನೊಬ್ಬನ ಭಾವ್ಯೆದ್ನಾದ್ರೆ
ನಮ್ಮಣ್ಣಗೆ ದುಃಖ ಬರೋದಿಲ್ಲವೆ      ದೇವಾರುದೇವ

ಕಿರಿಯೊಳು ಕೆಂಚವ್ಗ ಇಳ್ಳಿವಿಟ್ಟು ಬಂದೀನಿ
ಹೋಗಿ ಲಗ್ಗುನವ ಆಗಿರಯ್ಯ      ದೇವಾರುದೇವ

ಕೆರೆಯಾಗೆ ಇರುವ್ಹೋಳೆ ಕರೆದರೆ ಓ ಎನ್ನೋಳೆ
ನಿನ್ನ ಇಷ್ಟಾವ ನಡೆಸೆಂದ      ದೇವಾರುದೇವ

ನಿನ್ನಾಸೆ ಇಷ್ಟಾವ ನಡೆಸೇನು ಕೆಂಚಸ್ತ್ರೀ
ಕೊನೆಗಾದರೂ ಒಮ್ಮೆ ನಿನ್ನ ಮುಖದೋರೆ      ದೇವಾರುದೇವ

ಸಜ್ಜಾದ ಕೆರಿಯಾಗೆ ಮತ್ತೈದಿನೋ ಗೂಳೇಶ
ಹುಚ್ಚೇನೋ ನಿನಗ ಮರುಳೇನೋ      ದೇವಾರುದೇವ
ಹುಚ್ಚೇನೋ ನಿನಗ ಮರುಳೇನೊ ಅಂದೇಳಿ
ಬಂಗಾರದ ಹಸ್ತ ತೋರಿಸ್ಯಾಳೆ      ದೇವಾರುದೇವ

ಬಂಗಾರದ ಹಸ್ತ ತೋರಿಸ್ಯಾಳೆ ಕೆಂಚಮ್ಮ
ಆಗ ಗೂಳೇಶ ನೋಡುತಾನೆ      ದೇವನೀನೆ

ಅಂಗುಳದಾಗೆ ನಿಲಲುಂಡು ಗಂಗಳ ಬೆಳಗಾಲಿಲ್ಲ
ತಂದವರಿಗೆ ಮಾತ ತರಲಿಲ್ಲ ಲಿಂಗದೇವ

ಹಸಿಬೇಯು ಚೀಲವ ಹುಡಿಕ್ಯಾನೆ ಪೋರಣ್ಣ
ಇನ್ನೇಳು ಬಳೆಯು ಸಿಗುತಾವೆ ಲಿಂಗದೇವ
ಇನ್ನೇಳು ಬಳೆಯು ಸಿಗುತಾವೆ ನನ್ನಮ್ಮ
ಏಳು ಖಂಡುಗವ ಬಳೆ ತೊಟ್ಟೊ ಲಿಂಗದೇವ

## ಸತ್ಯಾದ ಕೆರಿಯಾಗೆ ಮತ್ತೈದಿನಿ ಪೋರಣ್ಣ

ನಾರಿ ಕೆಂಚವ್ವ ನಿನ್ನ ಮಾರಿ ನೋಡಲಾರೆ
ಶಿವಶಿವನೆ ನಿನ್ನ ಮಲಗ ಮಂಚಾಕೆ ಬರಲೇನೆ

ನಿಸ್ತ್ರೆ ಕೆಂಚವ್ವ ನಿನ್ನ ಮುಖವ ನೋಡಲಾರೆ
ಹರಹರನೆ ನಿನ್ನ ಕುಂಡ್ರ ಮಂಚಾಕೆ ಬರಲೇನೆ

ನಾನೋಡಿದ್ರೆ ತಾಯಪ್ಪ ನೀನೋಡಿದ್ರೆ ಮಗನಪ್ಪ
ಶಿವಶಿವನೆ ಉಣ್ಣು ಬಾರಪ್ಪ ಮಲಿಹಾಲ

ಎಷ್ಟೋನೆ ಹೇಳಿದರೂ ಕೇಳಲಿಲ್ಲ ಪೋರಣ್ಣ
ಶಿವಶಿವನೆ ಏನೆಂದು ಕೆಂಚವ್ವ ನುಡಿದಾಳೆ

ಹುತ್ತಾದಾಗಿರುವಾನೆ ಮತ್ತೆ ಬಾರೋ ಕಾಳಿಂಗ
ಶಿವಶಿವನೆ ಕೆಟ್ಟೆದುರುಳಾನ ಕಡಿಯಪ್ಪ

ಏಳೆಡೆ ಬಿಚ್ಚೊತ ನಾಲೀಗೆ ಚಾಚೂತ
ಶಿವಶಿವನೆ ಬೋರಿ ಬೋರಾಡಿ ಬರುತಾದೆ

ದುಷ್ಟಾನ ಕಡುದಾರೆ ಸೂತಕ ಬಂದಿತ್ತೈಯ್ಯ
ಶಿವಶಿವನೆ ಹೆಡೆಯು ಅಲ್ಲಾಡಿ ಹೆದರೀಸು

ಬೋರಾಡಿ ಬರುವ ಸರುಪಾನ ನೋಡಿ
ಶಿವಶಿವನೆ ನನ್ನಮ್ಮನಾಗ ಮರೆಬಿದ್ದ



ನನ್ನಾಸೆ ಹೇಣುತಿ ರಂಡೆಯಾಗುಳವ್ವ
ಶಿವಶಿವನೆ ಕೆಂಚವ್ನ ಆಗ ಮರೆಬಿದ್ದ

ಬಂದಂತ ಕಾಳಿಂಗಾಗೆ ಹಣ್ಣು ಹಾಲು ಇಟ್ಟು
ಶಿವಶಿವನೆ ಸಂಪತ್ತಿನಿಂದ ಸಲಿಸುತಾಳೆ

ಸಂಪತ್ತಿನಿಂದ ಆದರಿಸಿ ಕೈಮುಗಿದು ಹೇಳುತಾಳೆ
ಶಿವಶಿವನೆ ಕಾಳಿಂಗ ಹುತ್ತಕ್ಕೆ ದಯಮಾಡೊ

ಏನವ್ವ ನನು ಮಗಳೆ ಬಾಯಿದ್ದು ಬೈಯದಾರೆ
ಶಿವಶಿವನೆ ಬಾಳೆ ಹಣ್ಣೆಂದು ಸಲಹವ್ವ

ಬಳೆಗಾರ ಪೋರಣ್ಗೆ ಈಗಾನೆ ನನ್ನಮ್ಮ
ಶಿವಶಿವನೆ ಮುತ್ತು ರತ್ನಾವ ಸುರುದಾಳೆ

ಬಳೆಗಾರ ಪೋರ್ಣಗೆ ಹಸಿವೆ ಚೀಲಾವ್ಹಾಕಿ
ಶಿವಶಿವನೆ ನಡುಗೆರಿಯಾಗು ದಾರಿ ಬಿಡುತಾಳೆ

ಸತ್ಯಾದ ಕೆರಿಯಾಗೆ ಮುತ್ತೈದಿದೀನಿ ಪೋರಣ್ಣ
ಶಿವಶಿವನೆ ಜನರೀಗೆ ಸುದ್ದಿ ಕೊಡಬೇಡ

ಜನರೀಗೆ ಸುದ್ದಿ ಕೊಡಬೇಡ ಪೋರಣ್ಣ
ಶಿವಶಿವನೆ ನಡುಗೆರಿಯಲಿ ದಾರಿ ಬಿಡುತಾಳ

ನಡುಗೆರಿಯಲ್ಲಿ ದಾರಿ ಬಿಡುತಾಳೆ ಕೆಂಚಮ್ಮ
ಶಿವಶಿವನೆ ಜನ ಸೋಜಿಗಾಗಿ ನೋಡುತ್ತೈತೆ

ಬಳೆಗಾರ ಪೋರಣ್ಣ ಎಲ್ಲಿಂದ ಬಂದನೆಂದು
ಶಿವಶಿವನೆ ಜನಜಾತುರಾಗಿ ನೋಡುತ್ತೈತೆ

ಕೆರಿಯಾಗೆ ಇರುವಾಳು ಇನ್ನೇನು ಹೇಳಿದಾಳು
ಶಿವಶಿವನೆ ಅಲ್ಲೇ ಮಾಯಾಗೋ ಪೋರಣ್ಣ

ಅಲ್ಲೇ ಮಾಯಾಗೋ ಪೋರಣ್ಣ ಅಂಬೊತಿಗೆ
ಶಿವಶಿವನೆ ಅಲ್ಲೆ ಕಲ್ಲಾಗಿ ನಿಲಸಿಂತ.

ಬಂಗಾರ ಬಾಯಿ, ಸಿಂಗಾರ ತುಟಿ
ಬೆಲ್ಲ ತಿನ್ನು ಅಂದ್ರೆ ಒಲ್ಲಿ ಅಂತಾಳೆ
ಪುಟ್ಟಳು ಕೆಂಚಸ್ತ್ರೀ ಕೈಬಿಡು ಅನ್ನಬಾರದೆ

ಹಿರಿಯೊಳು ಕೆಂಚವ್ನ ಕೆರಿಗೆ ಕೊಟ್ರು
ಕಿರಿಯೊಳ ಕೆಂಚವ್ನ ಮದಿವಾಗ್ತೀನಿ
ಕೆಂಚಸ್ತ್ರೀ ಕೈಯ ಬಿಡೆ ಅನ್ನುಬಾರದೆ

ಗಂಡು ಗೂಳೇಶಾಗೆ ಒಡಪ ಚಂದಾದಿ ಹೇಳಿಕೊಟ್ರು
ತಂಗೀಗೆ ಹೆಸರ ಕೇಳುತಾಳೆ ಕೋಲು ಕೋಲೆ
ನೀನೇಳವ್ವ ಅಂದು ಕೇಳುತಾಳೆ ಕೋಲು ಕೋಲೆ

ಹೆಸರಾನೆ ಹೇಳಾಕೆ ಬರುವುದಿಲ್ಲ ಅಕ್ಕಯ್ಯ
ನೀನೇಳಿಕೊಡು ಅನುತಾಳೆ

ಕುದುರೆ ಏರಿ ಬರುತಾರೆ
ನಿಲ್ಲದೆ ಕೇರಿ ತಿರುಗುತಾರೆ
ನನ್ನ ಗೂಳೇಶ ಕೈಯ ಬಿಡು ಅನ್ನಬಾರದೆ

ಕಣದಾಗಿರ ಕಂಕಿ ನನ್ನ ಕೈಯಾಗು ವಂಕಿ
ಗಂಡ ಗೂಳೇಶ ಬಲು ಬೆಂಕಿ ಅನ್ನಬಾರದೆ

## ತಂಗೀಗೆ ಬುದ್ಧಿ ಹೇಳುತಾಳೆ

ಕೆರಿಯಾಗೆ ಇರುವೋಳೆ ಕರೆದಾರೆ ಓ ಎಂಬೋಳೆ
ಮೂರು ದಿನದ ಅಪ್ಪಣೆಯ ಪಡುದಾಳೆ ಸುವ್ವಯ್ಯ

ತಂಗೀಯ ಕರುದಾಳೆ ತಂಗೀಗೆನೇಳ್ಯಾಳೆ
ತಂಗೀಗೆ ಬುದ್ಧಿ ಹೇಳುತಾಳೆ ಸುವ್ವಯ್ಯ

ಚಂದರಶೇಖರನಂತ ಗಂಡ ಬೈಯ್ಯಬ್ಯಾಡ
ಗಿಂಡಿ ಕಾಲಲಿ ಒದಿಬ್ಯಾಡ ಸುವ್ವಯ್ಯ



ಗಿಂಡಿ ನೀ ಕಾಲಲಿ ಒದಿಬ್ಯಾಡ ತಂಗ್ಯವ್ವ
ದುಂದುಗದ ಮನಿಗೆ ತರವಲ್ಲ ಸುವ್ವಯ್ಯ

ಉಪ್ಪರಿಗೇನೇ ಕಸವ ಹೊತ್ತಾಗಿ ನೀ ಹೊಡಿಬ್ಯಾಡ
ಕಸಬರಿಗೆ ಕಾಲಲಿ ಒದೀಬ್ಯಾಡ ಕೋಲು ಕೋಲೆ
ಕಸಬರಿಗೆ ಕಾಲಲಿ ಒದೀಬ್ಯಾಡ ನನುಮನಿಯ
ಲಕ್ಷ್ಮೀ ದೇವೆಂದೆ ಸಲವ್ವ ಕೋಲು ಕೋಲೆ

ಚಿಕ್ಕನು ಉಜ್ಜಪ್ಪ ಹೊಟ್ಯಾಳ ಕಾಣವ್ವ
ಚಿತ್ತುರದ ಮಗನೆಂದು ಸಲವವ್ವ ಕೋಲು ಕೋಲೆ

ಮಾವ ಮಲ್ಲನಗೌಡ ಮಾನಾಡ ಮುದುಕೆವ್ವ
ಮಲ್ಲಿಗೆ ಹೂವೆಂದು ಸಲವವ್ವ ಕೋಲು ಕೋಲೆ

ಅತ್ತೆ ಮಲ್ಲಿಗುದೇವಿ ಮುಪ್ಪಿನ ಮುದುಕೆವ್ವ
ಉತ್ತುತ್ತಣ್ಣೆಂದೆ ಸಲವವ್ವ ಸುವ್ವಯ್ಯ

ನಾದಿನಿ ಮಲಕವ್ವ ಸಂಪನ್ನೆ ಕಾಣವ್ವ
ಹೊಡೆದಾಡಿ ಮನನಿಯ ಒಡಿಬೇಡ ಸುವ್ವಯ್ಯ

ತಂಗೀಯ ಕರುದಾಳೆ ತಂಗೀಗೇನೇಳ್ಯಾಳೆ
ತಂಗೀಗೆ ಬುದ್ಧಿ ಹೇಳುತಾಳೆ ಸುವ್ವಯ್ಯ

## ಹಡೆದಮ್ಮನ ಕೂಟೆ ಒಳಮಾತ

ತಂಗೀಗೆ ಬುದ್ಧಿ ಹೇಳುತಾಳೆ ಕೆಂಚಮ್ಮ
ಹಡೆದಮ್ಮನ ಕೂಟೆ ಒಳಮಾತ ಸುವ್ವಯ್ಯ

ಹಗುಲೆಲ್ಲ ಕೆರೆಯಾಗೆ ಇರುಳೆಲ್ಲ ಮನಿಯಾಗೆ
ಇರುಳೆಲ್ಲ ನಿನ್ನ ಮನಿಯಾಗೆ ಸುವ್ವಯ್ಯ
ಇರುಳೆಲ್ಲನೇ ನಿನ್ನ ಮನಿಯಾಗೆ ಹಡುದಮ್ಮ
ಹಡದಮ್ಮನ ಕೂಟೆ ಒಳಮಾತೆ ಸುವ್ವಯ್ಯ

ಹಾಲಿಗೆಪ್ಪೆರಿ ಬೇಡ ಅಗಣೀಯ ಇಡುಬ್ಯಾಡ
ನಾನು ಬಂದ್ಹೋಗದ ಮರಿಬ್ಯಾಡ ಸುವ್ವಯ್ಯ

ಸಣ್ಣ ಕೆಂಚಮ್ಮ ಸಾಸುವೆಯ ಇಡುತಾಳೆ

ಗಂಡಗಾರುತಿಯ ಬೆಳಗುತಾಳೆ ಸುವ್ವಯ್ಯ
ಗಂಡನ ಮದುವೆ ನೋಡುತಾ ಕೆಂಚಮ್ಮ
ಹಾಗೆ ಮಾಯಾಗಿ ಹೋಗುತಾಳೆ ಸುವ್ವಯ್ಯ

ಹಾಲಿಗೆಪ್ಪಿರಲಿಲ್ಲ ಅಗಣೀಯ ಇಡಲಿಲ್ಲ
ಹಡದಮ್ಮ ಇರತಂಕ ನಡಿಸ್ಯಾಳೆ ಸುವ್ವಯ್ಯ
ಹಡದಮ್ಮ ಇರತಂಕ ನಡಿ⁻⁻ ಳೆ ಮನಿಯಾಗೆ
ಹಡದವ್ವ ಒಮ್ಮೆ ಎರವಾದ್ಲು ಸುವ್ವಯ್ಯ

ಹಾಲಿಗೆ ಎಪ್ಪೆರೆದಾರೆ ಅಗಣೀಯ ಇಟ್ಟಾರೆ
ಅಣ್ಣನೆಂದಾರೆ ಮನಿಯಾಗೆ ಸುವ್ವಯ್ಯ
ಹಾಲಿಗೆ ಎಪ್ಪೆರುದಾರೆ ಅಗಣೀಯ ಇಟ್ಟಾರೆ
ಆಗ ನನ್ನಮ್ಮ ಬರುತಾಳೆ ಸುವ್ವಯ್ಯ

ಆಗ ನನ್ನಮ್ಮ ಬಂದಿನ್ನೂ ಮನಿಯಾಗೆ
ಅಗಣೀ ಹಾಕಿದ್ದ ನೋಡುತಾಳೆ ಸುವ್ವಯ್ಯ

ಅಗಣೀ ಹಾಕೀದ ಕಂಡು ಹೆಪ್ಪೆರದುದ ಕಂಡು
ಏಳು ಖಂಡುಗವ ಬಳೆ ಪಡದೊ ಸುವ್ವಯ್ಯ
ಏಳೀನೆ ಖಂಡುಗವ ಬಳಿಪಡದೊ ಕೆಂಚಮ್ಮ
ಏನೆಂದೆ ಶಾಪ ಕೊಡುತಾಳೆ ಸುವ್ವಯ್ಯ

ಕರಿಯ ಏಳೆಮ್ಮೆ ರೈತ ಕರಿಯಲೆಂದು
ನನ್ನಮ್ಮ ಶಾಪ ಕೊಡುತಾಳೆ ಸುವ್ವಯ್ಯ

ನನ್ನಮ್ಮನೇ ಶಾಪ ಕೊಟ್ಟಾಳೆ ಮುನಿಸಾಗಿ
ಮದಗಾದ ಕೆರಿಗೆ ನಡೆದಾಳೆ ಸುವ್ವಯ್ಯ

ಎದ್ದಾನೆ ಹಿರಿಯಣ್ಣ ಹಾಲ ಕರೆಯಲ್ಹೋದ
ಏಳೆಮ್ಮೆ ರೈತ ಕರುದಾವೆ ಸುವ್ವಯ್ಯ

ಕೆರೆಗ್ಹೋದ ತಂಗವ್ನ ತಿಟುವಾಟ ಅಂದೇಳಿ
ಅಣ್ಣ ಎಮ್ಮೆಗಳ ಹೊಡಕೊಂಡ ಸುವ್ವಯ್ಯ



ಅಣ್ಣನೇ ಎಮ್ಮೆಗಳ ಹೊಡಕೊಂಡು ಬಂದಾನೆ
ಕೆರಿ ಏರಿ ಮ್ಯಾಲಿ ನಿಂತುದಾನೆ ಸುವ್ವಯ್ಯ

ಕೆರಿ ಏರಿ ಮ್ಯಾಲೆ ನಿಂತಾನೆನನ್ನಣ್ಣ
ನಿನ್ನೆಮ್ಮ ನೀನೆ ಕರಕೋಳೆ ಸುವ್ವಯ್ಯ

ನಿನ್ನನೇ ಎಮ್ಮೆಯ ನಾನೇನು ಮಾಡಾಲಿ
ಅಲ್ಲೆ ಕಲ್ಲಾಗಿ ನಿಲ್ಲಲಯ್ಯ ಸುವ್ವಯ್ಯ

## ಮಾದರ ಹರಳಯ್ಯ ಏನೆಂದು ಕೇಳ್ಯಾನು

ಕೆರಿಯಾಗೆ ಇರುವ್ವೋಳೆ ಕರೆದರೆ ಓ ಎಂಬೋಳೆ
ಬಡವರಿಗೆ ಹಣವ ಕೊಡವ್ವೋಳೆ ಕೋಲು ಕೋಲೆ

ಮಾದಾರ ಹರಳಯ್ಯ ಏನೆಂದು ಕೇಳ್ಯಾನೆ
ಮಗನ ಮದುವೀಗೆ ಹಣ ನೀಡು ಕೋಲು ಕೋಲೆ

ಹಣವಾನೆ ವಯ್ದಾನು ಮದುವೆಯ ಮಾಡ್ಯಾನು
ಸತ್ಯದ ಹಣವ ಕೊಡಲಿಲ್ಲ ಕೋಲು ಕೋಲೆ

ಸತ್ಯವಂತರ ಹಣವ ಇಟ್ಟುಕೊಳ್ಳಲಿ ಬೇಡ
ತಂದುಕೋಡಯ್ಯ ಅನುತಾಳೆ ಕೋಲು ಕೋಲೆ

ಕೆರಿಯಾಗೆ ಇರುವ್ವೋಳೆ ಕರೆದಾರೆ ಓ ಎಂಬೋಳೆ
ಬಡವರಿಗೆ ಭಾಗ್ಯ ಕೊಡವ್ವೋಳೆ ಕೋಲು ಕೋಲೆ
ಬಡವರಿಗೆನೇ ಭಾಗ್ಯ ಕೊಡವ್ವೋಳೆ ಕೆಂಚವ್ವ
ಇನ್ನು ನಿನ ಸಲ್ಲು ಅಡಗಿಲ್ಲವೆ ಕೋಲು ಕೋಲೆ

ಇನ್ನುವೆ ನಿನ್ನ ಸಲ್ಲೆ ಅಡಗಿಲ್ಲವೆ ಎಂಬುದ ಕೇಳಿ
ವಲ್ಲಿ ಸೆರಗಿಗೆ ಶಾಪ ಕಟ್ಟುತಾಳೆ ಕೋಲು ಕೋಲೆ

ಏಳೂರ ತಿರುಗಿದರು ತಿನ್ನಲಿಕೆ ಅನ್ನ ಉಟ್ಟುಬ್ಯಾಡ
ಕಂಡಾನ ತಲಿಗೆ ಎಣ್ಣೆ ಹುಟ್ಟುಬ್ಯಾಡ ಕೋಲು ಕೋಲೆ
ಕೆಂಚಮ್ಮನೇ ಶಾಪ ಕೊಟ್ಟಾಳೆ ಅಂದೀಗೆ
ಅವಳಲ್ಲಿ ಸಲ್ಲೆ ಅಡಗಿ ಮನಿಯಾತು ಕೋಲು ಕೋಲೆ

## ಉಳಿಸಾದೆ ಹಾಡ ಮುಗಿಸೇವು

ಕರಿಯಾನೆ ಕಂಬಳಿ ಇಳಿಯಾನೊದ್ದು ಕೊಂಡು
ಉಳುವಿಗೋದಾರೆ ಶರಣಾರು    ಕೋಲು ಕೋಲೆ
ಉಳುವಿಗೆ ಹೋದಂತ ಶರಣರ ಪಾದವ ನೆನೆದು
ಉಳಿಸಾದೆ ಹಾಡ ಮುಗಿಸೇವೆ    ಕೋಲು ಕೋಲು

ಪದವು ಮುಗಿಯೊ ಹೊತ್ತಿಗೆ ತಂದಿಟ್ಟರಿಳ್ಳೀವ
ಲಿಂಗ ಜಂಗಮರ ಮಗಳೀಗೆ    ಕೋಲು ಕೋಲೆ
ಲಿಂಗನೇ ಜಂಗಮರ ಮಗಳು ಕೆಂಚವ್ವಾಗೆ
ತಂದಾರೆ ಸಿರಿಗಂಧನ ಇಳ್ಳೀವ    ಕೋಲು ಕೋಲು

ಕಥೆಯು ಮುಗಿಯೊತ್ತೀಗೆ ತಂದಿಟ್ಟಾರೆ ಇಳ್ಳೀವ
ಸತಿವಂತೆ ಕೆಂಚವ್ನ ಸದರೀಗೆ    ಕೋಲು ಕೋಲೆ

ತಾಯಿ ಪೂಜಿಗೆ ಕಾಯಿಕರಪೂರ ಕೊಟ್ಟವ್ಮಾಗೆ
ಬೇಡಿದ ಇಷ್ಟಾರ್ಥ ಕೊಡು ಶಿವನೆ    ಕೋಲು ಕೋಲೆ

ಸತಿವಂತೆಯು ಪದವ ಕಿವಿಯು ತುಂಬ ಕೇಳಿ
ಅತ್ತೆ ಬೈತಾಳೆಂದ ಮನಿಗ್ಹೋದೊ    ಕೋಲು ಕೋಲೆ
ಅತ್ತೆ ಬೈತಾಳಂದು ಮನಿಗ್ಹೋದ ಆ ಸತಿಯು
ಅತ್ತಿ ಮರನಾಗಿ ನಿಲನಿಂತೋ    ಕೋಲು ಕೋಲೆ

ಶರಣೆಯು ಈ ಪದವ ಕಿವಿಯು ತುಂಬಾ ಕೇಳಿ
ಮಾವ ಬೈತಾನೆಂದು ಮನಿಗ್ಹೋದೊ    ಕೋಲು ಕೋಲೆ
ಮಾವ ಬೈತಾನೆಂದು ಮನಿಗ್ಹೋದ ಆ ಸೊಸೆಯು
ಮಾವಿನ ಮರನಾಗಿ ನಿಲನಿಂತೊ    ಕೋಲು ಕೋಲೆ

ಕರಿಯಾನೆ ಕಂಬಳಿ ಈಗ ಹೊದ್ದುಕೊಂಡು
ಉಳಿವಿಗೆ ಹೋದಾರೆ ಶರಣಾರು    ಕೋಲು ಕೋಲೆ
ಉಳವೀಗೆ ಹೋದ ಶರಣರ ಶಾಸ್ತ್ರವ ನೆನೆದು
ಉಳಿಸಾದೆ ಹಾಡ ಮುಗಿಸೇವು    ಕೋಲು ಕೋಲೆ



ಇಲ್ಲಿಗೆ ಶಿವಶಿವ ಹರಹರ ಇಲ್ಲಿಗೆ
ಇಲ್ಲೀಗೆ ಸಂದೆ ಪದ ಮುಂದೆ    ಕೋಲು ಕೋಲೆ

ತನ್ನೊಳಗೆ ಗುರುಲಿಂಗ ತನ್ನೊಳಗೆ ಜಂಗಮವು
ತನ್ನೊಳಗೆ ಮೋಕ್ಷ ಸಾಧನೆಯು
ಕೈಲಾಸ ತನ್ನೊಳಗೆ ಇಹುದು    ಶಿವಲಿಂಗ

ಓಣಿಗೆ ಹೊಲೆಯುಂಟೆ ಕಾಳಗಕೆ ನಗೆಯುಂಟೆ
ಬಾಳಲೋಚನ ಭಜಿಸಾದ ನರನಿಂಗೆ
ಏಳೀಗೆ ಉಂಟೆ    ಶಿವಲಿಂಗ

ಕೋಳಿಗೆ ಮಲೆಯುಂತೆ ಕಾಳಗಕೆ ನಗೆಯುಂಟೆ
ಬಾಳಲೋಚನದ ಭಜಿಸಾದ ನರನಿಂಗೆ
ಏಳೀಗೆ ಉಂಟೆ    ಶಿವಲಿಂಗ

ಒಡದ ಮಡಿಕೇಗೆ ಮಣ್ಣ ತಡರೀಸಿ ಫಲವೇನು
ಹಿಡಿದಂಥ ವ್ರತವ ಬಿಡುತಿರ್ಪ ಮನಜಾಗ
ಮುಕುತಿ ಎಲ್ಲಿಹುದು    ಶಿವಲಿಂಗ

ಬತ್ತೀದ ಬಾವೀಗೆ ಹೊತ್ತು ನೀರೆರೆದಂಗೆ
ಭಕ್ತರ ಮನವು ಕಡೆಗಾದರ ಮತ್ತೆ
ಮುಕ್ತಿ ಎಲ್ಲಿಹುದು    ಶಿವಲಿಂಗ

ಹನ್ನೊಂದು ಅಕ್ಷರವ ಚನ್ನಾಗಿ ಪಠಿಸಿದರೆ
ತನ್ನ ತಾ ತಿಳಿದು ನೋಡಿದರೆ ಶಂಕರನು
ತನ್ನಂತೆ ಇಹನು    ಶಿವಲಿಂಗ

ತನ್ನೊಳಗೆ ಗುರುಲಿಂಗ ತನ್ನೊಳಗೆ ಜಂಗಮರು
ತನ್ನೊಳಗೆ ಮೋಕ್ಷ ಸಾಧನೆಯು ಕೈಲಾಸ
ತನ್ನೊಳಗಿಹುದು    ಶಿವಲಿಂಗ

---

# ಕೆಂಚಮ್ಮನ ಬಗ್ಗೆ ಐತಿಹ್ಯ

ಮದಗದ ಕೆರೆಯ ತಳದಲ್ಲಿರುವ ಗುಡಿಯಲ್ಲಿ ಇಂದಿಗೂ ಕೆಂಚಮ್ಮ ಜೀವಂತವಾಗಿರುವ ಳೆಂದು ಅಲ್ಲಿನ ಜನ ನಂಬುತ್ತಾರೆ. ಅದಕ್ಕೆ ಪುಷ್ಟಿಕೊಡುವಂತೆ ಧಾರವಾಡಜಿಲ್ಲೆ ಗೆಜಿಟಿಯರ್‌ನ ಡಾ॥ ಬರ್ಗ್ಸ್‌ರ 'ಲಿಸ್ಟ್ ಆಫ್ ಆರ್ಕಿಯೋಲಾಜಿಕಲ್ ರಿಮೇನ್ಸ್' ೧೭-೧೮ರಲ್ಲಿ ಕೆಂಚಮ್ಮನ ಐತಿಹ್ಯದ ಬಗ್ಗೆ ಉಲ್ಲೇಖಿಸಲಾಗಿದೆ

ಎರಡನೆಯ ದಂತಕಥೆಯಂತೆ ಶಿವಮೊಗ್ಗೆಯ ಮೈಸೂರು ವಿಭಾಗದಲ್ಲಿದ್ದ ಪುರಪದ ಕೇರಿಯಲ್ಲಿ ಸಂಸಾರದೊಂದಿಗೆ ವಾಸಿಸುತ್ತಿದ್ದ ಮಾಸೂರಿನ ಪಟೇಲನಿಗೆ ಕೆಂಚವ್ವ ಎಂಬ ಸುಂದರಿಯಾದ ಮಗಳಿದ್ದಳು. ಅವಳನ್ನು ವಿಜಯನಗರದ ಅರಸ ವಿವಾಹವಾಗಲು ಇಚ್ಛಿಸಿದ. ಆದರೆ ಅರಸರಿಗಿಂತ ಮೇಲ್ಜಾತಿಯವನಾದ್ದರಿಂದ ಅವನು ರಾಜನ ಕೇಳಿಕೆಯನ್ನು ತಿರಸ್ಕರಿಸಿದನು.

ನಂತರ ಅವಳ ತಂದೆತಾಯಿಗಳು ಮೈಸೂರಿನ ಶಿಕಾರಿಪುರ ಉಪವಿಭಾಗದ ಈಸೂರಿನ ಪಟೇಲನೊಂದಿಗೆ ತಮ್ಮ ಮಗಳ ವಿವಾಹವನ್ನು ನೆರವೇರಿಸಲಿಚ್ಛಿಸಿದರು. ವಿವಾಹ ಮಾಡುವುದಕ್ಕಾಗಿ ಹೋದರು. ಆಗ ಕೆಂಚಮ್ಮ ದೇವಸ್ಥಾನದೊಳಗೆ ಹೋಗಿ ತನ್ನನ್ನು ದೇವರಿಗೆ ಅರ್ಪಿಸಿಕೊಂಡಳು. ಕೆರೆಯ ನಿರ್ಮಾಣ ಆದ ನಂತರ, ಕೆಂಚವ್ವ ತನ್ನ ದೇವರನ್ನು ಬಿಟ್ಟುಬರಲು ನಿರಾಕರಿಸಿದಳು. ಮಳೆಗಾಲದ ಮೊದಲ ಪ್ರವಾಹ ಬಂದು ದೇವಮಂದಿರ ನೀರಿನಿಂದ ಮುಚ್ಚಲ್ಪಟ್ಟಾಗ ಆ ಹುಡುಗಿಯೂ ನೀರಿನಲ್ಲಿ ಮುಳುಗಿದಳು. ಅದೊಂದು ಭಾರಿ ಮಳೆಗಾಲವಾದ್ದರಿಂದ ಜಲಾಶಯವನ್ನು ಕಾಯಲು ಒಬ್ಬ ಕಾವಲುಗಾರನನ್ನು ಹಾಕಿದರು.

ಪಟೇಲನಿಗೆ ಒಂಬತ್ತು ತಿಂಗಳ ತುಂಬುಗರ್ಭಿಣಿಯನ್ನು ತನಗೆ ಬಲಿ ಕೊಡುವಂತೆಯೂ, ಇಲ್ಲದಿದ್ದರೆ, ಜಲಾಶಯವನ್ನು ಒಡೆದುಹಾಕುವುದಾಗಿಯೂ' ಹೋಗಿ ತಿಳಿಸುವಂತೆ ಕೆಂಚವ್ವ ಕಾವಲುಗಾರನಿಗೆ ತಿಳಿಸಿದಳು. ಕಾವಲುಗಾರನು ತನ್ನ ಕೆಲಸ ಬಿಟ್ಟುಹೋಗಲು ನಿರಾಕರಿಸಿದನು. ಕೆಂಚವ್ವ ಅವನು ಹೇಳಿಬರುವ ತನಕ ತಾನು ಗುಡ್ಡವನ್ನು ಒಡೆಯುವುದಿಲ್ಲವೆಂದು ವಾಗ್ದಾನ ಮಾಡಿದಳು. ಕಾವಲುಗಾರನು ಕೆಂಚವ್ವನ ಆಣತಿಯನ್ನು ತಿಳಿಸಿದನು. ಮುಖ್ಯಸ್ಥನು ಆ ಮಾತಿಗೆ ಕಿವಿಗೊಡಲಿಲ್ಲ. ಬದಲಾಗಿ ತನ್ನ ಕಾರ್ಯ ಬಿಟ್ಟು ಬಂದುದಕ್ಕಾಗಿ ಕಾವಲುಗಾರನನ್ನೇ ಶಿಕ್ಷಿಸಿದನು. ಮತ್ತು ಕೆಂಚವ್ವನಿಗೆ ಬಲಿಯನ್ನು ಕೊಡಲಿಲ್ಲ. ಇದರಿಂದ ಕುಪಿತಳಾದ ಕೆಂಚವ್ವ ಒಂದು ಗುಡ್ಡವನ್ನು ಮತ್ತು ಒಂದು ದಂಡೆಯನ್ನು ಒಡೆದುಹಾಕಿದಳು.

ಬಡಜನರು ಕೆರೆಯ ಬಳಿಗೆ ಹೋಗಿ ಕೆಂಚವ್ವನನ್ನು ಮೂಗುತಿ, ಬೆಂಡೋಲೆ ಮುಂತಾದುವನ್ನು ಮದುವೆ ಸಮಯದಲ್ಲಿ ಬೇಡುತ್ತಿದ್ದರು ಮತ್ತು ತಾವು ಕೇಳಿದ್ದನ್ನು



ಕೆರೆದಂಡೆಯಲ್ಲಿ ಪಡೆಯುತ್ತಿದ್ದರು.

ಒಬ್ಬ ಆ ರೀತಿ ಪಡೆದ ಒಡವೆಗಳನ್ನು ಹಿಂದಿರುಗಿಸಲು ಮರೆತುಬಿಟ್ಟ. ಅಂದಿನಿಂದ ಕೆಂಚವ್ವ ಕೇಳಿದವರಿಗೆ ಒಡವೆ ಕೊಡುವುದನ್ನು ನಿಲ್ಲಿಸಿದಳು.

೧೮೭೦ ರಲ್ಲಿ ಒಬ್ಬ ಬೆಸ್ತರವನ ಗಾಳ ನೀರಿನಲ್ಲಿದ್ದ ದೇವಾಲಯದ ಮಹಡಿಗೆ ಸಿಕ್ಕಿಕೊಂಡಿತು. ಅವನು ನೀರಿನಲ್ಲಿ ಮುಳುಗಿ ಆ ದೇವಾಲಯವನ್ನು ಪ್ರವೇಶಿಸಿದಾಗ, ಅಲ್ಲಿ ಕೆಂಚವ್ವನ ಒಂದು ಬಂಗಾರದ ಪ್ರತಿಮೆಯನ್ನು ಕಂಡನು. ಅವಳು ಅವನಿಗೆ, ತಾನು ಜೀವಂತವಾಗಿರುವುದನ್ನು ಯಾರಿಗೂ ಹೇಳಬಾರದೆಂದು ಎಚ್ಚರಿಸಿದಳು. ಮತ್ತು ಹಾಗೆ ಯಾರಿಗಾದರೂ ಅವನು ತನ್ನ ರಹಸ್ಯವನ್ನು ಹೇಳಿದರೆ ರಕ್ತ ಕಾರಿ ಸಾಯುವುದಾಗಿಯೂ ಹೇಳಿದಳು. ಆಗ ಬೆಸ್ತರವನು ತಾನು ದೇವಸ್ಥಾನದಿಂದ ಹೊರಗೆ ಹೋಗುವುದು ಹೇಗೆಂದು ಕೇಳಲು, ಅವಳು ಅವನನ್ನು ತಳ್ಳಿಹಾಕಲು ಅವನು ಮತ್ತೆ ನೀರಿನ ಮೇಲೆ ಬಂದನು. ಈ ರಹಸ್ಯವನ್ನು ಅವನು ಎರಡು ವರ್ಷಗಳ ಕಾಲ ಕಾಪಾಡಿ ಕೊಂಡನು. ನಂತರ ಒಮ್ಮೆ ಅಕಸ್ಮಾತ್ ಆ ರಹಸ್ಯವನ್ನು ಬಯಲು ಮಾಡಿ ರಕ್ತಕಾರಿ ಸತ್ತನು.

ಇಂದಿಗೂ ಬರಗಾಲದಲ್ಲಿ, ಶಿಕಾರಿಪುರದ ದೇವಸ್ಥಾನಗಳ ಮುಖ್ಯಸ್ಥರು ಒಂದು ಮೂಗುತಿ, ಒಂದು ಬಂಗಾರದ ದುಂಡನೆಯ ತುಂಡನ್ನು ತೆಗೆದುಕೊಂಡು ಮದಗದ ಕೆರೆಯ ಬಳಿಗೆ ಬರುತ್ತಾರೆ. ಒಂದು ತೆಪ್ಪದ ಮೇಲೆ ಮಧ್ಯಕೆರೆಗೆ ಹೋಗಿ, ಗಂಗೆಯನ್ನೂ ಕೆಂಚವ್ವನನ್ನೂ ಪೂಜಿಸಿ, ತಾವು ತಂದ ಬಂಗಾರದ ವಸ್ತುಗಳನ್ನು ಎಡೆಯ (ನೈವೇದ್ಯದ ಅನ್ನ) ಒಳಗಿಟ್ಟು ಕೆರೆಗೆ ಬಿಡುತ್ತಾರೆ. ಕೆಂಚಮ್ಮನನ್ನು ಮಳೆ ಕಳುಹಿಸುವಂತೆ ಬೇಡುತ್ತಾರೆ. ಕೆಂಚವ್ವನ ಮಾವನ ಮನೆಯ ವಂಶದವರಾದ ಮಾಸೂರಿನ ರುದ್ರೇಗೌಡರ (೬೨ ವರ್ಷ) ಮನೆಯ ದೇವರಕೋಣೆಯ ಅಡ್ಡೆಯಲ್ಲಿ ಎರಡು ಮಡಕೆಯನ್ನುಳ್ಳ 'ಶಂಭುಲಿಂಗ' ಎಂಬ ಸಾಧನವಿದೆ. ಇದನ್ನು ತೆಗೆದುಕೊಂಡು ಹೋಗಿ ಕೆರೆಯಲ್ಲಿಟ್ಟು ಪೂಜಿಸಿ, 'ಕುಂಭಕಳಶ'ವನ್ನು ತೆಪ್ಪದ ಮೇಲೆ ಬಿಟ್ಟು ಬರುತ್ತಾರೆ. ಬರುವಾಗ 'ಶಂಭುಲಿಂಗ'ನಲ್ಲಿ ಮದಗದ ಕೆರೆಯ ನೀರನ್ನು ತರುತ್ತಾರೆ. ಹೀಗೆ ಮಾಡಿದ ಕೆಲದಿನಗಳಲ್ಲಿಯೇ ಮಳೆ ಬರುತ್ತದೆಂದು ಹೇಳುತ್ತಾರೆ. ಈ 'ಶಂಭುಲಿಂಗ'ನನ್ನು ಜಾತ್ರೆ ಸಮಯದಲ್ಲಿಯೂ ಕೆರೆಗೆ ಹೊತ್ತು ತಂದು ಭಕ್ತಿಯಿಂದ ಆರಾಧಿಸುತ್ತಾರೆ.

'ಮದಗದ ಕೆಂಚಮ್ಮ'ನನ್ನು ಹೆಚ್ಚಾಗಿ ಹರಿಜನ ಮತದವರು, ಅದರಲ್ಲೂ ಹೆಂಗಸರು, ತಟ್ಟೆಯಾಕೃತಿಯ ಪುಟ್ಟಿಯಲ್ಲಿ ಕಳಶ ಸ್ಥಾಪಿಸಿ, ಕಳಶದ ಮೇಲೆ ಕೆಂಚಮ್ಮನ ಹಸ್ತ ಧರಿಸಿಕೊಂಡು ಪೂಜಿಸಿ ಕೆಂಚಮ್ಮನ ಹಾಡುಗಳನ್ನು ಹಾಡುತ್ತ ಮನೆಮನೆಗೆ ಬರುತ್ತಾರೆ. ಮನೆಯವರು ಕೆಂಚಮ್ಮನಿಗೆ ಪೂಜೆಮಾಡಿ, ಮಡಲಕ್ಕಿ ಹಾಕಿ ಕಳುಹಿಸುತ್ತಾರೆ. ಕೆಲವರು ಮೂರು ದಿವಸ ರಾತ್ರಿ ಇಡೀ ಕೆಂಚಮ್ಮನ ಹಾಡನ್ನು ಅವರಿಂದ ಹಾಡಿಸಿ ತಮ್ಮ ಕೈಲಾದ ಹಣವನ್ನೋ ಅಥವಾ ದವಸವನ್ನೋ ಕೊಟ್ಟು ಕಳುಹಿಸುತ್ತಾರೆ.

ಮದಗದ ಕೆಂಚಮ್ಮನ ಹಾಡನ್ನು ಶೂನ್ಯಮಾಸದಲ್ಲಿ ಹಾಡುವುದಿಲ್ಲ. ಹೆಚ್ಚಾಗಿ ಶ್ರಾವಣಮಾಸದಲ್ಲಿ ಮತ್ತು ವೈಶಾಖದಲ್ಲಿ ಹಾಡುತ್ತಾರೆ. ಹಾಡಿಸುವ ಮನೆಯವರು ಮೊದಲೇ ಊರಿನವರಿಗೆಲ್ಲಾ (ಹೆಚ್ಚಾಗಿ ಹೆಣ್ಣುಮಕ್ಕಳಿಗೆ) ತಿಳಿಸಿರುತ್ತಾರೆ. ರಾತ್ರಿ ಊಟವಾದ ನಂತರ, ಮನೆಯ ಒಳಗೆ ನೆಲ ಸಾರಿಸಿ, ಕೆಂಚಮ್ಮನನ್ನು ಕಳಶದಲ್ಲಿ ಸ್ಥಾಪಿಸಿ, ಪೂಜಿಸುತ್ತಾರೆ. ನಂತರ ಸರ್ವರ ಅಪ್ಪಣೆ ಕೇಳಿ ಹಾಡಲಾರಂಭಿಸುತ್ತಾರೆ. ಈ ಕಥೆಯನ್ನು ಸಂದು ಸಂದುಗೆ ನಿಲ್ಲಿಸಿ ಊರ ಮುತ್ತೈದೆಯರು ತಂದ ಹರಕೆಯ ಹೂ, ಹಣ್ಣು, ಕಾಯಿ, ಹಣ ಮತ್ತು ವೀಳ್ಯವನ್ನು ಸ್ವೀಕರಿಸುತ್ತಾರೆ. ನಿದ್ರೆ ಬಾರದಿರಲೆಂದು ಮಧ್ಯೆಮಧ್ಯೆ ಕಾಫಿ, ಟೀ ನೀಡುತ್ತಾರೆ. ಬೆಳಗಾಗುವ ತನಕ ಹಾಡಿ ಕಥೆಯನ್ನು ಒಂದು ಸಂಧಿಗೆ ನಿಲ್ಲಿಸಿರುತ್ತಾರೆ. ಹೀಗೆ ಮೂರು ದಿನ ನಡೆದು, ಮೂರನೆಯ ದಿನ ಕಥೆ ಮುಗಿಯಲು ಊರವರೆಲ್ಲಾ ಸೇರಿ ಭಕ್ತಿಯಿಂದ ಕೆಂಚವ್ವನನ್ನು ಆರಾಧಿಸುತ್ತಾರೆ ಮತ್ತು ಬೆಳಿಗ್ಗೆ ಎಡೆಮಾಡಿ ಎಲ್ಲರೂ ಊಟ ಮಾಡುತ್ತಾರೆ.

### ಹಾಡಿದವರು

ಶಿವಮೊಗ್ಗ ಜಿಲ್ಲೆಯ ಚನ್ನಾಪುರ ಗ್ರಾಮದ ಲಿಂಗಾಯತ ಮತದವರಾದ ೭೫ ವರ್ಷದ ದೊಡ್ಡ ಸಿದ್ದಿಂಗಜ್ಜಿ, ೫೦ ವರ್ಷದ ಸಿದ್ಧಲಿಂಗಮ್ಮ ಮತ್ತು ಚಿತ್ರದುರ್ಗ ಜಿಲ್ಲೆಯ ಅಣಬೇರು ಗ್ರಾಮದ ಹರಿಜನ ಮತದವರಾದ ೭೫ ವರ್ಷದ ದ್ಯಾಮವ್ವ, ೪೫ ವರ್ಷದ ದುರುಗವ್ವ.

ಧ್ವನಿ ನೀಡಿದವರು: ಅಣಬೇರು ಗ್ರಾಮದ ವೀರಶೈವ ಮತದ ೮೫ ವರ್ಷದ ಕಾಳಿಂಗಪ್ಪರ ಗಿರಿಯಜ್ಜಿ, ೭೫ ವರ್ಷದ ಅಬ್ಬಿಗೆರೆ ಗಂಗಜ್ಜಿ.

ಹಾಡಿಸಲು ನೆರವಾದವರು: ಸೊಸೆ ಪ್ರೇಮ, ಭಾವಮೈದುನ ಕೆ. ಎಸ್. ರುದ್ರಪ್ಪ, ಕಾಳಿಂಗಪ್ಪರ ರುದ್ರಪ್ಪ ಮತ್ತು ಚಿ. ಸೌ. ಬಿ. ಹೆಚ್. ಸಂತೋಷ್. ಹಾಡುಗಳನ್ನು ಕೇಳಿ ಅವುಗಳನ್ನು ಧ್ವನಿಮುದ್ರಿಸಿಕೊಳ್ಳುವಂತೆ ಪ್ರೋತ್ಸಾಹಿಸಿದ ಮಡದಿ ಶ್ರೀಮತಿ ಕಮಲ ಮತ್ತು ಧ್ವನಿಮುದ್ರಣ ಕಾರ್ಯದಲ್ಲಿ ಸಲಹೆ ಸೂಚನೆಗಳನ್ನಿತ್ತ ಜಾನಪದ ಕಲಾವಿದ ಮಿತ್ರ ಅಬ್ಬಲಗೆರೆ ಅಬ್ಬಾಸ್, ಶ್ರೀ ಕೆ. ಎಸ್. ಸಿದ್ಧಲಿಂಗಪ್ಪ ಶ್ರೀಮತಿ ಎಚ್. ಗಂಗಮ್ಮ, ಕತ್ತಿಗೆ ಯುವರಾಜ್, ಮಿತ್ರ ಶ್ರೀ ಎಸ್. ಎಲ್. ಜಿ. ಎನ್. ಶಾಸ್ತ್ರಿ ಮತ್ತು ಮದಗದ ಕೆರೆಯನ್ನು ತೋರಿಸಿ, ಕೆಂಚವ್ವನ ಬಗ್ಗೆ ಹೆಚ್ಚಿಗೆ ಮಾಹಿತಿಯನ್ನು ನೀಡಿ ಆ ಬಗ್ಗೆ ದಿನವಿಡೀ ಮಾರ್ಗದರ್ಶನ ಮಾಡಿದ ಮಾಸೂರಿನ ಶ್ರೀ ಹಳ್ಳಪ್ಪ ಮಾಸ್ತರರು, ಛಾಯಾಚಿತ್ರಗಳನ್ನು ತೆಗೆದ ಮಿತ್ರರಾದ ಸಚ್ಚಿದಾನಂದ ಆರ್ಯ—ಇವರೆಲ್ಲರಿಗೂ ಲೇಖಕ ಋಣಿ.

## ಮುಖ್ಯ ಆಶಯಸೂಚಿ

೧ ಕತ್ತರಿತೂಬು ನಿರ್ಮಿಸುವಾಗ, ಆ ಕ್ಷೇತ್ರದೇವತೆಯು ಕೋಪಗೊಂಡಿದ್ದಾಳೆಂದು ಅವಳಿಗೆ ಒಬ್ಬಳು ಕನ್ನಿಕೆಯನ್ನು ಬಲಿ ಕೊಡುವವರೆಗೆ ಕಂಬಗಳನ್ನು ಏರಿಸಲು ಬಿಡುವುದಿಲ್ಲವೆಂದುದು.

೨ ಶಂಕರನು ರಾಕ್ಷಸರನ್ನು ಕೊಲ್ಲಲು ರೇಣುಕರನ್ನು ಭೂಲೋಕಕ್ಕೆ ಕಳುಹಿಸಿದುದು.

೩ ರೇಣುಕರಿಂದ ರಾಕ್ಷಸರಿಬ್ಬರೂ ಕೆಂಚಮ್ಮ ಮತ್ತು ಗೂಳೇಶರಾಗಿ ಹುಟ್ಟಿದುದು.

೪ ಕಬ್ಬಿಣದ ಗುಂಡುಗಳನ್ನು ಕಾಸಿದ ಸ್ಥಳಕ್ಕೆ 'ಖವಾಸಪುರ'ವೆಂದು ಹೆಸರು ಬಂದುದು.

೫ ಕಿಡಿ ಸಿಡಿದುದರಿಂದ 'ಕಿಟ್ಟದಳ್ಳಿ'ಯಾದುದು.

೬ ಕಬ್ಬಿಣದ ಗುಂಡುಗಳು ಮೊಲವನ್ನು ಕಂಡಕೂಡಲೆ ನಾಲಿಗೆ ಚಾಚಿದ್ದು.

೭ ಎರಡು ಸುರಗಿ(ಖಡ್ಗ)ಗಳನ್ನು ಮಾಡಿದ ಸ್ಥಳಕ್ಕೆ 'ಸುರಗಿಹಳ್ಳಿ' ಎಂದು ಹೆಸರು ಬಂದುದು.

೮ ಕೆಂಚಮ್ಮ ಕಾಳಿಂಗನನ್ನು ಸಿಂಬೆಯನ್ನಾಗಿ ಮಾಡಿದುದು.

೯ ಕೆರೆಯಿಂದ ಕೆಂಚಮ್ಮ ಗಂಡ ಗೂಳೇಶನೊಡನೆ ಮಾತನಾಡಿದುದು.

೧೦ ಕೆಂಚಮ್ಮ ಕೆರೆಯಿಂದ ಬಂದು, ಗಂಡನಿಗೆ ಮಾತ್ರ ಕಾಣಿಸುತ್ತಾ, ಸಣ್ಣ ಕೆಂಚಮ್ಮನ ಮದುವೆಯಲ್ಲಿ ಹಾಡು ಹೇಳಿ ಹಸೆ ಬರೆದುದು.

೧೧ ಮದಗದ ಕೆರೆಯಿಂದ ಬಡವರು ಒಡವೆ, ಹಣ ಕೇಳಿ ಪಡೆಯುತ್ತಿದ್ದುದು.

೧೨ ಬೆಸ್ತರವನು, ಮದಗದ ಕೆರೆಯ ಒಳಗಿರುವ ದೇವಾಲಯದಲ್ಲಿ ಕೆಂಚಮ್ಮನನ್ನು ಕಂಡು ಮಾತಾಡಿದ್ದು.

## ಅರ್ಥಕೋಶ

ಉಸುರೆಂದು–ದೊಡ್ಡ ಉಸಿರು ಬಿಟ್ಟು
ತಪ್ಪನೆ–ಬೇಗನೆ
ಒದಗೊದಗಿ–ಹೆಚ್ಚು ಹೆಚ್ಚಾಗಿ
ಐಭೋಗ–ಸುಂದರ
ಹಂಡೋರಿ–ತಲೆಯ ಭಾಗದಲ್ಲಿ ಕಪ್ಪು ಮತ್ತು ಬಿಳಿಯ ಬಣ್ಣವುಳ್ಳ ಎತ್ತು
ಅಬ್ಬೆ–ಜೇಡ
ಕುಂದ–ಕೆಟ್ಟ ಹೆಸರು
ಚೆರುಗ – ಊರಿಗೆ ಒಳ್ಳೆಯದಾಗಲೆಂದು ದುಷ್ಟಶಕ್ತಿಗಳಿಗೆ ಎಡೆ ಮಾಡುವ ಕ್ರಮ.
ಗುಂಡೋರಿ–ಬಾಗಿದ ಕೊಂಬುಳ್ಳ ಎತ್ತು
ಮುಗುದಾಣ–ಎತ್ತಿನ ಮೂಗಿಗೆ ಹಾಕುವ ದಪ್ಪ ದಾರ
ಮಕರಂಬ–ಎತ್ತಿನ ತಲೆಯ ಮುಂಭಾಗದಲ್ಲಿ ಹಾಕುವ ಸಿಂಗಾರದ ಒಂದು ಸಾಧನ, ಮೊಖರಂಬ.
ಹಿಡಿವಗ್ಗ–ಎತ್ತು ಹಿಡಿದುಕೊಂಡು ಹೋಗಲು ನೆರವಾಗುವ ಹಗ್ಗ
ಲಾಮಂಗದ ಗುಳಿ–ಲಾಮುದಾಕಾರದಲ್ಲಿ ಮಾಡಿದ ಕದವನ್ನು ಭದ್ರಪಡಿಸಲು ಬಳಸುವ ಸಾಧನ (ಅಗುಣಿ)
ಉಜ್ಜಣಿ ಸಿದ್ದಪ್ಪ–ಉಜ್ಜೈನಿ ಸಿದ್ದೇಶ್ವರ
ಯುವಾರ–ವ್ಯಾಪಾರ, ವ್ಯವಹಾರ
ಚುಟಿಕೆ–ಕಾದ ಸೂಜಿಯಿಂದ ಹಣೆ ಮತ್ತಿತರ ಅಂಗಗಳಿಗೆ ಮುಟ್ಟಿಸುವ ಜನಪದ ವೈದ್ಯಕೀಯ.
ಹುರಿ–ತಾಯಿ ಮಗುವಿನ ಸಂಬಂಧವೇರ್ಪಡಿಸುವ ಹೊಕ್ಕುಳ ಬಳ್ಳಿ.
ಅಳ್ಳಿ–ಹತ್ತಿ
ಬಜೆ–ಜನಪದ ವೈದ್ಯಕೀಯದಲ್ಲಿ ಬಳಸುವ ಒಂದು ರೀತಿಯ ಬೇರು.
ಪಡವಣಿಗೆ–ಪಡೆದುಕೊಂಡು ಬಂದದ್ದು.
ತಂದವರು–ಹೆಣ್ಣು ಮದುವೆ ಮಾಡಿಕೊಂಡವರು.
ಬೆನ್ನಾಗುಳಿಲುವು–ಬೆನ್ನಿನ ಎಲುಬು

ಬಿಮ್ಮನುಸಿ–ಗರ್ಭಿಣಿ
ದುರುಮರಣ–ಕೆಟ್ಟ ಸಾವು
ಸಲವವ್ವ–ಕಾಪಾಡು
ಬಾನ–ಅನ್ನ
ಭೂಮವ್ವ–ಭೂತಾಯಿಯ
ಬಲಗೊಂಬೆ–ಪ್ರದಕ್ಷಿಣೆ ಬರುವೆ
ಸಾರಿದ–ಸಗಣಿಯಿಂದ ನೆಲ ಬಳಿದ
ಜಂತ–ದಂತ
ಯುಮಗೊಂಡ–ನರಕ
ಸಪುನಾಕೆ–ಕನಸಿಗೆ
ನಿರುವಯ–ಬಾಳುವೆ
ವಡ್ಡಿಕೆ–ವಡ್ಡರ ಕೆಲಸ
ಓಟಾಗಿ–ಒಂದಾಗಿ
ಹಾರಾಡಿ–ಸಂತಸದಿಂದ
ಒಪ್ಪೈವು–ಒಪ್ಪಿದೆವು
ಪಾತಾಳದೆಂಟೆ–ಕೆರೆ ಕೆಳಭಾಗದ ಗುಂಡಿಯೊಳಗಿನ ಭಾರಿ ಮಣ್ಣು ಹೆಂಟೆ
ಲಕ್ಷದ ಕೋಣೆಗೆ–ಹಣ ವನ್ನಿಟ್ಟಿರು ವಕೋಣೆಗೆ
ಬಳ್ಳಾ–ಒಂದು ಅಳತೆ
ಬೋವೇರು–ಬೋವಿ ಮತಸ್ಥರು
ವಡ್ಡು–ಏರಿ, ಕಟ್ಟೆ
ಬಣ್ಣ–ಸೀರೆ
ಉಣ್ಣಕಾವುಗಳ–ಕಾಳುಕಡಿ
ಅಲಿಗೇರು–ತಮ್ಮಟೆ ಬಡಿಯುವರು
ಹೆಗ್ಗಾಳೆ–ಒಂದು ವಿಧದ ಕಹಳೆ
ಸತ್ತಿಗೆ–ಛತ್ರಿ
ಸಳೆಮಂಚ–ಹಗ್ಗದಿಂದ ಮಾಡಿರುವ ಮಂಚ
ಆವು–ಹಸು
ಆಡು–ಮೇಕೆ
ತಂಗಟೆ ಹೂ–ಹಳದಿ ಬಣ್ಣದ ಹೂವು
ಹಟ್ಟಿಯ ತಿಪ್ಪಣ್ಣ–ನಾಯಕನ ಹಟ್ಟಿಯ ತಿಪ್ಪೇಸ್ವಾಮಿ,
ಯಾಪಾರ–ವ್ಯಾಪಾರ
ಬ್ಯಾನಿ–ನೋವು
ಜಲುಮಾಕೆ–ಜನ್ಮಕ್ಕೆ



ಆಲೆ–ಕಬ್ಬನ್ನು ಅರೆಯುವ ಸಾಧನ
ಸೋಗೆ–ಗರಿ
ಅಕ್ಕೋ ಅನ್ನೋರಿಲ್ಲ-ಕೇಳುವವರು ಯಾರೂ ಇಲ್ಲ
ಚತ್ರಿಕೆ–ಛತ್ರಿ
ಕಾಲಾಳು–ಜನ
ಮಳ್ಯಾವೆ–ಮರಳಾವೆ
ಅಪರಂಜಿ–ಚೊಕ್ಕ ಬಂಗಾರ
ತಿಪುರದ–ತಿರುಪುಳ್ಳ
ಜೋತುರ–ದೋತುರ

ಬಾಪೂರಿ–ತೋಳಬಂದಿ
ಅಸುರದ–ಸುತ್ತಮುತ್ತಲಿನ
ನೆಲ್ಲು–ಬತ್ತ
ಮಂದಿ ಕೋಡಿಗೆ–ಜನರ ತಲೆಗೆ
ಹಟ್ಟಿಯ ಹಬ್ಬ–ದೀಪಾವಳಿ
ನಾಗಮುರ–ನಾಗರ ಹೆಡೆಯನ್ನು ಹೋಲುವ ಕಿವಿಗೆ ಹಾಕಿಕೊಳ್ಳುವ ಒಂದು ರೀತಿಯ ಆಭರಣ.
ಕ್ಯಾರಾ–ಪಾದರಕ್ಷೆ
ನಾಗುವಲ್ಲಿ–ಮದುವೆಯ

ಕನ್ನಡ ಜನಪದ ಕಾವ್ಯರಾಶಿಯಲ್ಲಿ ತ್ಯಾಗ-ಬಲಿದಾನಗಳ ಕಥೆಗಳೇ ಹೆಚ್ಚು. ಸಮಾಜದ ಒಳಿತಿಗಾಗಿ, ಲೋಕಕಲ್ಯಾಣಾರ್ಥವಾಗಿ ತಮ್ಮ ಅಮೂಲ್ಯ ಜೀವವನ್ನೇ ಸಮರ್ಪಿಸಿದವರ ಬಗೆಬಗೆಯ ಕಥೆಗಳು ನಮ್ಮಲ್ಲಿ ಲಭ್ಯವಾಗುತ್ತವೆ. ಕೆಲವು ಐತಿಹ್ಯಗಳ ರೂಪದಲ್ಲಿ ಮತ್ತೆ ಕೆಲವು ಕಥನಕಾವ್ಯಗಳ ರೂಪದಲ್ಲಿ ಅಲ್ಲಲ್ಲಿ ಕಂಡುಬಂದಿವೆ. ಕೆರೆಗೆ ಆತ್ಮಾರ್ಪಣೆ ಮಾಡಿಕೊಂಡ ಮುಗ್ಧಬಾಲೆಯರ ಕಥೆಗಳು ಸಾಮಾನ್ಯವಾಗಿ ಎಲ್ಲ ದೊಡ್ಡ ಕೆರೆಗಳಿಗೂ ಸಂಬಂಧಪಟ್ಟಂತೆ ತೋರಿಬರುತ್ತವೆ. 'ಹೊನ್ನಮ್ಮ' ಅಥವಾ 'ಕೆಂಚಮ್ಮ' ಎಂಬ ಹೆಸರಿನ ಕಥಾನಾಯಕಿಯರು ವಿವಿಧ ಸನ್ನಿವೇಶಗಳ ಒತ್ತಡದಿಂದ ತನ್ನ ಪ್ರೀತಿಯ ವ್ಯಕ್ತಿಗಳನ್ನೆಲ್ಲ ತೊರೆದು ಗಂಗೆಯ ಪಾಲಾಗಿ ಒಡೆದುಹೋಗುವ ಕೆರೆಯನ್ನು ಉಳಿಸಿದ ವಿಶಿಷ್ಟ ಆಶಯದ ಹಿನ್ನೆಲೆಯಲ್ಲಿ ಈ ಕಥನ ಕಾವ್ಯಗಳು ರಚನೆಯಾಗಿವೆ. ಇವು ಬಹು ಮಟ್ಟಿಗೆ ಕಾಲ್ಪನಿಕ ಕಥೆಗಳಾಗಿರದೆ, ನಿಜವಾಗಿ ನಡೆದ ಘಟನೆಗಳೇ ಆಗಿದ್ದವು ಎಂಬುದಕ್ಕೆ ಸಾಕಷ್ಟು ಆಧಾರಗಳೂ ಲಭ್ಯವಾಗುತ್ತವೆ.

'ಮದಗದ ಕೆಂಚಮ್ಮ' ಕಾವ್ಯವನ್ನು ಸಂಗ್ರಹಿಸಿ, ಸಂಪಾದಿಸಿ ಕೊಟ್ಟಿರುವ ಶ್ರೀ ಬಳ್ಳೆಕೆರೆ ಹನುಮಂತಪ್ಪ ಅವರು ಈಗಾಗಲೇ ಜಾನಪದ ಕ್ಷೇತ್ರದಲ್ಲಿ ಸಾಕಷ್ಟು ಕೆಲಸ ಮಾಡಿದ್ದಾರೆ. ಪ್ರಕೃತ ಕಾವ್ಯದ ಸಂಗ್ರಹಕ್ಕಾಗಿ ಅವರು ಅಪಾರ ಶ್ರಮಪಟ್ಟಿದ್ದಾರೆ. ಈ ಕಾವ್ಯದ ಅಭ್ಯಾಸಕ್ಕೆ ಬೇಕಾಗುವ ಎಲ್ಲ ಪೂರಕ ಸಾಮಗ್ರಿಗಳನ್ನೂ ಅವರು ಟಿಪ್ಪಣಿಗಳ ರೂಪದಲ್ಲಿ ಒದಗಿಸಿದ್ದಾರೆ. ಇಂಥ ಅಚ್ಚುಕಟ್ಟಾದ ಸಂಪಾದನ ಕಾರ್ಯಕ್ಕಾಗಿ ಅವರು ಅಭಿನಂದನೆಗೆ ಪಾತ್ರರಾಗಿದ್ದಾರೆ.

—ಜೀ. ಶಂ. ಪರಮಶಿವಯ್ಯ

(ಮುನ್ನುಡಿಯಿಂದ)

---

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು